ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಹುಮನಾಬಾದ ತಾಲ್ಲೂಕಿನ ಪಾತ್ರ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ
ಎಂ.ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಶೋಧನಾ ನಿಬಂಧ

ಚರಿತ್ರೆ ಅಧ್ಯಯನ ವಿಭಾಗ,
[illegible]ನ್ನಡ ವಿಶ್ವ ವಿದ್ಯಾಲಯ, ಹಂಪಿ ವಿದ್ಯಾರಣ್ಯ-೫೮೩೨೭೬

೨೦೦೯

ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಹುಮನಾಬಾದ ತಾಲ್ಲೂಕಿನ ಪಾತ್ರ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ
ಎಂ.ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂ:- ರಾಘವೇಂದ್ರ ಸಂಗಪ್ಪ
ಮಾ:- ಎಸ್.ಎಸ್. ಸೂರ್ಯೋದಯ

ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಶೋಧನಾ ನಿಬಂಧ

ಚರಿತ್ರೆ ಅಧ್ಯಯನ ವಿಭಾಗ,
ಕನ್ನಡ ವಿಶ್ವ ವಿದ್ಯಾಲಯ, ಹಂಪಿ ವಿದ್ಯಾರಣ್ಯ-೫೮೩೨೭೬

೨೦೦೯

ಪರಿವಿಡಿ

ಅಧ್ಯಾಯ-೧

ಪ್ರಸ್ತಾವನೆ : ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧. ಪ್ರಸ್ತಾವನೆ :-

ಜಗತ್ತಿನಲ್ಲಿ ಭಾರತವು ಅಖಂಡತ್ವವನ್ನು ಹೊಂದಿದ ರಾಷ್ಟ್ರ. ಇದು ಪ್ರಪಂಚದಲ್ಲಿರುವ ಅನೇಕ ಸಂಸ್ಕೃತಿಗಳನ್ನು ಮೀರುವಂತಹ ಹಾಗೂ ಸುಂದರ ಸಂಸ್ಕೃತಿಯನ್ನು ಹೊಂದಿದ ದೇಶವಾಗಿದೆ. ಅನೇಕ ಮಹಾನ ಮೇಧಾವಿಗಳು ಜನ್ಮಕೊಟ್ಟ ಈ ಭರತ ನಾಡು ಎಷ್ಟು ರಾಜ ಮನೆತನಗಳನ್ನು ಕಂಡಿದಿಯೋ, ಅದನ್ನು ಅರಿಯುವುದು ಕಷ್ಟ ಸಾಧ್ಯವಾಗಿದೆ. ಸ್ಥಳಿಯ ರಾಜ ಮನೆತನಗಳನ್ನು ಕಂಡಂತೆ ಹೊರ ರಾಷ್ಟ್ರದವರ ಆಳ್ವಿಕೆಗೆ ಒಳಪಟ್ಟು ರಕ್ತದ ಹೊಳೆ ಹರಿಯಲು ಇವೆಲ್ಲವನ್ನು ಮರೆಯಲೆಂಬಂತೆ ತಮ್ಮ ಒಡಲಲ್ಲಿ ಅನೇಕ ಸುಂದರ ಗುಣಗಳನ್ನು ಹೊಂದಿದೆ.

ಸುಂದರ ಪರಿಸರ ಹಿಮಗಿರಿಗಳು ನದಿ-ಸರೋವರಗಳು, ಬೆಟ್ಟ-ಗುಡ್ಡಗಳು, ಪ್ರಾಣಿ-ಪಕ್ಷಿಗಳು ಸ್ವರ್ಗದ ಛಾಯೆ ಹರಡಿದಂತಿವೆ. ಇಂತಹ ದೇಶ ಹುಟ್ಟಿದಂದಿನಿಂದಲೂ ಅನೇಕ ರಾಜಕೀಯ ತಿರುವುಗಳನ್ನು ಕಂಡು ಕೊನೆಗೆ ಬ್ರಿಟೀಷರ ಆಳ್ವಿಕೆಯಲ್ಲಿ ತತ್ತರಿಸಿ ೧೫-೦೮-೧೯೪೭ ರಂದು ಅವರ ಬಲಿಷ್ಠ ಅಧಿಕಾರಶಾಹಿ ಸಂಕೋಲೆಗಳಿಂದ ಮುಕ್ತಿ ಪಡೆದರು ಸಹ ಹೈದ್ರಾಬಾದ ಕರ್ನಾಟಕ ಪ್ರದೇಶವು ನಿಜಾಮನ ಆಳ್ವಿಕೆಯಿಂದ ಮುಕ್ತವಾಗಿರಲಿಲ್ಲ.

> "ಅಂದು ಭಾರತದ ಬಾನಿನಲ್ಲಿ ಸ್ವಾತಂತ್ರ್ಯ
> ಸೂರ್ಯನು ಉದಯಿಸಿದ ಸುದಿನ
> ಭಾರತೀಯ ಹೆಮ್ಮೆಯ ಗೆಲುವಿನ
> ನಲುವಿನ ಸಾಕಾರಕ್ಕೆ ಸಮೃದ್ಧ ಫಲ ನೀಡುವ
> ಅಮೃತ ಗಳಿಗೆಯನ್ನು ಇತಿಹಾಸದ
> ಪುಟ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ
> ಬರೆದಿಡುವ ನೆನಪಿನ ಪವಿತ್ರ ದಿನ"[೧]

೨. ಸ್ವಾತಂತ್ರ್ಯ ಎಂದರೇನು ?

ಭರತ ಭೂಮಿಯ ಇತಿಹಾಸದ ಅವಲೋಕನ ಮಾಡಿದಾಗ ಕ್ಷಣಾರ್ಧದಲ್ಲಿ ಎದ್ದು ಕಾಣುವಂತಹ ಚರಿತ್ರಾರ್ಹ ಸಂಗತಿಯೇನೆಂದರೆ "ಸ್ವಾತಂತ್ರ್ಯಕ್ಕಾಗಿ ಹೋರಾಟ, ಪರಕೀಯರು ಬಂದು ನೆಲೆಯೂರಿ ನಿಂತಾಗ ನಾಡಿಗರ ಮೇಲೆ ತಮ್ಮ ಆಳ್ವಿಕೆ

ಹೇರಿದಾಗ ಎದ್ದಂತಹ ಪ್ರತಿಭಟನೆಯ ನಿರಂತರ ಹೋರಾಟವೇ ಸ್ವಾತಂತ್ರ್ಯದ ಸಮರ"

ಸ್ವಾತಂತ್ರ್ಯ ಎಂದರೆ ಬ್ರಿಟಿಷರೊಡನೆ ಮತ್ತು ನಿಜಾಮನೊಡನೆ ಹೋರಾಡುವುದು ಎಂದರ್ಥವಲ್ಲ. ಭಾರತದ ಸಂಪೂರ್ಣ ಪ್ರಗತಿಯೇ ಸ್ವಾತಂತ್ರ್ಯದ ಸತ್ಯಸಾರ ಎಂದು ಹೇಳಬಹುದು. ಸ್ವಾತಂತ್ರ್ಯ ಹೋರಾಟವೆಂದರೆ ಒಬ್ಬ ವ್ಯಕ್ತಿ ತಮ್ಮ ವೈಯಕ್ತಿಕ ಲಾಭಕ್ಕಾಗಿ ಹೋರಾಡಿದರೆ ಆತ ಹೋರಾಟಗಾರನಾಗಲಾರ. ಆತ ತನ್ನ ಸ್ವಭಾವವಷ್ಟೇ ಅಲ್ಲದೆ ತತ್ವ ಮತ್ತು ನಿಷ್ಠೆಗಳಿಗೆ ಹೋರಾಡಿ ಯಾವ ತ್ಯಾಗಕ್ಕೂ ಸಿದ್ಧನಾದರೆ ಆತನನ್ನು ಕಾಲಮಾನ ಪರಿಸ್ಥಿತಿಗಳನ್ನು ಅನುಲಕ್ಷಿಸಿ ಹೋರಾಟಗಾರನೆಂದು ಕರೆಯಬಹುದು[೨] ಎಂದು ಡಾ. ಸರೋಜನಿ ಶಿಂತ್ರಿ ಹೇಳಿದ್ದಾರೆ. ವರ್ಗಭೇದಗಳಿಲ್ಲದ ಆದರ್ಶ ಸಮಾಜವೇ ನಮ್ಮ ಗುರಿ. ಈ ಸ್ವಾತಂತ್ರ್ಯ ಎಂಬ ಗುರಿ ಸಾಧನೆಗಾಗಿ ನಾವು ಶ್ರಮಿಸಬೇಕು. ಸ್ವಾತಂತ್ರ್ಯ ಹೋರಾಟದ ಪರಮ ಉದ್ದೇಶವಾಗಿದೆ [೩] ಎಂದು ಸ್ವಾತಂತ್ರ್ಯ ಚಳುವಳಿಯ ಮಹಾನ ನೇತಾರ ಗಾಂಧಿಜೀಯವರು ಅನುಮೋದಿಸಿದ್ದಾರೆ.

೩. ಸ್ವಾತಂತ್ರ್ಯದ ಅರ್ಥ ಮತ್ತು ವ್ಯಾಖ್ಯಾನಗಳು :-

ಸ್ವಾತಂತ್ರ್ಯ ಎಂದರೆ ಲೈಸನ್ಸ್ ಎಂಬ ತಪ್ಪು ಅರ್ಥವನ್ನು ಕಲ್ಪಿಸಿದ್ದೇವೆ. ಈ ಅರ್ಥ ಕಲ್ಪಿಸಿಯೇ ನಾವು ಹಾಳಾಗುತ್ತೇವೆ. 'ಸ್ವಾತಂತ್ರ್ಯ' ಎಂಬ ಶಬ್ದದ ನಿಜವಾದ ಅರ್ಥವನ್ನು ಸರಿಯಾದ ಹಿನ್ನಲೆಯಲ್ಲಿ ಕೊಡಬೇಕು. ಪ್ರಜೆಗಳು ಯಾವ ಸಂದರ್ಭದಲ್ಲಿಯೂ ವಿವೇಕ ಕಳೆದುಕೊಳ್ಳದೇ ಸಂಯಮದಿಂದ ವರ್ತಿಸಿ ದೇಶದ ಐಕ್ಯತೆಗೆ ಧಕ್ಕೆ ಬರದಂತೆ ದುಡಿಯಬೇಕು. ಇದೇ ಸ್ವಾತಂತ್ರ್ಯ ಎಂಬ ಪದದ ಗೂಡಾರ್ಥ. ಸ್ವಾತಂತ್ರ್ಯ ಅಮೂಲ್ಯವಾದುದೆಂಬುವುದು ನಿಜ. ಆದ್ದರಿಂದಲೇ ಅದಕ್ಕೆ ಮಿತಿ ಇರಬೇಕು ಎನ್ನುವರು.

ಸಂಯಮವಿಲ್ಲದ ಸ್ವಾತಂತ್ರ್ಯಕ್ಕೆ ಯಾವ ಬೆಲೆಯು ಇಲ್ಲ. ಸಂಯಮ ಸ್ವಾತಂತ್ರ್ಯ ಎಂಬ ಕಲ್ಪನೆಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಸಂಯಮವಿಲ್ಲದ ಸ್ವಾತಂತ್ರ್ಯ ವಿಗ್ರಹವಿಲ್ಲದ ಗುಡಿಯಂತೆ ಎಂದು ಕರೆಯಬಹುದು.

ಅ) ಸ್ವಾತಂತ್ರ್ಯ :

ಸ್ವಸ್ಯ-ತಂತ್ರ-ಸ್ವಾತಂತ್ರ ತನ್ನ ತಂತ್ರದಲ್ಲೇ ಇರುವವ ಅಂದರೆ ತಮ್ಮ ಅಧೀನದಲ್ಲೇ ಇರುವ ಅಂದರೆ ಪರರ ಅಧಿನದಲ್ಲಿರದವನೇ ಸ್ವಾತಂತ್ರ್ಯ ಅವನು ಅನುಭವಿಸುವ ಈ ಸ್ಥಿತಿಯೇ ಸ್ವಾತಂತ್ರ್ಯ. ಹೀಗೆ ಸ್ವಾತಂತ್ರ್ಯ ಎಂಬುದೊಂದು ಸ್ಥಿತಿ ವಿಶೇಷ ಇಲ್ಲಿ ಸ್ವಶಕ್ತಿ ಸ್ವಾಭಾವಿಕ ಪ್ರವೃತ್ತಿಗಳ ವರ್ಧನೆಗೆ ಯಾವುದೇ ನಿಬಂಧ೯

ಇರುವುದಿಲ್ಲ. ಸ್ವರೂಪ, ಪ್ರಮಿತಿ ಪ್ರವೃತ್ತಿ, ಸತ್ ತ್ರೈವಿದ್ಯೆ ಪರ ಅನಪೇಕ್ಷಿತ್ವಂ ಸ್ವಾತಂತ್ರ್ಯ ಪರ ಅಪೇಕ್ಷಿತ್ವಂ ಅಸ್ವಾತಂತ್ರ್ಯಂ ಎನ್ನುತ್ತಾರೆ, ಮಧ್ವಾಚಾರ್ಯರು[9]. ತತ್ವ ಸಂಖ್ಯಾನದಲ್ಲಿ ತನ್ನ ಸ್ವರೂಪದ ಪರಿಮಿತ ಮತ್ತು ಪ್ರವೃತ್ತಿ ಇವು ಮೂರನ್ನು ತಿಳಿದುಕೊಂಡು ಬೇರೆಯವರಿಂದ ಏನನ್ನೂ ಅಪೇಕ್ಷಿಸದೇ ಇರುವುದೇ ಸ್ವಾತಂತ್ರ್ಯ ಪರದಿಂದ ಬಯಸುವುದೇ ಪರತಂತ್ರ್ಯ ಎಂದು ಬಣ್ಣಿಸಿದ್ದಾರೆ.

ಸ್ವಾತಂತ್ರ್ಯವೆಂದರೆ ಬದುಕಿನ ಕೆಲ ಸೌಲಭ್ಯಗಳು ಎಂದು ವರ್ಣಿಸಲಾ - ಗುತ್ತದೆ. ವೇದವ್ಯಾಸರು ತಮ್ಮ ಪುರಾಣದಲ್ಲಿ ಪಾಣಿನಿ ತನ್ನ ವ್ಯಾಕರಣದಲ್ಲಿ ಸ್ವಾತಂತ್ರ್ಯ ಕುರಿತು ಸಾಕಷ್ಟು ಹೇಳಿದ್ದಾರೆ.

ಆ) ವ್ಯಾಖ್ಯೆಗಳು:-

ಸ್ವಾತಂತ್ರ್ಯದ ಕುರಿತು ಹಲವಾರು ತತ್ವಜ್ಞಾನಿಗಳು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನ ನೀಡಿದ್ದಾರೆ. ಅದರಲ್ಲಿ ಕೆಲವುಗಳನ್ನು ಇಲ್ಲ ಕೊಡಲಾಗಿದೆ.

ಇಮ್ಯಾನುಯಲ್ ಕ್ಯಾಂಟ್ ಕವೂರ ಎಂಬುವವರು ತಮ್ಮ 'ಫಿಲಾಸಫಿ ಆಫ್ ಲಾ' ಎಂಬ ಕೃತಿಯಲ್ಲಿ ಸ್ವಾತಂತ್ರ್ಯ ಎಂಬ ಪದವನ್ನು ಹೀಗೆ ವಿವರಿಸಿದ್ದಾರೆ. "ಸ್ವಾತಂತ್ರ್ಯವೆಂದರೆ ಇನ್ನೊಬ್ಬನ ಚಿತ್ತದ ಒತ್ತಾಯಕ್ಕೆ ನಿಲುಕದ, ಸಾಮಾನ್ಯ ಸ್ವಾತಂತ್ರ್ಯ ಅನುಭವಕ್ಕೆ ಅಡಿಯಾಗದ ರೀತಿಯಲ್ಲಿ ನಿರಂತರವಾಗಿ ನಡೆದುಕೊಂಡು ಹೋಗುವುದು"

ಲೈಸನ್‌ಬ್ರೈಸನ್ ಎಂಬಾತ 'ಸಾಯನ್ಸ್ ಆ್ಯಂಡ ಫ್ರೀಡಂ' ಎಂಬ ಕೃತಿಯಲ್ಲಿ "ತಮ್ಮ ಜೀವನ ವಿಧಾನದಲ್ಲಿ ವೈವಿಧ್ಯ ತಂದುಕೊಂಡು ಮಾರ್ಪಡಿಸಿಕೊಳ್ಳಲು ಮನುಷ್ಯನಿಗಿರುವ ನಾನಾ ಅವಕಾಶಗಳಲ್ಲಿ ಉತ್ತಮವೆನಿಸಿದ್ದನ್ನು ಆಯ್ದುಕೊಳ್ಳುವುದು. ಅವನು ಸ್ವತಂತ್ರನು ಈ ಆಯ್ಕೆಗಿರುವ ಅವಕಾಶದ ಫಲಿತಾಂಶವೆ ಸ್ವಾತಂತ್ರ್ಯ"

ಸ್ವಾತ್ಮ ಏಕಸಧಾಧ್ವರ ಹಾಗೂ ಸ್ವಾನುಭವ ಸಂಪತ್ತಿನ ಮನುಷ್ಯನು ಪರಮ ಪ್ರಮಾಣದಲ್ಲಿ ಸಮಾಜಕ್ಕೆ ಉಪಕಾರಿಯಾಗಬಲ್ಲನು. ಅವನಿಗೆಈ ಅವಕಾಶ ಕೊಡತಕ್ಕದ್ದು ಸ್ವಾತಂತ್ರ್ಯ ಎಂದು "ವಾಲ್ಟ್‌ಡಬ್ಲ್ಯು ಹ್ಯಾಮಿಲ್ಟನ್" ಎಂಬಾತ ವಿವರಿಸಿದ್ದಾನೆ. ಹೇರಾಲ್ಡ್ ಲಾಸ್ಕಿ : ಎಂಬ ಆಂಲ್ಕ ತತ್ವಜ್ಞಾನಿ ಸ್ವಾತಂತ್ರ್ಯದ ಮೂರು ಲಕ್ಷಣಗಳನ್ನು ವಿವರಿಸುತ್ತಾನೆ.

- ವ್ಯಕ್ತಿತ್ವದಲ್ಲಿ ಸಮರಸ ಪೂರ್ಣವಾದ ಸ್ಥಿತಿ.
- ಪ್ರಾತಿಬಂಧಕವಿಲ್ಲದಿರುವುದು.
- ಸ್ವಂತ ಇಚ್ಛೆ ಅಥವಾ ಸಂಕಲ್ಪದಂತೆ ಕಾರ್ಯಾರಂಭ ಮಾಡುವ ಅವಕಾಶ.

ಮನುಷ್ಯನು ತಮ್ಮ ಕಾರ್ಯಚಟುವಕೆಗಳನ್ನು ತನ್ನ ಜೀವನ ವಿಧಾನ ಮತ್ತು ತಮ್ಮ ಸುತ್ತಮುತ್ತಲೂ ಆವರಣ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಇಟ್ಟುಕೊಂಡಿರುವ ಮನೋಭಾವನೆ ಸ್ವಾತಂತ್ರ್ಯ ಎಂಬುದು ಅನೇಕ ಲೇಖಕರ ಅಭಿಪ್ರಾಯವಾಗಿದೆ.

೪. ಸ್ವಾತಂತ್ರ್ಯ ಚಳುವಳಿಯ ನೈತಿಕ ಸಿದ್ಧಾಂತ :

ಯಾವುದೇ ಚಳುವಳಿ ಜನಸಮೂಹದಲ್ಲಿ ಬೆಳದು ಅವರ ಅಶೋತ್ತರಗಳಿಗೆ ಸ್ಪಂಧಿಸಬೇಕಾದರೆ ಅದಕ್ಕೆ ತನ್ನದೇ ಆದ ನೈತಿಕ ತತ್ವದ ನೆಲೆಗಳು ಅವಶ್ಯಕವಾಗಿರಬೇಕು. ಈ ದೃಷ್ಠಿಯಲ್ಲಿ ಸ್ವಾತಂತ್ರ್ಯ ಚಳುವಳಿಯು ನೀತಿನಿಯಮಗಳ ತತ್ವ ಎಂಬ ಸಿದ್ಧಾಂತದ ಅಸ್ತ್ರದ ಗೋಡೆಯನ್ನು ಕಟ್ಟಿಕೊಂಡು ಅದಕ್ಕೆ ಚಾಲನೆ ನೀಡಿದ್ದಾರೆ. ನೈತಿಕ ಸಿದ್ಧಾಂತದ ಅವತರಣಿಕೆಗಳನ್ನು ನೋಡೋಣ.

ಅ) ಅಹಿಂಸೆ

ಅಹಿಂಸೆ ಎಂದರೆ ಹೊಡೆಯದೆ, ಬಡೆಯದೆ ಇರುವದಷ್ಟೆ ಅಲ್ಲ. ಇತರರಿಗೆ ಯಾವ ವಿಧದಲ್ಲಿ ನೋವುಂಟು ಮಾಡಿದರೂ ಅದು ಹಿಂಸೆ. ಶತ್ರುಗಳಾಗಲಿ ಮಿತ್ರನಾಗಲಿ ಯಾರಿಗೂ ನೋಯಿಸದೇ ಶತ್ರುವಿನ ಮನಸ್ಸನ್ನು ಗೆದ್ದುಕೊಂಡರೆ ಅದು ನಿಜವಾದ ಅಹಿಂಸೆ. ಹೇಡಿ ಅಹಿಂಸಾವೃತ್ತಿಯಾಗಲಾರ ಮಹಾಪೌರುಷ ಇದ್ದಲ್ಲಿ ಮಾತ್ರ ಅಹಿಂಸಾವ್ರತ ಸಾಧ್ಯ. ಹೇಡಿತನದಿಂದ ಹಿಂಸೆ ಎನ್ನುವುದಕ್ಕಿಂತ ಅಹಿಂಸೆಯೇ ನನಗೆ ಪ್ರಿಯ ಎಂದು ಮಹಾತ್ಮಾ ಗಾಂಧೀಜಿ ಅನುಕರಿಸಿದ್ದಾರೆ.

ಒಟ್ಟಾರೆ ಎಂತಹದೆ ಶಿಕ್ಷೆಸಿಕ್ಕರೂ ಅಹಿಂಸೆಗೆ ಇಳಿಯದಿರುವುದು. ಅಹಿಂಸೆಯಲ್ಲಿ ಮಹಾಶಕ್ತಿ ಅಡಗಿದೆ. ಅದು ವೀರರ ಲಕ್ಷಣ. ದುಷ್ಟ ಸಂಕಲ್ಪವು ಅದರ ಎದುರಿನಲ್ಲಿ ನಿಲ್ಲಲಾರದು. ಅಹಿಂಸೆಯ ಎದುರಿನಲ್ಲಿ ದ್ವೇಷ, ಕೋಪ ಇತ್ಯಾದಿ ದುರ್ಗುಣಗಳು ಮಾಯಾವಾಗುತ್ತವೆ ಎಂದು ಗ್ರಹಿಸುತ್ತಾರೆ.

ಆ) ಸತ್ಯ :

ಅಹಿಂಸೆ ಮತ್ತು ಸತ್ಯ ಇವುಗಳನ್ನು ಕುರಿತು ಹೇಳಬೇಕೆಂದರೆ ಅಹಿಂಸೆ, ಸತ್ಯ ಇವು ಅವಳಿ-ಜವಳಿ. ಒಂದನ್ನು ಬಿಟ್ಟು ಇನ್ನೊಂದು ಇರಲಾರವು. ಒಂದು ನಾಣ್ಯದ ಎರಡು ಮುಖಗಳಿದಂತೆ. ಸತ್ಯವು ಗುರಿಯಾದರೆ ಅಹಿಂಸೆ ಅದರ ಸಾಧನೆಯ ಮಾರ್ಗ. ಯಾವ ಪ್ರಾಣಿಯ ಮನಸ್ಸಿಗೂ, ಶರೀರಕ್ಕೂ ನೋವು ಮಾಡದೆ ಇರುವುದೆ ಅಹಿಂಸೆ ಎಂದು ಯಂಗ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟಿತವಾಗಿರುವುದನ್ನು ನೋಡಿದಾಗ ದೈಹಿಕವಾಗಿ, ಮಾನಸಿಕವಾಗಿ ಯಾರಿಗೂ ನೋವನ್ನುಂಟು ಮಾಡದೆ ಎಷ್ಟೇ ಕಂಡು ಬಂದರು ಸಹನೆ, ತಾಳ್ಮೆಯಿಂದ ವರ್ತಿಸುವ ಭಾವನೆ ಬರುತ್ತದೆ.

ಇ) ಸತ್ಯಾಗ್ರಹ :-

ಸತ್ಯಾಗ್ರಹವೆಂಬುದು ಮೂಲ ಸಂಸ್ಕೃತ ಶಬ್ದ ಸತ್ಯ+ಆಗ್ರಹ ಈ ಎರಡು ಪದಗಳ ಜೋಡಣೆಯಾಗುವುದರಿಂದ, ಸತ್ಯದ ನಿಜವಸ್ತು ಯಥಾರ್ಥ ವಸ್ತು, ಆಗ್ರಹವೆಂದರೆ ಗಟ್ಟಿಯಾಗಿ ಹಿಡಿಯುವುದು[೫] ಸತ್ಯಾಗ್ರಹವೆಂದರೆ ಸತ್ಯಕ್ಕೆ ಅಂಟಿಕೊಳ್ಳುವುದು ಸತ್ಯವನ್ನು ಹಟದಿಂದ ಹಿಂಬಾಲಿಸಿ ಗೆಲ್ಲುವುದು.

ಈ) ಸತ್ಯಾಗ್ರಹದ ಮೌಲಿಕತೆ :

ಒಂದು ಸಾಮಾಜಿಕ ಶಸ್ತ್ರ ಅನ್ಯಾಯ, ಅಸತ್ಯಗಳನ್ನು ಹೋಗಲಾಡಿಸಲು ಸಾಮೂಹಿಕವಾಗಿ ಅಹಿಂಸೆಯಿಂದ ಹೋರಾಡಲು ನಮ್ಮನ್ನು ಸಮರ್ಥ ಪಡಿಸುವ ವಿಶೇಷ ಸಾಧನ ಎಂದು ಭಾವಿಸಲಾಗುತ್ತದೆ. ಸತ್ಯಾಗ್ರಹ ಪದ್ದತಿಯನ್ನು ಈ ರೀತಿ ಉಪಯೋಗಿಸುವುದರಲ್ಲಿ ಗಾಂಧಿಜೀಯವರು ಮೊದಲಿಗರು ಮತ್ತು ಅದ್ವಿತೀಯರು ಎಂಬ ಬಗ್ಗೆ ಅಂತರಾಷ್ಟ್ರೀಯ ಕೀರ್ತಿ ಪಡೆದ ಹಲವಾರು ಪ್ರಸಿದ್ಧ ಲೇಖಕರ ಸಾಕ್ಷಿಯನ್ನು ಕೋಡಬಹುದಾಗಿದೆ. ಆದರೆ “ಒಂದು ಜನಾಂಗವು ಸತ್ಯಾಗ್ರಹದ ಒಂದು ಮಾರ್ಗವನ್ನು ಹಿಡಿದರೆ ಅದು ನೂತನ ಪಥದಲ್ಲಿ ಕಾಲಿಟ್ಟಂತಾಗುತ್ತದೆ” ವಣಾಂಡಬರ ಅರ್ಜಿ ಹಾಕಿ ಪ್ರಾರ್ಥಿಸಿಕೊಳ್ಳುವುದು ನಿರ್ಣಯಗಳನ್ನು ಮಾಡುವುದು ಇವೆಲ್ಲಾ ನಿಂತುಹೋಗುತ್ತವೆ. ಸತ್ಯಾಗ್ರಹದಿಂದಾಗುವಷ್ಟು ಪರಿಣಾಮ ಮತ್ತಾವ ವಿಧಾನದಿಂದಲೂ ರಾಜಕೀಯ, ಆರ್ಥಿಕ, ಸಾಮಾಜಿಕ ಅಭಿವೃದ್ಧಿ ಆಗಲಾರದು[೬] ಎಂಬ ಹೇಳಿಕೆಯನ್ನು ಕುರಿತು ವಿವೇಚಿಸಿದಾಗ ಸತ್ಯಾಗ್ರಹದ ಮೌಲ್ಯ ಗೊತ್ತಾಗುತ್ತದೆ.

ಉ) ಸತ್ಯಾಗ್ರಹದ ತಳಹದಿ :-

ಸತ್ಯಾಗ್ರಹವು ಒಂದು ಮನೋವೃತ್ತಿಯು ಹೌದು ಒಂದು ಆಚಾರ ಧರ್ಮವು ಹೌದು, ಸತ್ಯಾಗ್ರಹಕ್ಕೆ ಸತ್ಯವೇ ಏಕಮೇವಧ್ಯೇಯ ಅಹಿಂಸೆ ಇಲ್ಲವೇ ಪ್ರೇಮವು ಏಕಮೇವ ತಾತ್ಸಾದನೆ. ಪ್ರೇಮ ಮತ್ತು ಸತ್ಯ ಇವು ಒಂದು ನಾಣ್ಯದ ಎರಡು ಬದಿಗಳು ಇದ್ದಂತೆ. ಅವೆರಡರಲ್ಲಿ ಹೆಚ್ಚು ಮಹತ್ವವಾದದ್ದು ಯಾವುದು ಎಂದು ತಿಳದರೆ ಸತ್ಯಕ್ಕೆ ಪ್ರಥಮ ಸ್ಥಾನ ಎಂದು ನಿಸಂಶಯವಾಗಿ ಸತ್ಯಾಗ್ರಹಿ ಉತ್ತರಿಸುವನು[೭]. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅಹಿಂಸಾ ಮಾರ್ಗವಾಗಿ ನಡೆದ ಸತ್ಯಾಗ್ರಹಕ್ಕೆ ಒಂದು ಮಹತ್ತರವಾದ ಸ್ಥಾನವಿದೆ. ಸತ್ಯಾಗ್ರಹಿ ವಹಿಸುವ ಪಾತ್ರವು ಅದ್ವಿತೀಯ ಸತ್ಯಾಗ್ರಹದ ಜನಕ ಮತ್ತು ಪುರಸ್ಕೃತ ಗಾಂಧಿಜೀ ಎಂದು ಹೇಳಿದ ಮೇಲೆ ಹೆಚ್ಚಿಗೇನು ಅನುಕರಣೀಯ ಆಗಲಾರದು.

ದಕ್ಷಿಣ ಆಫ್ರಿಕೆಯಲ್ಲಿ ಮೂಡಿ ಭಾರತದಲ್ಲಿ ಮೈತುಂಬಿಕೊಂಡು ಮರೆಯಿತು ಸತ್ಯಾಗ್ರಹ, ಸತ್ಯಾಗ್ರಹವು ಗಾಂಧಿಜೀಯ ಏಕಮೇವ ಆಯುಧವಾಗಿದೆ. ಸತ್ಯ

ಅಹಿಂಸೆಗಳಲ್ಲಿ ಸಂಪೂರ್ಣ ನಂಬಿಕೆ ಇದ್ದವರಿಗೇನು ಸತ್ಯಾಗ್ರಹವು ಆಚರಣೆಗೆ ಸುಲಭವು. ಗಾಂಧಿಜೀ ಅನುಯಾಯಿಗಳೆಲ್ಲ ಸತ್ಯ ಮತ್ತು ಅಹಿಂಸೆಗಳಲ್ಲಿ ಆತ್ಮವಿಶ್ವಾಸ ಇಟ್ಟವರು. ಸತ್ಯಾಗ್ರಹದಲ್ಲಿಯೂ ಪೂರ್ಣ ನಂಬಿಕೆಯನ್ನು ಹೊಂದಿದರು. ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿಯು ಈ ಮೇಲಿನ ತತ್ವಗಳನ್ನು ಅಳವಡಿಸಿಕೊಂಡು ನಡೆಸಿದರೆ, ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಈ ಮೇಲಿನ ತತ್ವಗಳಿಗೆ ವಿರುದ್ಧವಾದಂತಹ ಹಿಂಸಾತ್ಮಕ ಚಳುವಳಿಗಳು ನಡೆದಿವೆ ಎಂದು ಹೇಳಬಹುದು. ಸ್ವಾತಂತ್ರ್ಯ ಚಳುವಳಿಗಾರರು ಸ್ವಾತಂತ್ರ್ಯ ತತ್ವಗಳನ್ನು ಹೊಂದಿದ ಹಾಗೆ ವಿಶೇಷ ಸ್ವಾತಂತ್ರ್ಯದ ವೈಶಿಷ್ಟ್ಯಗಳನ್ನು ಹೊಂದಿದರು. ಅವುಗಳು ಈ ಕೆಳಗಿನಂತಿವೆ.

೧) ಪ್ರಾರ್ಥನೆ : –

ಪ್ರಾರ್ಥನೆ ಎಂದರೆ ಉಚ್ಚ ಆಧ್ಯಾತ್ಮಿಕ ಶಕ್ತಿಗಳ ಅಹ್ವಾನ ಮಾಡಿ ತನ್ನನ್ನು ಶುದ್ಧಿಕರಿಸಿ ಆ ಶಕ್ತಿಗಳಿಗೆ ಇಲ್ಲವೆ ಸತ್ಯ ಪ್ರೇಮ ಮುಂತಾದ ಆಧ್ಯಾತ್ಮಿಕ ಧ್ಯೇಯಗಳಿಗೆ ಆತ್ಮ ಸಮರ್ಪಣ ಮಾಡುವುದು.

೨) ಪ್ರತಿಜ್ಞೆ:–

ಇಂಥವುಗಳನ್ನು ಮಾಡುವೆನು ಇಲ್ಲವೆ ಬೇಡುವೆನು ಎಂದು ದೇವರನ್ನು ಅಥವಾ ಸತ್ಯವನ್ನು ಸಾಕ್ಷಿಇಟ್ಟು ಪ್ರಕಟ ರೀತಿಯಿಂದ ಸಾರುವುದು.

೩) ಹರತಾಳ :–

ಹತಾಳವೆಂದರೆ ಒಂದು ತಾತ್ಪೂರ್ತಿಕ ವ್ಯವಹಾರದ ತಡೆಹಿಡಿಯುವಿಕೆ.

೪) ಉಪವಾಸ :–

ಆಹಾರ ಮತ್ತು ನೀರು ಸೇವಿಸದೆ ಇರುವುದು[6]

೫) ಅಸಹಕಾರ :–

ಯಾವುದೊಂದು ಕೆಡಕಿನೊಡನೆ ಅಥವಾ ಅನ್ಯಾಯದೊಡನೆ ಇಲ್ಲವೆ ಅವುಗಳ ಬಗ್ಗೆ ಹೊಣೆಯಾದ ವ್ಯಕ್ತಿ ಅಥವಾ ಸಂಸ್ಥೆಗಳೊಡನೆ, ಸ್ವಚ್ಚೆಯಿಂದ ಯಾವುದೇ ಬಗೆಯ ಸಹಕಾರ ಮಾಡದೇ ಇರುವುದು. ಈಗಾಗಲೇ ಸಹಾಯ ಮಾಡುತ್ತಿದ್ದರೆ ಅದನ್ನು ಸಂಪೂರ್ಣವಾಗಿ ನಿಲ್ಲಿಸಿ ಬಿಡುವುದು[7].

೬) ಕೈಪಿಡಿ :-

ಹೋರಾಟ ಕುರಿತಾದ ಗೀತೆಗಳ ಮತ್ತು ವಿವರಣೆಗಳ ಕೈಪಿಡಿ, ಮುದ್ರಿಸಿ ಹಂಚುವುದು. ಹೀಗೆ ಪ್ರಭಾತಫೇರಿ, ಕರ ಪತ್ರ ಹಂಚುವುದು ಭಾಷಣ ಮಾಡುವುದು ಮುಂತಾದ ಜಾಗೃತಿಯ ಚಟುವಟಿಕೆಗಳು ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿವುದು.

ಅಧ್ಯಯನದ ಉದ್ದೇಶ :

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಸಂಖ್ಯೆ ದೇಶ ಭಕ್ತರು, ಅನೇಕ ವಿಧಗಳಲ್ಲಿ ಕಷ್ಟ ಕಾರ್ಪಣ್ಯ ಅನುಭವಿಸಿರುತ್ತಾರೆ. ಜೈಲುವಾಸ, ಪ್ರಾಣತ್ಯಾಗ, ಹುತಾತ್ಮತೆ, ಮುಂತಾದ ಕಷ್ಟ ಕಾರ್ಯಗಳನ್ನು ಅನುಭವಿಸಿರುವುದನ್ನು ಅರಿಯಬಹುದಾಗಿದೆ. ಹೋರಾಟದಲ್ಲಿ ಪಾಲ್ಗೊಂಡು ದೊಡ್ಡವರಾದವರ ದೇಶಭಕ್ತಿ, ತ್ಯಾಗ ಇವು ವ್ಯಾಪಕವಾಗಿ ಪ್ರಸಿದ್ಧತೆಯನ್ನು ಪಡೆದಿರುತ್ತವೆ. ಹೀಗಾಗಿ ಆಗಬೇಕಾದದ್ದು ಆದರೆ ದೊರೆಯ ಬೇಕಾದುದ್ದು ದೊರೆತರೆ ಇಲ್ಲಿ ಮಹಾನ ಯೋಧರುಗಳ ಹೆಗ್ಗಳಿಕೆ ಮಾತ್ರ ಕಾಣಿಸುತ್ತದೆ. ಆದರೆ ಶ್ರೀ ಸಾಮಾನ್ಯರು ಸಲ್ಲಿಸಿದ ಪ್ರಾಣತ್ಯಾಗ, ಬಲಿದಾನ, ಅಳಿಲು ಸೇವೆ, ಬೆಳಕಿಗೆ ಬರದೆ ಹೋಗುತ್ತದೆ. ಅವರ ಪಾತ್ರವೇನು ಕಡಿಮೆಯೇನಲ್ಲ. ಹೋರಾಟದಲ್ಲಿ ಭಾಗವಹಿಸಿ ಸುರಂಗವಾಸ, ನರಕವಾಸ ಅನುಭವಿಸಿದವರ ಹೆಸರು ಬೆಳಕಿಗೆ ತರುವುದೇ ಈ ಅಧ್ಯಯನದ ಪ್ರಥಮ ಉದ್ದೇಶ.

ಸ್ವಾತಂತ್ರ್ಯ ನಮಗೆ ಲಭಿಸಿದುದು ಇತಿಹಾಸಕಾರರು ಇಲ್ಲಿಯವರೆಗೂ ಗುರುತಿಸುವ ಹಿರಿಯ ನಾಯಕರಿಂದ ಮಾತ್ರವಲ್ಲ, ಇತಿಹಾಸದ ಪದರಿನಲ್ಲಿ ಐಕ್ಯವಾಗಿ ಹೋಗಿರುವ ನೂರಾರೂ, ಸಾವಿರಾರೂ ಹೊರಾಟಗಾರರ ಹುತಾತ್ಮರ ಹುಮ್ಮಸ್ಸು ಮತ್ತು ಸಾಹದ ಫಲ ೧೯೪೨ರ ಭಾರತ ಬಿಟ್ಟು ತೊಲಗಿ ಆಂದೊಲನ ಸಾಂಕೇತಿಕ ಮಾತ್ರ, ಅದರ ಕಾರ್ಯ ಕ್ಷೇತ್ರ ಕರ್ನಾಟಕದಲ್ಲಿನ ಹಲವಾರು ಬಂಡಾಯಗಳಂತೆ, ೧೮೫೭ರಿಂದ ೧೯೪೮ರಲ್ಲಿ ಹುಮನಾಬಾದ ತಾಲ್ಲೂಕಿನಲ್ಲಿಯು ನಿಜವಾಗಿ ಪ್ರಬಲವಾಗಿತ್ತು. ಕರ್ನಾಟಕದ ಇನ್ನಿತರ ದಂಗೆಗಳಾದಂತಹ ಕಿತ್ತೂರಿನ ದಂಗೆ, ಸಿಂದಗಿ ದಂಗೆ, ಹಲಗಲಿ ದಂಗೆ, ಮುಂಡರಿಗಿಯಲ್ಲಿ ನಡೆದಂತಹ ಹೋರಾಟಗಳಿಗೆ ಕಡಿಮೆ ಎನಿಸದಂಹತ ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿ ಹುಮನಾಬಾದ ತಾಲ್ಲೂಕಿನಾದ್ಯಂತ ನಡೆದಿರುವುದು ಈ ಅಧ್ಯಯನದ ಮೂಲಕ ಹೊರ ಹಾಕಲಾಗಿದೆ. ಹುಮನಾಬಾದ ತಾಲ್ಲೂಕಿನಾದ್ಯಂತ ಜನರು ತನ್ಮೂಲಕ ಚಳುವಳಿಯಲ್ಲಿ ಭಾಗವಹಿಸಿ ಸತ್ಯ, ಅಹಿಂಸೆ, ತ್ಯಾಗ ಶಾಂತಿಯನ್ನು ಮೆರೆದು ಗಾಂಧಿಜೀಯನ್ನು ಮಹಾತ್ಮನನ್ನಾಗಿ ಮಾಡಿದರು. ಸುಭಾಷಚಂದ್ರ ಭೋಸರನ್ನು ವೀರ ಕ್ರಾಂತಿಕಾರಿಯನ್ನಾಗಿಸಿದರು. ವಾದ

ಮಾಡಿ ಜವಾಹರಲಾಲ ನೆಹರು ಅವರನ್ನು ಜನನಾಯಕನಾಗಿ ಮಾಡಿದರು. ಇಂದು ಆ ಅಜ್ಞಾತ ಹೋರಾಟಗಾರರಿಗೆ ಇತಿಹಾಸದಲ್ಲಿ ಸ್ಥಾನ ದೊರೆತಿಲ್ಲ. ದೊರಕುವ ಸಂಭವವು ಇಲ್ಲ. ಆದ್ದರಿಂದ ಹುಮನಾಬಾದ ತಾಲ್ಲೂಕಿನ ಭಾಗದಲ್ಲಿ ಸ್ವಾತಂತ್ರ ಮತ್ತು ಏಕೀಕರಣ ಚಳುವಳಿಯ ಉಗಮದ ಬಗ್ಗೆ ಶೋಧಿಸುವುದು, ಸ್ವಾತಂತ್ರ್ಯ ಮತ್ತು ಏಕೀಕರಣ ಹೋರಾಟದ ಇತಿಹಾಸ ಚಳುವಳಿಯಲ್ಲಿ ಎಷ್ಟು ಜನರು ಭಾಗವಹಿಸಿದರೆಂಬುದನ್ನು ಶೋಧನೆ ಮಾಡುವುದು, ಸ್ವಾತಂತ್ರ ಮತ್ತು ಏಕಿರಕಣ ಹೋರಾಟದಲ್ಲಿ ಭಾಗವಹಿಸಲು ಅವರಿಗೆ ಪ್ರೇರಕವಾದ ಸಂಗತಿಗಳನ್ನು ತಿಳಿದುಕೊಳ್ಳುವುದು ಚಳುವಳಿಯ ಕಾಲಕ್ಕೆ ತಾಲ್ಲೂಕಿನಲ್ಲಿ ವಾತಾವರಣವನ್ನು ತಿಳಿಯುವುದರಿಂದ ಜೊತೆಗೆ ಅವರ ಕಾರ್ಯಚಟುವಟಿಕೆಗಳನ್ನು ತಿಳಿಯವುದು ಹಾಗೂ ಸ್ವಾತಂತ್ರ್ಯ ಪಡೆಯುವಲ್ಲಿ ಸತ್ಯ, ಅಹಿಂಸೆ, ಸತ್ಯಾಗ್ರಹ ಮುಂತಾದ ತತ್ವಗಳ ಪಾತ್ರಗಳನ್ನು ಅರಿತುಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ.

ಒಟ್ಟಾರೆ ಹೈದ್ರಾಬಾದ ಕರ್ನಾಟಕ ಬಿಡುಗಡೆಯಲ್ಲಿ ಹುಮನಾಬಾದ ತಾಲ್ಲೂಕು ಯಾವ ರೀತಿಯಾಗಿ ತನ್ನ ಪಾಲಿನ ಕರ್ತವ್ಯವನ್ನು ಪೂರೈಸಿದೆ ಎಂಬುದನ್ನು ಅವಲೋಕಿಸುವುದೇ ಪ್ರಸ್ತುತ ಅಧ್ಯಯನದ ಆಯ್ಕೆಯ ಉದ್ದೇಶವಾಗಿದೆ. ಭಾರತವನ್ನು ಬ್ರಿಟೀಷರ ಆಳ್ವಿಕೆಯಿಂದ ಮತ್ತು ಹೈದ್ರಾಬಾದ ಕರ್ನಾಟಕವನ್ನು ನಿಜಾಮನಿಂದ ಮುಕ್ತ ಗೊಳಿಸಬೇಕಾದರೆ ನಮ್ಮ ಚಳುವಳಿಗಾರರು ವಹಿಸಿದ ಕ್ರಮ, ಕ್ರೀಯಾಶೀಲ ರೀತಿಯ ಪ್ರೇರಕ ಶಕ್ತಿಯನ್ನು ಹೊಂದಿತು ಎಂದು ಅರಿಯಬಹುದು. ಭಾರತವನ್ನು ಸ್ವತಂತ್ರ್ಯ ರಾಷ್ಟ್ರವನ್ನಾಗಿ ಮಾಡಲು ಮತ್ತು ಹೈದ್ರಾಬಾದ ಕರ್ನಾಟಕವನ್ನು ನಿಜಾಮನಿಂದ ಮುಕ್ತ ಗೊಳಿಸಲು ತಾಲ್ಲೂಕಿನಲ್ಲಿ ನಡೆದ ಧೀರ್ಘ ಕಾಲಾವಧಿಯ ರಾಷ್ಟ್ರೀಯ ಚಳುವಳಿಯ ಕುರಿತು ಅನೇಕ ವಿವರವಾದ ಗ್ರಂಥಗಳು ಇರುವುದಿಲ್ಲ. ಮುಖ್ಯವಾಗಿ ಸಂಶೋಧನಾ ದೃಷ್ಟಿಯಿಂದ "ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿಯಲ್ಲಿ ಹುಮನಾಬಾದ ತಾಲ್ಲೂಕಿನ ಪಾತ್ರ" ಎಂಬ ಈ ನಿಬಂಧವನ್ನು ರಚಿಸಲಾಗಿದೆ.

ಅಧ್ಯಯನದ ವಿಧಾನ :-

ಈ ಅಧ್ಯಯನವು ಪ್ರಾಥಮಿಕ ಮತ್ತು ಅನುಷಂಗಿಕ ಅಂಕಿ-ಅಂಶಗಳ ಮಾಹಿತಿಯ ಮೇಲೆ ಅವಲಂಬನೆಯನ್ನು ಹೊಂದಿರುವುದು. ಪ್ರಾಥಮಿಕ ಅಂಶಗಳಲ್ಲಿ ಸ್ವಾತಂತ್ರ್ಯ ಯೋಧರನ್ನು ಖುದ್ದಾಗಿ ಭೇಟಿಯಾಗಿ ವಿಷಯಗಳನ್ನು ಸಂಗ್ರಹಿಸಿ ತಾಳೆ ನೋಡಿ ಅಂಕಿ ಅಂಶಗಳನ್ನು ಅಧಿಕೃತವೆಂದು ನಿರ್ಧರಿಸಿದ ಮೇಲೆ ಇಡೀಯಾಗಿ ಗ್ರಂಥ ರಚನೆ ಮಾಡಬೇಕು. ಕೇವಲ ಅವರ ಅಲ್ಪ-ಸ್ವಲ್ಪ ವಿಷಯಗಳನ್ನು ಸಂಗ್ರಹಿಸಿ ನಿಬಂಧ ಬರೆಯುವುದು ಹೇಗೆ ಸಾಧ್ಯ ಎಂದು ಭಯವಾಯಿತು. ಆ ಬಗೆಗೆ ಇರುವ

ಗ್ರಂಥ ಸಾಮಗ್ರಿ ಅತ್ಯಲ್ಪ ಇಲ್ಲವೆಂದು ಒಪ್ಪುತ್ತೇವೆ. ಅಂದಮೇಲೆ ಒಂದು ನಿಬಂಧ ಬರೆಯುವುದು ಸಾಧ್ಯವೆ, ಕಾರ್ಯಾರಂಭ ಮಾಡಿದ್ದಾಯಿತು. ನಿಲ್ಲಸಬಾರದೆಂದು ನಿಶ್ಚಯಿಸಿ ಹೊಸದೊಂದು ಸಂಗ್ರಹಣೆಗೆ ದಾರಿತೋರಿದಂತಾಯಿತು.

ಹಲವು ಜನ ಹಿರಿಯ ಸ್ವಾತಂತ್ರ್ಯ ಹೋರಾಟಗಾರರನ್ನು ಭೆಟಿ ಮಾಡಿದೆ. ಒಬ್ಬರಿಂದ ಮತ್ತೊಬ್ಬರ ಪರಿಚಯವಾಯಿತು. ಒಂದರಿಂದ ಮತ್ತೊಂದು ವಿಷಯದ ಕೊಂಡಿ ಸಿಕ್ಕಿತ್ತು. ಸಾಕಷ್ಟು ವ್ಯತ್ಯಾಸಗಳಿದ್ದವು ಎಲ್ಲವನ್ನು ತಾಳ್ಮೆಯಿಂದ ನೋಡಿ ಅಧಿಕೃತವಾದುದನ್ನು ಕಂಡುಕೊಳ್ಳಬೇಕಾದರೆ ಸಾಕಷ್ಟು ಸಮಯ ಹಿಡಿಯಿತು. ವಿಷಯ ಸಂಗ್ರಹಕ್ಕೆ ಸುಮಾರು ನಾಲ್ಕೈದು ತಿಂಗಳ ಬೇಕಾಯಿತು. ಮಾಹಿತಿ ಸಂಗ್ರಹಕ್ಕೆ ಅನುಸರಿಸಿದ ಕ್ರಮಗಳು ಕೆಳಗಿನಂತಿವೆ.

ಚಳುವಳಿಗಾರರಿಂದ, ಸಂಬಂಧಪಟ್ಟ ಸರಕಾರಿ ಕಾರ್ಯಾಲಯಗಳಿಂದ ಪಡೆದ ಮಾಹಿತಿಗಳು:-

ವಿಷಯಕ್ಕೆ ಸಂಬಂಧಪಟ್ಟವರಿಗೆ ಮತ್ತು ಚಳುವಳಿಯಲ್ಲಿ ಭಾಗವಹಿಸಿದವರಿಂದ ಮತ್ತು ತಹಸೀಲ್ದಾರ ಕಚೇರಿಗೆ ಖುದ್ದಾಗಿ ಭೇಟಿಮಾಡಿ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಮಾಹಿತಿಗಳು ವ್ಯವಸ್ಥಿತವಾದ ಲೇಖನಗಳಲ್ಲ. ಚೆಲ್ಲಾಪಿಲ್ಲಿಯಾಗಿ ನಿರುಪಣೆಗೊಂಡ ನೆನಪುಗಳು, ಮಾಹಿತಿಗಳು, ಕೆಲವು ಒಂದೆರಡು ಸಾಲಿನ ಪತ್ರಗಳು, ಸುಮಾರು ವರ್ಷಗಳ ಘಟನೆಗಳಾಗಿದ್ದರಿಂದ ಇವುಗಳಲ್ಲಿ ಅನೇಕ ಅಭಿಪ್ರಾಯಗಳು ಅಂಕಿ ಅಂಶಗಳು ಹಿಂದು ಮುಂದಾಗಿದ್ದವು. ಎಚ್ಚರಿಕೆಯಿಂದ ಪರಿಶೀಲಿಸಿ ಈ ಸಾಮಗ್ರಿಗಳನ್ನು ಬಳಸಿಕೊಂಡಿರುತ್ತೇನೆ. ಚಳುವಳಿಗಳಲ್ಲಿ ಖುದ್ದಾಗಿ ಭಾಗವಹಿಸಿದವರ ಹೇಳಿಕೆಗಳನ್ನು ಇದ್ದುದ್ದನ್ನು ಇದ್ದಹಾಗೆ ಹೇಳಿರುವುದು ಖಾತ್ರಿಯಾದರೆ ಚಳುವಳಿಯಲ್ಲಿ ಅಥವಾ ಹೋರಾಟದಲ್ಲಿ ಸ್ವತಹ ಭಾಗವಹಿಸಿದವರ ಅನುಭವಗಳಾದರೆ, ಅಂತಹ ಅಂಶಗಳಿಗೆ ಪ್ರಮುಖ ಆದ್ಯತೆ ನೀಡಲಾಗುತ್ತದೆ.

ಚಳುವಳಿಗಾರರ ಸಂದರ್ಶನದಿಂದ ಮತ್ತು ಪ್ರಶ್ನಾವಳಿ ಸಹಾಯದಿಂದ ವಿಷಯ ಸಂಗ್ರಹಣೆ :-

ಹುಮನಾಬಾದ ತಾಲ್ಲೂಕಿನ ಎಲ್ಲಾ ಊರುಗಳಿಗೆ ಹೋಗಿ ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗವಹಿಸಿದವರನ್ನು ಕಂಡು ಬರೆದುಕೊಳ್ಳುವುದೇನೆಂದರೆ, ವಿಷಯದ ವಸ್ತು ನಿಷ್ಠತೆಯನ್ನು ಸಂಗ್ರಹಿಸಲಾಯಿತು. ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂದಿಸಿದಂತೆ ಹೆಚ್ಚಾಗಿ ಪ್ರಶ್ನೆಗಳನ್ನು ಕೇಳಿ ಅಭಿಪ್ರಾಯವನ್ನು ಕಲೆ ಹಾಕಿ ಟಿಪ್ಪಣಿ ಜೊತೆಗೆ ಭಾವ ಚಿತ್ರಗಳನ್ನು ತೆಗೆದುಕೊಳ್ಳಲಾಯಿತು. ಒಟ್ಟು

ನಲವತ್ತಕ್ಕೂ ಹೆಚ್ಚು ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರು ಮಾತ್ರ ಜೀವಂತವಾಗಿದ್ದು, ಅವರು ತಮ್ಮ ವೈಯಕ್ತಿಕ ಆರೋಗ್ಯದ ತೊಂದರೆಯಲ್ಲಿರುವುದು ಕಂಡು ಬರುತ್ತದೆ ಮತ್ತು ಇನ್ನುಳಿದ ಹೋರಾಟಗಾರರೆಲ್ಲರು ಮೃತರಾಗಿದ್ದಾರೆ. ಬದುಕುಳಿದವರ ಹೇಳಿಕೆಗಳನ್ನು ಉಪಯೋಗಿಸಿಕೊಂಡಿದೆ ಮತ್ತು ಮೃತರಾದವರ ಬಗ್ಗೆ ಅವರ ಮನೆಯ ಇನ್ನುಳಿದ ಸದಸ್ಯರಿಂದ ಅವರ ಮಕ್ಕಳಿಂದ ಮಾಹಿತಿ ಕೇಳಿ ಕೆಲವು ಹಸ್ತ ಪ್ರತಿ ಮತ್ತು ಭಾವಚಿತ್ರ ಮುಂತಾದ ಆಕಾರಗಳನ್ನು ವಿನಂತಿಯಿಂದ ಕೇಳಿ ಪಡೆಯಲಾಗಿದೆ.

ಈ ಹೋರಾಟಗಾರರ ಎಲ್ಲಾ ಮಾಹಿತಿಯು ಅವರ ನೆನಪಿನ ಮೇಲೆ ನೆಲೆ ನಿಂತಿದೆ. ನಿರ್ದಿಷ್ಠ ದಾಖಲೆಗಳಿಲ್ಲ. ಗುರಿ ಸಾಧನೆಗೆ ಉಪಯೋಗಿಸಿದ ಕ್ರಮಗಳು, ಪರಿಚಯ, ಮಾತ್ರ ಸ್ಮರಣೀಯ ಎಂದು ಗೋಚರಿಸುತ್ತದೆ. ಬೇರೆ ಬೇರೆ ಸತ್ಯಾಗ್ರಹಿಗಳ ಹೇಳಿಕೆಗಳಲ್ಲಿ ಕ್ರಮಬದ್ಧವಾದ ಅಂಶಗಳು ಹಿಂದು–ಮುಂದಾಗಿದ್ದರು ವಸ್ತು ನಿಷ್ಠ ವಿಷಯ ಒಂದೇ ಆಗಿದ್ದರಿಂದ ಅದನ್ನು ಹೇಳಿಕೆಗಳ ಆಧಾರದಿಂದ ಕ್ರಮ ಬದ್ಧತೆಯ ಹಾದಿಯಲ್ಲಿ ಕ್ರೋಢೀಕರಿಸಿ ಬರೆಯಲಾಗಿದೆ. ನೋಡಿದವರಿಗಿಂತ, ಕೇಳಿದವರಿಗಿಂತ ಸ್ವಾತಂತ್ರ ಹೋರಾಟದಲ್ಲಿ ವಿವಿಧ ಚಳುವಳಿಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದ್ದರಿಂದ ಅನುಭವಗಳಿಗೆ ಹೆಚ್ಚು ಗಮನ ಕೊಟ್ಟು ಅಂಥವರನ್ನು ಸಂದರ್ಶಿಸಿದಾಗ ವಿಚಿತ್ರವಾದ ಅನುಭವಗಳಾದವು. ಸ್ವಾತಂತ್ರ್ಯ ಹೋರಾಟಗಾರರ ನೆನಪಿನ ಬುತ್ತಿಯಂತೆ ಗೋಚರಿಸಿದ ಕಾಗದ ಪತ್ರಗಳು ಕೆಲವರಿಂದ ದೊರೆತವು. ಆದ್ದರಿಂದ ವಿಷಯದಲ್ಲಿ ಪ್ರಾಮುಖ್ಯತೆ ಉತ್ಕೃಷ್ಟ ವಾಯಿತು.

ಏನೇ ಆದರೂ ನಾನು ಕಾರ್ಯಕ್ಷೇತ್ರಕ್ಕೆ ಹೋದಾಗ ಸ್ವಾತಂತ್ರ್ಯ ಹೋರಾಟಗಾರರು ತೋರಿದ ಸಹಾಯ, ಸಹಕಾರ ಅಪೂರ್ವವಾದುದು. ಪ್ರೀತಿಯಿಂದ ಬರಮಾಡಿಕೊಂಡು ತಮಗೆ ತಿಳಿದಿದ್ದ ಎಲ್ಲಾ ವಿಷಯವನ್ನು ಹೇಳಿದರು. ಮತ್ತೆ ಅವರಿಗೆ ಸ್ವತಂತ್ರ ಚಳುವಳಿಯಲ್ಲಿ ಧುಮುಕಿದ್ದೇವೆ ಎನ್ನುವ ರೀತಿಯಲ್ಲಿ ಅನುಭವ ಉಂಟಾಯಿತು. ಇದರಿಂದ ನನ್ನ ಅಧ್ಯಯನಕ್ಕೆ ಹೊಸ ಚಾಲನೆ ದೊರೆತಂತಾಯಿತು.

ಈ ಅಧ್ಯಯನದ ಮುಖ್ಯ ಉದ್ದೇಶ ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಟಗಾರರ ಪಾತ್ರ, ಅವರ ಧೈರ್ಯ, ಸಾಹಸ, ಸಮಯ ಸ್ಫೂರ್ತಿ, ದೇಶ ಪ್ರೇಮ, ತಾಳ್ಮೆ, ತ್ಯಾಗ ಬಲಿದಾನ ಇವುಗಳನ್ನು ಬೆಳಕಿಗೆ ತರಬೇಕೆಂದು ಕಾತುರವಿದ್ದ ನನ್ನ ಮನಸ್ಸನ್ನು ಅರಿತಂತೆ ಅವರಿದ್ದ ಸ್ಥಳಕ್ಕೆ ಹೋಗಿ ಭೇಟಿಯಾಗಿ ಮಾತನಾಡಿಸಿದ್ದೇನೆ. ತಾವಾಗಿಯೇ ಹೇಳಿದ ಅವರ ಅನುಭವ ಅವರ ತ್ಯಾಗ ಜೀವನ ಕಣ್ಣೆದುರು ಚಲಿಸಿದಂತೆ ವಿವರಿಸಿದರು. ಅವರಿಂದ ನಾನು ಕಲಿತ ವಿಷಯ ಅಪಾರ.

ಈ ಎಲ್ಲಾ ಮಾಹಿತಿ ತಿಳಿಯಲು ಕ್ಷೇತ್ರ ಅಧ್ಯಯನಕ್ಕೆ ಒತ್ತು ಕೊಟ್ಟು ಸಂಶೋಧನೆ ಮಾಡಲಾಗಿದೆ. ಈ ಎಲ್ಲಾ ಅನುಷಂಗಿಕ ವಿಷಯಗಳನ್ನು ಎಲ್ಲಾ ಅಂಶಗಳನ್ನು ಕಲೆ ಹಾಕುವಲ್ಲಿ ಪತ್ರಿಕೆಗಳ ಪಾತ್ರ ಗಣನೀಯ ಎಂಬುದನ್ನು ಭಾವಿಸಬಹುದಾಗಿದೆ.

ವ್ಯಾಪ್ತಿ :-

ಈ ಅಧ್ಯಯನವನ್ನು ಕ್ರಮಬದ್ಧವಾಗಿ ಒಂಬತ್ತು ಪ್ರಧಾನ ಅಧ್ಯಾಯಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆ ಅಧ್ಯಾಯದಲ್ಲಿ ಪ್ರಸ್ತಾವನೆ ಎಂಬ ತಲೆಬರಹದ ಅಡಿಯಲ್ಲಿ ಸ್ವಾತಂತ್ರ ವೆಂದರೇನು ? ಅರ್ಥ ಮತ್ತು ವ್ಯಾಖ್ಯೆಗಳು ಸ್ವಾತಂತ್ರ್ಯ ಹೋರಾಟದ ನೈತಿಕ ಸಿದ್ಧಾಂತ ಮತ್ತು ಈ ತಾಲ್ಲೂಕಿನ ಸ್ವಾತಂತ್ರ್ಯ ಚಳುವಳಿಯ ಕುರಿತು, ಅಧ್ಯಯನದ ಉದ್ದೇಶ ಮತ್ತು ವಿಧಾನ ಹಾಗೂ ವ್ಯಾಪ್ತಿಯ ಪ್ರಮುಖ ಅಂಶಗಳನ್ನು ಒಳಗೊಂಡಿರುತ್ತದೆ.

ಎರಡನೇಯ ಅಧ್ಯಾಯದಲ್ಲಿ ತಾಲ್ಲೂಕಿನ ಭೌಗೋಕತೆ, ಐತಿಹಾಸಿಕ ಹಿನ್ನಲೆ ಹಾಗೂ ಪ್ರಸಿದ್ಧತೆಯನ್ನು ಕುರಿತು ವಿವರಿಸಲಾಗಿದೆ.

ಮೂರನೇಯ ಅಧ್ಯಾಯದಲ್ಲಿ ಬ್ರೀಟಿಷ ಮತ್ತು ನಿಜಾಮನ ಸಂಬಂಧಗಳು ಕುರಿತು ವಿವರಿಸಲಾಗಿದೆ.

ನಾಲ್ಕನೇಯ ಅಧ್ಯಾಯದಲ್ಲಿ ಹುಮನಾಬಾದ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರರಲ್ಲಿ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾದ ಅಂಶಗಳ ಬಗ್ಗೆ ವಿವರಿಸಲಾಗಿದೆ.

ಐದನೇಯ ಅಧ್ಯಾಯದಲ್ಲಿ ರಜಾಕಾರರ ಚಳುವಳಿಯ ತೀವ್ರತೆಯ ಬಗ್ಗೆ ವಿವರಿಸಲಾಗಿದೆ.

ಆರನೇ ಅಧ್ಯಾಯದಲ್ಲಿ ಹೈದ್ರಾಬಾದ-ಕರ್ನಾಟಕ ಪ್ರದೇಶದ ಮೇಲೆ ಯಾವ ರೀತಿಯಾದ ಪೊಲೀಸ ಕಾರ್ಯಾಚರಣೆ ಕೈಗೊಳ್ಳಲಾಯಿತು ಎಂಬುದರ ಬಗ್ಗೆ ವಿವರಿಸಲಾಗಿದೆ.

ಏಳನೇ ಅಧ್ಯಾಯದಲ್ಲಿ ಹೈದ್ರಾಬಾದ-ಕರ್ನಾಟಕಪ್ರದೇಶವು ಏಕೀಕರಣಗೊಂಡು ಕರ್ನಾಟಕ ರಾಜ್ಯದ ಭಾಗವಾಗಿದ್ದರ ಬಗ್ಗೆ ವಿವರಿಸಲಾಗಿದೆ.

ಎಂಟನೇ ಅಧ್ಯಾಯದಲ್ಲಿ ಹುಮನಾಬಾದ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟ ಗಾರರ ಸಂಕ್ಷಿಪ್ತ ಜೀವನದ ಬಗ್ಗೆ ವಿವರಿಸಲಾಗಿದೆ.

ಒಂಬತ್ತನೇ ಅಧ್ಯಾಯದಲ್ಲಿ ಉಪಸಂಹಾರ ವಿಷಯದ ತಾರ್ಕಿಕ ರೀತಿಯ ವಿಮರ್ಶೆ, ಸಂಶೋಧನಾ ಅನುಭವದ ಕುರಿತು ವಿವರಿಸಲಾಗಿದೆ.

ಅಧ್ಯಾಯ-೨

ಹುಮನಾಬಾದ ತಾಲ್ಲೂಕಿನ ಭೌಗೋಳಿಕ ಲಕ್ಷಣಗಳು ಹಾಗೂ ಐತಿಹಾಸಿಕ ಹಿನ್ನಲೆ

ಕರ್ನಾಟಕದ ಉತ್ತರ ದಿಕ್ಕಿನಲ್ಲಿರುವ ಬೀದರ ಜಿಲ್ಲೆ ಕನ್ನಡಮ್ಮನ ಮುಕುಟವಾಗಿ ಕಂಗೊಳಿಸುತ್ತಿದೆ. ಈ ಜಿಲ್ಲೆಯ ಒಂದು ತಾಲ್ಲೂಕವೇ ಹುಮನಾಬಾದ. ಈ ನಗರಕ್ಕೆ ಪೂರ್ವದಲ್ಲಿ ಜಯಸಿಂಹನಗರವೆಂದು ಕರೆಯುತ್ತಿದ್ದರು. ಮುಸ್ಲಿಂ ಆಡಳಿತದಲ್ಲಿ ಅದೇ ಹೆಸರು ಸ್ಥಿರವಾಗಿ ಉಳಿಯಿತು. ಇದೊಂದು ಐತಿಹಾಸಿಕ ಪಟ್ಟಣವಾಗಿದ್ದು, ಬೀದರ-ಗುಲಬರ್ಗಾಗಳ ಮಧ್ಯದಲ್ಲಿ ಬರುತ್ತದೆ. ಈ ನಗರದ ಮುಖಾಂತರವೇ ರಾಷ್ಟ್ರೀಯ ಹೆದ್ದಾರಿ-೯ ಹಾದು ಹೋಗುತ್ತದೆ. ಇದು ಮುಂಬೈಯಿಂದ ಹೈದ್ರಾಬಾದಕ್ಕೆ ಸಂಪರ್ಕ ಕಲ್ಪಿಸುತ್ತದೆ.

ಈ ಭೂಮಿಗೆ ಧರಿನಾಡು ಎಂದು ಕರೆಯುತ್ತಾರೆ. ಕೆಂಪು ಮಣ್ಣಿನಿಂದ ಕೂಡಿದ ತಂಪು ಪ್ರದೇಶ ಇದಾಗಿದೆ. ಹನ್ನೆರಡನೆ ಶತಮಾನದಲ್ಲಿ ಬಸವಾದಿ ಶರಣರು ಕಾಯಕಮಾಡಿದ ಪುಣ್ಯ ಭೂಮಿ, ಪಾವನ ನಾಡು ಇದಾಗಿದೆ. ಚಾಲುಕ್ಯ ಆರನೆ ವಿಕ್ರಮಾದಿತ್ಯನಂತಹ ವೀರಾಧಿ ವೀರರು ರಾಜ್ಯವಾಳಿದ ನೆಲದಲ್ಲಿ ಒಡ್ಡಾರಾಧನೆ ಮಿತಾಕ್ಷರಗಳಂತಹ ಗ್ರಂಥಗಳು ರಚನೆಗೊಂಡು ಸಾಹಿತ್ಯ ಜ್ಯೋತಿ ಇಲ್ಲಿ ಪ್ರಜ್ವಲಿಸಿತು. ವಿಶ್ವಸಾಹಿತ್ಯಕ್ಕೆ ವಚನ ಸಾಹಿತ್ಯವೆಂಬ ಅತ್ಯಮೂಲ್ಯ ಕಾಣಿಕೆ ನೀಡಿದ ಪವಿತ್ರ ಭೂಮಿ ಈ ನಮ್ಮ ಬೀದರ ಜಿಲ್ಲೆ.

೧) ಭೌಗೋಳಿಕ ಪರಿಚಯ :-

ಇದು ಕನ್ನಡ ನಾಡಿದ ಉತ್ತರ ಭಾಗದಲ್ಲಿ ನೆಲೆಗೊಂಡಿದೆ. ಈ ತಾಲ್ಲೂಕಿನ ವಿಸ್ತೀರ್ಣವು ೩೮೫.೨೩ ಚ.ಕಿ.ಮಿ ಇದೆ. ಈ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿ ಭಾಲ್ಕಿ ಮತ್ತು ಬೀದರ ತಾಲ್ಲೂಕುಗಳು ಇವೆ. ದಕ್ಷಿಣ ದಿಕ್ಕಿಗೆ ಗುಲಬರ್ಗಾ, ಆಳಂದ ಹಾಗೂ ಚಿಂಚೋಳಿ ತಾಲ್ಲೂಕುಗಳು ಇವೆ. ಪೂರ್ವದಲ್ಲಿ ಆಂಧ್ರಪ್ರದೇಶ, ಪಶ್ಚಿಮದಲ್ಲಿ ಬಸವಕಲ್ಯಾಣ ತಾಲ್ಲುಕುಗಳು ಚಾಚಿಕೊಂಡಿವೆ. ಆಡಳಿತದ ದೃಷ್ಟಿಯಿಂದ ಈ ತಾಲ್ಲೂಕುವನ್ನು ಆರು ಹೋಬಳಿಗಳನ್ನಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ ಹುಮನಾಬಾದ, ಹಳ್ಳಿಖೇಡ (ಬಿ), ನಿರ್ಣಾ, ದುಬಲಗುಂಡಿ, ಚಿಟಗುಪ್ಪ ಮತ್ತು ಬೇಮಳಖೇಡಾ.

೨೦೦೧ ನೇ ಸಾಲಿನ ಜನಗಣತಿಯ ಪ್ರಕಾರ ಈ ತಾಲ್ಲೂಕಿನ ಒಟ್ಟು ಜನಸಂಖ್ಯೆ ೨,೯೪,೪೧೩, ಇದರಲ್ಲಿ ಗಂಡಸರು ೧,೫೦,೯೧೪ ಮತ್ತು ಹೆಂಗಸರ ಸಂಖ್ಯೆ ೧,೪೩,೪೯೯, ಜನಸಾಂದ್ರತೆಯು ಒಂದು ಚ.ಕಿ.ಮಿಗೆ ೨೯೮ ಜನರ ಪ್ರಮಾಣದಲ್ಲಿದೆ. ಹುಮನಾಬಾದ ನಗರದ ಜನಸಂಖ್ಯೆ ೩೬,೫೧೧, ಈ ತಾಲ್ಲುಕಿನಲ್ಲಿ ೮೭ ಹಳ್ಳಿಗಳಿವೆ. ಅವುಗಳಲ್ಲಿ ಜನ ವಸತಿ ಇರುವ ಹಳ್ಳಿಗಳು ೮೪. ಜನ ವಸತಿ ಇಲ್ಲದ ಹಳ್ಳಿಗಳು ೩ ಈ ತಾಲ್ಲೂಕಿನಲ್ಲಿ ೩೩ ಗ್ರಾಮ ಪಂಚಾಯತಿಗಳು ಎರಡು ಪುರಸಭೆಗಳು ಇವೆ.

೨) ಹವಾಗುಣ–ಮಳೆ :–

ಹುಮನಾಬಾದ ತಾಲ್ಲೂಕಿನಲ್ಲಿ ಸಮಶೀತೋಷ್ಣ ಹವಾಮಾನವಿದ್ದು, ಆರೋಗ್ಯ ದಾಯಕವಾಗಿದೆ. ಇಲ್ಲಿ ಮುಂಗಾರು ಮಳೆಯು ಜೂನ ತಿಂಗಳಿಂದ ಪ್ರಾರಂಭವಾಗಿ ಅಕ್ಟೋಬರ್ ತಿಂಗಳಿಗೆ ಕೊನೆಗೊಳ್ಳುತ್ತದೆ. ಹಿಂಗಾರು ಮಳೆಯು ನವೆಂಬರ ನಿಂದ ಡಿಸೆಂಬರ ವರೆಗೆ ಇರುತ್ತದೆ. ಬೇಸಿಗೆ ಕಾಲದಲ್ಲಿ ಸ್ವಲ್ಪ ಶೆಕೆ ಜಾಸ್ತಿಯಾಗಿರುತ್ತದೆ. ಒಣಹವೆ ಕಂಡುಬರುತ್ತದೆ. ಗುಡುಗು ಮಿಂಚಿನ ಮಳೆಗಳು ಹೆಚ್ಚಾಗಿ ಬಂದು ಅಲ್ಲಲ್ಲಿ ಸಿಡಿಲಿನ ಅರ್ಭಟ ಹೆಚ್ಚಾಗಿರುತ್ತದೆ. ಈ ತಾಲ್ಲೂಕಿನಲ್ಲಿ ವೃಷ್ಟ ಮಾಪಕ ಕೇಂದ್ರಗಳು ಒಟ್ಟು ೬ ಇವೆ. ಸರಾಸರಿ ಮಳೆಯ ಪ್ರಮಾಣ ೫೮೨.೪ ಮಿ.ಮಿ. ಗಳು. ೧೯೯೮ ರಲ್ಲಿ ಮಳೆಯ ಪ್ರಮಾಣ ೧೧೭೬.೭ ಮಿ.ಮಿ ಇದ್ದು, ೨೦೦೦ ದಲ್ಲಿ ಅರ್ಧಕ್ಕೆ ಬಂದು ನಿಂತಿರುವುದು ಬರಗಾಲವನ್ನ ಸೂಚಿಸುತ್ತದೆ.

೩) ನದಿ–ಬೆಟ್ಟ–ಕಾಡುಗಳು :–

ಈ ತಾಲ್ಲೂಕಿನಲ್ಲಿ ಯಾವ ದೊಡ್ಡ ನದಿಗಳಿಲ್ಲ. ಆದರೆ ಚಿಕ್ಕ ಹಳ್ಳಗಳಿವೆ. ಬಸವತೀರ್ಥ ಹಳ್ಳವು ಮಾಣಿಕನಗರ ಹಳ್ಳಕ್ಕೆ ಸೇರಿಕೊಂಡು ಹುಡಗಿ–ಹುಮನಾಬಾದ ನಡುವೆ ದೊಡ್ಡ ಪ್ರಮಾಣದಲ್ಲಿ ಹರಿಯುತ್ತದೆ. ಇದರಿಂದ ಮಧ್ಯಮ ನೀರಾವರಿ ಯೋಜನೆಗೆ ಅನುಕೂಲವಿದೆ. ಈ ತಾಲ್ಲೂಕಿನಲ್ಲಿ ನೂರಾರು ಕೆರೆಗಳಿದ್ದರೂ ಪ್ರಯೋಜನವಾಗಿಲ್ಲ. ಮಳೆಯ ಪ್ರಮಾಣ ಕಡಿಮೆ ಇದ್ದ ಕಾರಣ ಕೆರೆಗಳಿಗೆ ನೀರಿಲ್ಲ. ಆದುದರಿಂದ ತಾಲ್ಲೂಕಿನ ಬೇಸಾಯ ತೆರೆದ ಬಾವಿಗಳ ಮೇಲೆಯೇ ಅವಲಂಬಿಸಿದೆ. ತಾಲ್ಲೂಕಿನಲ್ಲಿ ಸುಮಾರು ೬,೨೪೦ ನೀರಾವರಿ ಬಾವಿಗಳಿವೆ. ಅರಣ್ಯ ಇಲಾಖೆಯ ಉಸ್ತುವಾರಿಯಲ್ಲಿ ಮಾಣಿಕನಗರ, ಧುಮ್ಮನಸೂರು, ಚಾಂಗಲೇರಾ, ಅಲ್ಲಿಪೂರ, ದೇವಗಿರಿ, ಕರಕನಳ್ಳಿ, ಗೊಟ್ಟಂಗೊಟ್ಟಿ ಮೊದಲಾದ ಅರಣ್ಯ ಪ್ರದೇಶಗಳು ಸಸ್ಯ ಕೇಂದ್ರಗಳು ಅಭಿವೃದ್ಧಿ ಹೊಂದುತ್ತಿವೆ. ಕಾಡುಗಳಲ್ಲಿ ತೋಳ, ಹುಲಿ,

ಚಿರತೆಗಳು ಕಾಡುಹಂದಿಗಳು ವಾಸವಾಗಿವೆ. ಇಲ್ಲಿಯ ಪಕ್ಷಿ ಸಂಕೂಲ ಸಮೃದ್ಧವಾಗಿವೆ.

ಈ ತಾಲ್ಲೂಕಿನಲ್ಲಿ ಖನಿಜ ಸಂಪತ್ತು ಯಾವುದು ಕೂಡ ಇಲ್ಲ. ಗಟ್ಟಿಯಾದ ಕೆಂಪು ಕಲ್ಲುಗಳು ಮಾತ್ರ ಹೇರಳವಾಗಿ ದೊರೆಯುತ್ತಿವೆ. ತಾಲ್ಲೂಕಿನ ಹಣಕುಣಿ, ವಳಖಿಂಡಿ, ಜಲಸಂಗಿ, ಚೀನಕೇರಾ, ಬನ್ನಳ್ಳಿ, ಉಡಬಾಳ ಮೊದಲಾದ ಕಡೆಗಳಲ್ಲಿ ಈ ಕೆಂಪು ಖನಿಜವಿದೆ. ದಿನಾಲು ಸಾವಿರಾರು ಟನ್ ಕಲ್ಲುಗಳು ಇಲ್ಲಿಂದ ಗುಲಬರ್ಗಾ, ಕಮಲಾಪೂರ ಮೊದಲಾದಕಡೆ ಸಾಗಿಸಲಾಗುತ್ತದೆ. ಈ ತಾಲ್ಲೂಕಿನಲ್ಲಿ ಒಂದು ಸಹಕಾರ ಸಕ್ಕರೆ ಕಾರ್ಖಾನೆ ಇದ್ದು, ೩ ಖಾಸಗಿ ಕಾರ್ಖಾನೆಗಳಿವೆ. ಅವುಗಳಿಂದ ದೊರೆಯುವ ಕಚ್ಚಾ ವಸ್ತು ಕಬ್ಬಿನ ಸಿಪ್ಪೆಯಿಂದ ಕಾಗದ ಕಾರ್ಖಾನೆ ನಡೆಸಲಾಗುತ್ತದೆ.

೪) ಒಕ್ಕಲುತನ :-

ಹುಮನಾಬಾದ ತಾಲ್ಲೂಕು ವ್ಯವಸಾಯ ಪ್ರಧಾನವಾದ ತಾಲ್ಲುಕು. ಇಲ್ಲಿ ೧೦೦ ಕ್ಕೆ ೭೫% ಜನರು ಒಕ್ಕಲುತನವನ್ನೇ ಅವಲಂಬಿಸಿದ್ದಾರೆ. ಇಲ್ಲಿ ಯಾವುದೇ ನೀರಾವರಿ ಯೋಜನೆಗಳು ಇಲ್ಲದಿದ್ದರಿಂದ ವ್ಯವಸಾಯ ಮಳೆಯನ್ನೇ ಅವಲಂಬಿಸಿದೆ. ಅಲ್ಲಲ್ಲಿ ತೆರೆದ ಬಾವಿಗಳಿಂದ ತೋಟಗಾರಿಕೆ ಕಾರ್ಯ ನಡೆಯುತ್ತದೆ. ಮಳೆ ಆಧಾರಿತ ಬೆಳೆಗಳೆಂದರೆ ಜೋಳ, ಸಜ್ಜೆ, ತೊಗರಿ, ನವಣೆ, ಉದ್ದು, ಹೆಸರು ಹಾಗೂ ಕಡಲೆ. ನೀರಾವರಿಯಿಂದ ಕಬ್ಬು, ಭತ್ತ ಹಾಗೂ ತರಕಾರಿಯನ್ನು ಬೆಳೆಯುತ್ತಾರೆ. ಈ ತಾಲ್ಲೂಕಿನ ಚಿಟಗುಪ್ಪ ಹುಡಗಿ, ನಂದಗಾಂವ ಮೊದಲಾದ ಊರುಗಳು ತರಕಾರಿ ಬೆಳೆಗಳಿಗೆ ಪ್ರಸಿದ್ಧವಾಗಿವೆ.

ಒಟ್ಟು ೪೬,೩೦೦ ಹೆಕ್ಟಗಳಷ್ಟು ಬೆಳೆ ಬೆಳೆಸಲು ಗುರಿ ಇಟ್ಟುಕೊಂಡು ೪೫,೦೩೮ ಹೆಕ್ಟರಗಳಷ್ಟು ಸಾಧನೆ ಮಾಡುವ ಈ ತಾಲ್ಲೂಕಿನ ರೈತರು ತುಂಬಾ ಶ್ರಮಜೀವಿಗಳು. ಒಕ್ಕಲುತನಕ್ಕೆ ರೈತರು ಹೆಚ್ಚಾಗಿ ತಿಪ್ಪೆ ಗೊಬ್ಬರ ಉಪಯೋಗಿಸುತ್ತಾರೆ. ವ್ಯವಸಾಯ ಈ ಭಾಗದಲ್ಲಿ ಹೆಚ್ಚಾಗಿ ಎತ್ತುಗಳಿಂದಲೇ ನಡೆಯುತ್ತದೆ. ಇತ್ತೀಚೆಗೆ ಭೂಮಿ ಉಳುಮೆ ಟ್ರ್ಯಾಕ್ಟರ್ ಯಂತ್ರಗಳ ಬಳಕೆ, ರಾಶಿ ಮಾಡಲು ಯಂತ್ರಗಳ ಬಳಕೆ ಅಧಿಕವಾಗುತ್ತಿದೆ.

೫) ಕೈಗಾರಿಕೆಗಳು :-

ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯು ಹುಮನಾಬಾದ ನಗರದ ಪಶ್ಚಿಮ ದಿಕ್ಕಿನಲ್ಲಿ ಗುಲಬರ್ಗಾ ರಸ್ತೆಯ ಪಕ್ಕದಲ್ಲಿ ೬೫೦೦ ಎಕ್ಕರೆ ಭೂಮಿಯನ್ನು ಸ್ವಾಧಿನ ಪಡಸಿಕೊಂಡಿದೆ. ಅದೇ ರೀತಿ ಧುಮ್ಮನಸೂರು ಗ್ರಾಮದ ಹೊರವಲಯದಲ್ಲಿ

ಬೀದರ ರಸ್ತೆಯ ಪಕ್ಕಕ್ಕೆ ಭೂಮಿಯನ್ನು ಖರೀದಿಸಿದೆ. ಅಲ್ಲಿ ಸುಮಾರು ೧೧೬ ಪ್ಲಾಟುಗಳು ತಯಾರಿಸಿ ಕರ್ಣ ಗ್ಯಾಸ ಸಿಲಿಂಡರ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ, ಸ್ಪಿನಿಂಗ್ ಮಿಲ್ ಸ್ಟೋನ್ ಪಾಲಿಶಿಂಗ್, ದಾಲಮಿಲ್, ಟೈರಗಳ ತಯಾರಿಕೆ ಮೊದಲಾದವುಗಳು ಪ್ರಾರಂಭವಾಗಿವೆ.

ತಾಲ್ಲೂಕಿನ ಚಿಟಗುಪ್ಪ ಗ್ರಾಮದಲ್ಲಿ ಪ್ರಾಚೀನ ಕಾಲದಿಂದ ಕೈಮಗ್ಗದ ಬಟ್ಟೆಗಳು ತಯಾರಿಸಲಾಗುತ್ತಿದೆ. ಇಲ್ಲಿ ಒಟ್ಟು ೧೬೫ ಕೈಮಗ್ಗಗಳಿವೆ. ಅದೇ ರೀತಿ ದುಬಲಗುಂಡಿಯಲ್ಲಿ ೬೫ ಹಾಗೂ ಹಳ್ಳಿಖೇಡ (ಬಿ) ಯಲ್ಲಿ ೯ ಮಗ್ಗಗಳಿವೆ. ಪ್ರಾರಂಭದಲ್ಲಿ ಪಿಟ್‌ಲೂಮ್ ಮಗ್ಗ ಹೊಂದಿದ ಈ ಊರುಗಳು ಈಗ ಫ್ರೇಮಲೂಮ ಮಗ್ಗಗಳು ಸರಕಾರದ ಸಹಾಯದಿಂದ ಪಡೆದಿರುತ್ತವೆ. ಚಿಟಗುಪ್ಪ ನಗರದಲ್ಲಿ ಕೈಮಗ್ಗ ಉದ್ಯಮ ಅಭಿವೃದ್ಧಿ ಪಡಿಸಲು ಸರಕಾರ ೩೦ ಕುಟಿರಗಳ ಕಾರ್ಯಗಾರ ಪ್ರಾರಂಭಿಸಿ ಅವರಿಗೆ ಯೋಗ್ಯ ಬೆಲೆಯಲ್ಲಿ ನೂಲ ಒದಗಿಸಿ, ತಯಾರಾದ ಬಟ್ಟೆಯನ್ನು ಯೋಗ್ಯ ಬೆಲೆಯಲ್ಲಿ ಖರೀದಿಸುವ ವ್ಯವಸ್ಥೆ ಮಾಡಲಾಗಿದೆ. ಚಿಟಗುಪ್ಪದಲ್ಲಿ ಚರ್ಮದ ಕೈಗಾರಿಕೆ ಮೊದಲಿನಿಂದಲು ತುಂಬಾ ಪ್ರಸಿದ್ಧಿ ಪಡೆದಿದೆ. ಇಲ್ಲಿಯ ಕುಶಲ ಕರ್ಮಿಯೊಬ್ಬನು ೩೦ ಗ್ರಾಂ ತೂಕದ ಚಡಾವು ಎಂಬ ಚಪ್ಪಲಿಗಳು ತಯಾರಿಸಿ ಭಾರತದ ಪ್ರಥಮ ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದ ಅವರಿಗೆ ಪ್ರೀತಿಯ ಕಾಣಿಕೆಯಾಗಿ ಸಲ್ಲಿಸಿದ್ದನಂತೆ. ಆದಕಾರಣ ಸರ್ಕಾರ ಈ ಉದ್ಯಮ ಅಭಿವೃದ್ಧಿ ಪಡಿಸಲು ಧುಮ್ಮನಸೂರು ಗ್ರಾಮದಲ್ಲಿ ೩೦ ಚರ್ಮ ಹದ ಮಾಡುವ ಕಾರ್ಖಾನೆಗಳು ನಿರ್ಮಿಸಿದೆ. ಆದರೆ ಅವುಗಳು ಯಾರು ಉಪಯೋಗಿಸದೇ ಹಾಳು ಬಿದ್ದು ಹೋಗಿವೆ.

೬) ಶಿಕ್ಷಣದ ಪ್ರಗತಿ :-

ಶಿಕ್ಷಣದ ಪ್ರಗತಿಯಲ್ಲಿ ರಾಜ್ಯದ ಇನ್ನುಳಿದ ಭಾಗಗಳಿಗಿಂತ ಈ ಭಾಗ ತುಂಬಾ ಹಿಂದುಳಿದಿದ್ದು, ನಿಜಾಮನ ಆಡಳಿತದಲ್ಲಿ ಶಿಕ್ಷಣದ ಮಾಧ್ಯಮ ಉರ್ದುಭಾಷೆಯಾಗಿತ್ತು. ಶಿಕ್ಷಣ ಮಾಧ್ಯಮ ಉರ್ದುವಾದರೂ ಮನೆ ಮಾತು ಕನ್ನಡವಾಗಿತ್ತು. ೧೯೫೮ ರಲ್ಲಿ ಪ್ರಾರಂಭವಾದ ನಿಜಾಮನ ಶಿಕ್ಷಣ ಖಾತೆಯು ಸುಮಾರು ೮೦ ವರ್ಷಗಳವರೆಗೆ ಕಾರ್ಯನಿರ್ವಹಿಸಿತು. ಇಲ್ಲಿ ಶಿಕ್ಷಕಿತರಾದವರು ಹೆಚ್ಚಾಗಿ ಉರ್ದು ಬಲ್ಲವರೆ ಕಾಣಸಿಗುತ್ತಾರೆ. ನಿಜಾಮನ ಆಳ್ವಿಕೆಯಲ್ಲಿ ಉರ್ದುವಿನ ಜೊತೆಗೆ ಪರ್ಶಿಯನ ಭಾಷೆಯು ಕೂಡ ಚಲಾವಣೆಯಲ್ಲಿತ್ತು. ಮುಂದೆ ಇಂಗ್ಲೀಷರ ಕಾಲದಲ್ಲಿ ಶಿಕ್ಷಣದಲ್ಲಿ ಇಂಗ್ಲೀಷ ಭಾಷೆ ಕಲಿಯಲು ಅನುವು ದೊರೆಯಿತು. ೧೯೫೬ ರಲ್ಲಿ ಭಾಷಾವಾರು ಪ್ರಾಂತ್ಯಗಳು ರಚನೆ ಮೇಲೆ ಪ್ರತಿಯೊಂದು ರಾಜ್ಯದಲ್ಲಿ ಆಯಾ ಜನರ ಆಡುಭಾಷೆ ಅಲ್ಲಿಯ ಆಡಳಿತ ಭಾಷೆಯಾಯಿತು. ಹೀಗಾಗಿ ಕರ್ನಾಟಕದಲ್ಲಿ ಕನ್ನಡವು ಶಿಕ್ಷಣದ ಅಧಿಕೃತ ಭಾಷೆಯಾಗಿ ಹಳ್ಳಿಹಳ್ಳಿಗೆ ಕನ್ನಡ ಶಾಲೆಗಳು

ಪ್ರಾರಂಭವಾದವು. ಈಗ ಹುಮನಾಬಾದ ತಾಲ್ಲೂಕಿನಲ್ಲಿ ೫೦ ಶಿಶು ವಿಹಾರಗಳು ೨೧೧ ಅಂಗನವಾಡಿಗಳು, ೩೩ ಕಿರಿಯ ಪ್ರಾಥಮಿಕ ಶಾಲೆಗಳು ೧೫೨ ಹಿರಿಯ ಪ್ರಾಥಮಿಕ ಶಾಲೆಗಳು ೫೦ ಪ್ರೌಢ ಶಾಲೆಗಳು ಇವೆ. ಹುಮನಾಬಾದ ನಗರದಲ್ಲಿ ೬, ಚಿಟಗುಪ್ಪದಲ್ಲಿ ೨, ದುಬಲಗುಂಡಿ, ಬೇಮಳಖೇಡಾ, ತಾಳಮಡಗಿ, ಹಳ್ಳಿಖೇಡ (ಬಿ) ಮನ್ನಾಎಖೇಳ್ಳಿ, ನಿರ್ಣಾಗಳಲ್ಲಿ ತಲಾ ಒಂದರಂತೆ ೨೦ ಕಿರಿಯ ಮಹಾ ವಿದ್ಯಾಲಯಗಳು ಹಾಗೂ ಹುಮನಾಬಾದ ಪಟ್ಟಣದಲ್ಲಿ ಶ್ರೀ ವೀರಭದ್ರೇಶ್ವರ ಶಿಕ್ಷಣ ಸಂಸ್ಥೆಯ, ದೀಕ್ಷಾ ಭೂಮಿ ಶಿಕ್ಷಣ ಸಂಸ್ಥೆಯ, ವಿವೇಕಾನಂದ ಶಿಕ್ಷಣ ಸಂಸ್ಥೆಯ, ಹಿರಿಯ ಮಹಾವಿದ್ಯಾಲಯಗಳು, ಚಿಟಗುಪ್ಪದಲ್ಲಿ ಕರ್ನಾಟಕ ಶಿಕ್ಷಣ ಸಂಸ್ಥೆಯ ಹಿರಿಯ ಮಹಾ ವಿದ್ಯಾಲಯ ಪ್ರಾರಂಭವಾಗಿ ಉಚ್ಚಮಟ್ಟದ ಶಿಕ್ಷಣ ನೀಡುತ್ತಿವೆ. ಅಲ್ಲದೇ ಹುಮನಾಬಾದ ಪಟ್ಟಣದಲ್ಲಿ ೫ ಶಿಕ್ಷಣ ಮಹಾವಿದ್ಯಾಲಯಗಳು, ೪ ಪ್ರಾಥಮಿಕ ಶಿಕ್ಷಕರ ತರಬೇತಿ ಕೇಂದ್ರಗಳು ಇವೆ. ಅಲ್ಲದೇ ತಾಂತ್ರಿಕ ಶಿಕ್ಷಣದ ತರಬೇತಿಯನ್ನು ೧೦ ಕೈಗಾರಿಕಾ ತರಬೇತಿ ಕೇಂದ್ರಗಳು ನೀಡುತ್ತಿವೆ.

೭) ಇತಿಹಾಸ :-

ಈ ಧರಿನಾಡನ್ನು ಮೌರ್ಯರು, ಶಾತವಾಹನರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಾಕತೀಯರು, ಖಿಲ್ಜಿ, ಬಹುಮನಿ, ಮೊಗಲರು, ಹೈದ್ರಾಬಾದ ನಿಜಾಮ ಮೊದಲಾದವರು ಆಳಿದರು. ಕಲ್ಯಾಣ ಚಾಲುಕ್ಯ ಅರಸನಾದ ಆರನೇ ವಿಕ್ರಮಾದಿತ್ಯನು ಈ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯ ಕೈಗೊಂಡು, ಕನ್ನಡ ಭಾಷೆ, ಶಿಲ್ಪಕಲೆ, ಸಂಗೀತ, ನಾಟಕ, ನೃತ್ಯಕಲೆ, ಅತ್ಯಂತ ಎತ್ತರಕ್ಕೆ ಬೆಳೆಸಲು ಸಹಕರಿಸಿದ್ದನೆಂದು ಇತಿಹಾಸ ಹೇಳುತ್ತದೆ. ಆರನೆ ವಿಕ್ರಮಾದಿತ್ಯನು ಅನೇಕ ಗುಡಿ ಗುಂಡಾರಗಳನ್ನು ಕಟ್ಟಿಸಿದನು. ಅವುಗಳಲ್ಲಿ ಹುಮನಾಬಾದ ತಾಲ್ಲೂಕಿನ ಜಲಸಂಗಿ ಗ್ರಾಮದ ಕಲ್ಮೇಶ್ವರ ದೇವಾಲಯ ಬಹಳ ಪ್ರಸಿದ್ಧವಾಗಿತ್ತೆಂದು ತಿಳಿದುಬರುತ್ತದೆ. ಇವನ ಅವಧಿಯ ಈಗಿನ ಘಾಟಬೋರಾಳ ಎಂಬ ಗ್ರಾಮ ಘಟ್ಟಿಬೋರವಳ್ಳಿ ಎಂಬ ಹೆಸರಿನಿಂದ ಕರೆಯಲ್ಪಡುವ ಅಗ್ರಹಾರವಾಗಿತ್ತು. ಈ ದೊರೆಯ ಕಲಾಸೇವೆ, ಕಲಾವೈಭವ, ಕಲಾಮಂದಿರಗಳ ನಿರ್ಮಾಣ ಉತ್ತಮ ಕೃತಿಗಳ ರಚನೆ ಶಿಲಾ ಶಾಸನಗಳು ಇಂದಿಗು ಸಾರುತ್ತವೆ.

ಈಗಿನ ಹುಮನಾಬಾದ ನಗರವನ್ನು ಚಾಲುಕ್ಯ ದೊರೆಯಾದ ಎರಡನೆ ಜಯಸಿಂಹನು ಕ್ರಿ.ಶ. ೧೦೧೫ ರಿಂದ ೧೦೪೩ ರ ವರೆಗೆ ಆಳಿದನೆಂದು ತಿಳಿದುಬರುತ್ತದೆ. ಕ್ರಿ.ಶ. ೧೦೪೦ ರಲ್ಲಿ ಈ ನಗರಕ್ಕೆ ಜಯಸಿಂಹ ನಗರವೆಂಬ ಹೆಸರನ್ನಿಟ್ಟು ಈತನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಆ ಪ್ರಾಚೀನ ಕಾಲದಿಂದ ಈ ಭಾಗದ ಅನೇಕ ಹಳ್ಳಿಗಳು, ವ್ಯಾಪಾರದ ಕೇಂದ್ರಗಳಾಗಿದ್ದವು. ಚಿಟಗುಪ್ಪ, ಹಳ್ಳಿಖೇಡ,

ಘಟ್ಟಿಬೋರವಳ್ಳಿ, ಕನಕಟ್ಟಾ ಮುಂತಾದ ಗ್ರಾಮಗಳಿಂದ ವ್ಯಾಪಾರ ಭರದಿಂದ ನಡೆಯುತ್ತಿತ್ತು. ಅನೇಕ ವ್ಯಾಪಾರಿಗಳು ವಣಿಕ ಸಂಘಗಳನ್ನು ಕಟ್ಟಿಕೊಂಡು ಸುಮಾರು ೫೦೦ ರಿಂದ ಸಾವಿರ ಹೇರತ್ತುಗಳನ್ನು ಬಳಸಿಕೊಂಡು ದೂರ ದೂರದ ನಗರಗಳಿಂದ ಅವಶ್ಯಕ ವಸ್ತುಗಳು ಪೂರೈಸುತ್ತಿದ್ದರು. ಅಮರಾವತಿಯಿಂದ ಸಕ್ಕರೆ, ಕುಮಟಾದಿಂದ ಬಂಗಾರ, ಹೈದ್ರಾಬಾದದಿಂದ ಉಪ್ಪು ಹೀಗೆ ಅನೇಕ ಭಾಗಗಳಿಂದ ಸರಕುಗಳು ಹೇರತ್ತಿನ ಮೇಲೆ ಹಾಕಿಕೊಂಡು ೫-೬ ತಿಂಗಳವರೆಗೆ ಪ್ರಯಾಣಿಸಿ ವ್ಯಾಪಾರದಲ್ಲಿ ತೊಡಗುತ್ತಿದ್ದರು.

ಚಾಲುಕ್ಯ ೩ ನೇ ತೈಲಪನ ನಂತರ ಕಲಚೂರಿ ಬಿಜ್ಜಳನು ಅಧಿಕಾರಕ್ಕೆ ಬಂದನು. ಇವನ ಆಳ್ವಿಕೆಯು ಶಾಂತಿ, ಸ್ಥಿರತೆಗಳು, ಕಳೆದುಕೊಂಡು ಪ್ರಜೆಗಳು ನೆಮ್ಮದಿಯಿಂದ ಇರದಿದ್ದರೂ ಕೂಡ ಕರ್ನಾಟಕದ ಇತಿಹಾಸ ಮತ್ತು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮಹತ್ವಪೂರಿತ ಅಧ್ಯಾಯವೆನಿಸಿತು. ಬಿಜ್ಜಳನ ಮಹಾ ಮಂತ್ರಿಗಳಾದ ಬಸವಣ್ಣನವರು ರಾಜ್ಯದ ಅನುಭವ ಮಂಟಪವೆಂಬ ಧಾರ್ಮಿಕ ಸಂಸತ್ತನ್ನು ಕಟ್ಟಿ ಬೆಳೆಸಿದ್ದರು. ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿ ನಾಡಿನ ನಾನಾ ಭಾಗಗಳಿಂದ ಅನೇಕ ಶರಣರು ಕಲ್ಯಾಣಕ್ಕೆ ಬಂದು ಅನುಭವ ಮಂಟಪದ ಸದಸ್ಯರಾದರು. ಹುಮನಾಬಾದ ತಾಲ್ಲೂಕಿನ ಮುಗ್ಧ ಸಂಗಯ್ಯ, ಶರಣರ ಬೊಮ್ಮಣ್ಣ, ಮೋಳಗಿಯ ಮಾರಯ್ಯಾ, ಘಟ್ಟಿಬೋರವಳ್ಳಿಯ ಘಟ್ಟಿವಾಳಯ್ಯಾ ಪ್ರಮುಖರಾಗಿದ್ದಾರೆ. ಹುಮನಾಬಾದ ನಗರದಲ್ಲಿ ೧೦೧ ಮಠಗಳಿದ್ದವೆಂದು ತಿಳಿದುಬರುತ್ತದೆ.

ಕಲ್ಯಾಣದ ಕಲಚೂರಿಗಳ ನಂತರ ದೇವಗಿರಿಯ ಯಾದವರು, ವಾರಂಗಲ್ಲಿನ ಕಾಕತಿಯರು, ಬಹುಮನಿ, ಬರಿದಶಾಹಿ ಮನೆತನಗಳು ಈ ಪ್ರದೇಶವನ್ನು ಆಳಿದರು. ಬಹುಮನಿಯ ಅರಸರಲ್ಲಿ ೩ ನೇ ಮಹ್ಮದ್ ಶಹಾನ ಕಾಲ ಅವರ ಮನೆತನದ ಕೀರ್ತಿ ಹೆಚ್ಚಲು ಕಾರಣವಾಯಿತು. ಅವನ ಮಂತ್ರಿ ಮಹ್ಮದ್ ಗವಾನ ತುಂಬಾ ಚತುರನಾಗಿದ್ದನು. ಬಹುಮನಿ ಅರಸರ ಕಾಲದಲ್ಲಿ ಈ ಪ್ರದೇಶ ಸಂಪತ್ಭರಿತವಾಗಿತ್ತು. ಇವರ ನಂತರ ಔರಂಜೇಬನು ಸ್ವಲ್ಪ ಕಾಲ ಈ ಭಾಗ ಆಳಿದನು. ಕ್ರಿ.ಶ. ೧೭೦೮ ರಲ್ಲಿ ಮರಾಠರು ಆಳಿದರು. ಔರಂಗಜೇಬನ ಮರಣದ ನಂತರ ಮರಾಠರ ರಾಜ್ಯದಲ್ಲಿ ಆಂತರಿಕ ವ್ಯವಹಾರದಲ್ಲಿದ್ದ ಭಯ ತಪ್ಪಿಹೋಗಿ ಪೂರ್ಣಸ್ವಾತಂತ್ರ್ಯ ದೊರಕಿತು. ಮೊಘಲ ಸಾಮ್ರಾಜ್ಯದ ಸಾರ್ವಭೌಮತ್ವವನ್ನು ಮಾನ್ಯತೆ ಮಾಡುವೆನೆಂಬ ಕರಾರಿನ ಮೇಲೆ ಮೊಘಲರು ಸಂಭಾಜಿಯ ಮಗ ಸಾಹುವನ್ನು ಸೆರಮನೆಯಿಂದ ಬಿಡುಗಡೆ ಮಾಡಿದರು. ಅಲ್ಲದೇ ಮರಾಠರು ದಕ್ಷಿಣದ ೬ ಪ್ರಾಂತಗಳ ಚೌಥಾಯಿ ವಸೂಲು ಮಾಡಲು ಮೊಘಲರು ಅನುಮತಿ ಕೊಟ್ಟರು. ಕ್ರಿ.ಶ. ೧೭೦೮ ಜನೆವರಿ ೧೨ ರಲ್ಲಿ ಸಾಹು ಪಟ್ಟಕ್ಕೇರಿದನು. ಗಂಗಾಧರ ಪ್ರಲ್ಹಾದನನ್ನು ತನ್ನ ಪ್ರತಿನಿಧಿಯನ್ನಾಗಿ,

ಬಾಜಿರಾವ ಪಂತ ಪಿಂಗಳೆಯನ್ನು ಪೇಶ್ವೆಯನ್ನಾಗಿ ಹಾಗೂ ಧನಾಜಿ ಜಾಧವನನ್ನು ಸೇನಾಪತಿಯಾಗಿ ನೇಮಿಸಿಕೊಂಡನು.

ಧನಾಜಿ ಜಾಧವನು ನಿರಂತರವಾಗಿ ಚೌಥಾಯಿ ಕರವಸೂಲಿ ಮಾಡಿದನು. ಆ ಸಮಯದಲ್ಲಿ ಹುಮನಾಬಾದ ನಗರಕ್ಕೆ ಹತ್ತಾರು ಸಲ ಬಂದು ಹೋದನು. ಇವನ ಮರಣದ ನಂತರ ಇವನ ಮಗ ಚಂದ್ರಸೇನ ಜಾಧವ ಸೇನಾಪತಿಯಾದನು. ಇವನು ಹುಮನಾಬಾದ ನಗರಕ್ಕೆ ಹಳೆಯ ಹೆಸರನ್ನೇ ಕೊಟ್ಟು "ಜಯಸಿಂಗ ನಗರ" ವೆಂದು ಕರೆದನು. ಇವನ ನಂತರ ಇವನ ಮಗನಾದ ರಾಮಚಂದ್ರ ಜಾಧವನು ಹುಮನಾಬಾದ ನಗರವನ್ನು ಅಭಿವೃದ್ಧಿ ಪಡಿಸಿದನು. ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಪಟ್ಟಣದ ಸುತ್ತಲು ಕೋಟೆ ಕಟ್ಟಿಸಿದನು.

ಅಡಿಟಿಪ್ಪಣಿಗಳು :-

೧) ಭರತೇಶಗೌಡ. ಶಿ. ಶಿರಿಯಪ್ಪಗೌಡರ; ನರಗುಂದ ತಾಲೂಕಿನಲ್ಲಿ ಸ್ವಾತಂತ್ರ್ಯ ಚಳುವಳಿಯ ಒಂದು ಅಧ್ಯಯನ. ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಾದರ ಪಡಿಸಿದ ಪ್ರಬಂಧ. ೨೦೦೩. ಪುಟ -೧.

೨) ಶಿಂತ್ರಿ ಸರೋಜನಿ ; ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಮಹಿಳೆಯರ ಪಾತ್ರ. ೧೯೮೬ ಪುಟ ೨-೩.

೩) ಮಾರಪ್ಪ ಡಿ.ಪಿ; ಗಾಂಧೀ ವಿಚಾರ ವಾಹಿನಿ (ಆರಿಸಿಕೊಂಡ ಆಣಿಮುತ್ತುಗಳು) ಬೆಂಗಳೂರು ೧೯೯೪ ಪುಟ ೨೯.

೪) ಭರತೇಶಗೌಡ. ಶಿ. ಶಿರಿಯಪ್ಪಗೌಡರ; ನರಗುಂದ ತಾಲೂಕಿನಲ್ಲಿ ಸ್ವಾತಂತ್ರ್ಯ ಚಳುವಳಿಯ ಒಂದು ಅಧ್ಯಯನ. ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಎಮ್.ಫಿಲ್ ಪದವಿಗಾಗಿ ಸಾದರ ಪಡಿಸಿದ ಪ್ರಬಂಧ. ೨೦೦೩. ಪುಟ -೨.

೫) ದಿವಾಕರ್ ಆರ್.ಆರ್. ; ಸತ್ಯಾಗ್ರಹ ಬೆಂಗಳೂರು ೧೯೮೫ ಪುಟ ೧.

೬) -ಅದೇ- ಪುಟ ೨-೩

೭) ಶರ್ಮಾ.ತಿ.ತಾ; 'ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ; ಬೆಂಗಳೂರು ೧೯೫೭ ಪುಟ ೮.

೮) ಕಾಮತ ಸೂರ್ಯನಾಥ : ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಭಾಗ-೧ ಪುಟ ೧೧೯೬.

೯) -ಅದೇ- ಪುಟ ೧೨೨೧.

ಅಧ್ಯಾಯ -೩

ನಿಜಾಮ ಮತ್ತು ಬ್ರಿಟೀಷರ ಸಂಬಂಧಗಳು (೧೮೫೭-೧೯೪೮)

ಭಾರತದ ಸ್ವಾತಂತ್ರ್ಯ ಚಳುವಳಿಯು ಆಧುನಿಕ ವಿಶ್ವದ ಇತಿಹಾಸದಲ್ಲಿ ಒಂದು ಮಹತ್ವದ ಘಟನೆಯಾಗಿದೆ. ಕ್ರಿ.ಶ. ೧೪೯೮ ರಲ್ಲಿ ವಾಸ್ಕೋಡಿಗಾಮನು ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿದನಂತರ ಪೋರ್ಚಗೀಸರು ಡಚ್ಚರು, ಇಂಗ್ಲೀಷರು ಮತ್ತು ಫ್ರೆಂಚರು ಭಾರತದಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ಅವರಲ್ಲಿ ಆಂಗ್ಲರು ಮೇಲುಗೈ ಸಾಧಿಸಿ ಭಾರತೀಯರ ಅನೈತಿಕತೆ ಮತ್ತು ಅರಾಜಕತೆಯ ಲಾಭ ಪಡೆದು ಭಾರತದಲ್ಲಿ ತಮ್ಮ ರಾಜಕೀಯ ಚಕ್ರಾಧಿಪತ್ಯವನ್ನು ಸ್ಥಾಪಿಸಿದರು. ನಮ್ಮದು ಉನ್ನತ ಚರಿತ್ರೆ, ಉನ್ನತ ಸಂಸ್ಕೃತಿ, ಉನ್ನತ ಪರಾಕ್ರಮವನ್ನು ಹೊಂದಿದ ಪ್ರಾಚೀನ ದೇಶ. ಅದಾಗ್ಯೂ ಕೂಡ "ಮರೆಯಿಲ್ಲದ ಮತ ಮೌಢ್ಯತೆಯ ಬ್ರಾಹ್ಮಣ ವಿಷಸಂಸ್ಕೃತಿ ಭ್ರಷ್ಟಾಚಾರಗಳಿಂದಾಗಿ ಕರಡುಗಟ್ಟಿ ಅಜ್ಞಾನಾಂಧಕಾರದಲ್ಲಿ ಸಾವಿರಾರು ವರ್ಷಗಳಿಂದ ಪರದಾಡುತ್ತಿರುವ ನಮ್ಮ ದೇಶಕ್ಕೆ ವಿಜ್ಞಾನ ಗಣಿಗಳು, ನಾಗರಿಕತೆಯ ನಿರ್ಮಾಪಕರು ಆದ ಫಿರಂಗಿ ದೊರೆಗಳು ಎಡಗಾಲನ್ನು ನೆಲಕ್ಕುರುವುದರೊಂದಿಗೆ ಹೇಗೋ ಕೊನೆಗೆ ಒಳ್ಳೆಯ ದಿನಗಳು ಬಂದವು. ಅವರು ದಯೆ ತೋರಿ ವಿದ್ದೆ ಬುದ್ದಿ ಕಲಿಸಿದ್ದರಿಂದಾಗಿ ನಾವು ಹಳೆಯ ತೆವಲಿನಿಂದ ಹೊರಬಿದ್ದು ಶಾಸ್ತ್ರಿಯವಾಗಿ, ತರ್ಕಬದ್ಧವಾಗಿ ಯೋಚಿಸುವುದು ಹೇಗೆಂಬುವುದನ್ನು ಕಲಿತುಕೊಂಡು, ಆಧುನಿಕ ಸಂಸ್ಕಾರವನ್ನು ಅಳವಡಿಸಿಕೊಂಡೆವು"[೧]. ಇಷ್ಟು ಉಪಕಾರಗಳನ್ನು ಮಾಡಿದ ಫಿರಂಗಿ ದೊರೆಗಳು ಸಾಮ್ರಾಜ್ಯವನ್ನು ಉಳಿಸಿಕೊಂಡು ತಮ್ಮ ಅಧಿಪಥ್ಯಕ್ಕೆ ಎದುರಿಲ್ಲದಂತೆ ನೋಡಿಕೊಳ್ಳಲು, ವಲಸೆ ರಾಜ್ಯದಿಂದ ಇನ್ನಿಲ್ಲದ ಲಾಭ ಗಳಿಸಲು, ತಮ್ಮ ದೇಶದ ಸ್ವಾರ್ಥ ಸಾಧನೆಗಳನ್ನು ರಕ್ಷಿಸಿಕೊಳ್ಳಲು ನಮಗೆ ಘೋರವಾದ ಅಪಕಾರಗಳನ್ನು ಸಹ ಮಾಡಿದರು. ಆಗ ನಮ್ಮ ರಾಷ್ಟ್ರಪಿತರು, ಪಿತಾಮಹಾರು ಸೇರಿ ಕಾರ್ಯಪ್ರವರ್ತರಾಗಿ ಫಿರಂಗಿ ದೊರೆಗಳ ವಿಜ್ಞತೆಯಲ್ಲಿ ವಿಶ್ವಾಸವಿರಿಸಿ, ಅನೇಕ ವಿಜ್ಞಾಪಜನಗಳನ್ನು ಮಾಡಿಕೊಳ್ಳಲಾಗಿ ವಿಜ್ಞಾಪನೆಗಳಿಂದ ಕೆಲಸ ನಡೆಯದಿದಾಗ, ಅಹಿಂಸಾಯುತವಾಗಿ ಬ್ರಿಟೀಷ ಸಾಮ್ರಾಜ್ಯಕ್ಕೆ ಹೆಚ್ಚಿಗೇನೂ ಅಪಾಯವಾಗದ ರೀತಿಯಲ್ಲಿ ಗೌರವಯುತವಾಗಿ ಚಳುವಳಿಗಳನ್ನು ಮಾಡಿ, ಲಾಠಿಗಳಿಗೆ ದೇಹವನ್ನೊಡ್ಡಿ, ಅನೇಕ ದಶಕಗಳ ಕಾಲ ವಿರೋಚಿತವಾಗಿ ಕಷ್ಟಪಟ್ಟು ಕೊನೆಗೆ ಸ್ವಾತಂತ್ರ್ಯವನ್ನು ಸದಾಧಿಸಿದರು.

ದೇಶ ಚರಿತ್ರೆಯನ್ನು ಕುರಿತು, ನಮ್ಮ ಅಧುನಿಕ ರಾಷ್ಟ್ರ ನಿರ್ಮಾಣವನ್ನು ಕುರಿತು, ಅದರ ಘನ ಪರಂಪರೆಯನ್ನು ಕುರಿತು ಹೀಗೆ ಚೆಂದದಾದ, ಚೊಕ್ಕದಾದ ರಾಷ್ಟ್ರೀಯ ಏಕಾಭಿಪ್ರಾಯವೊಂದು ಒನಗೂಡಿದ ಮೇಲೆ ಅದಕ್ಕೆ,

ಅನುಗುಣವಾಗಿಲ್ಲದ ಘಟನೆಗಳೂ ಘರ್ಷಣೆಳು ನಮಗೆ ಕಿರಿಕ್ಕೆನಿಸುತ್ತದೆ. ನಮಗೆ ತಿಳಿದಿರುವ ರಾಷ್ಟ್ರೀಯತೆ ನಾವು ತಿಳಿದಿರುವ ರಾಷ್ಟ್ರೀಯ ಚಳುವಳಿ ಕಣ್ಣು ಬಿಡುವುದಕ್ಕೆ ಅನೇಕ ದಶಕಗಳ ಪೂರ್ವದಲ್ಲಿಯೇ ೧೮೫೭ ರಲ್ಲಿ ಈ ದೇಶದ ತುಂಬೆಲ್ಲಾ ಲಕ್ಷಾಂತರ ಜನರು ಆಯುಧಗಳನ್ನು ಹಿಡಿದು ವಿದೇಶಿ ರಾಕ್ಷಸಿಗಳ ಮೇಲೆ ವರ್ಷಕ್ಕಿಂತಲೂ ಮೇಲ್ಪಟ್ಟು ಭೀಕರ ಹೋರಾಟವನ್ನು ನಡೆಸಿದರು [೨] ಆದರೆ ದೇಶದ ನಾನಾ ಭಾಗಗಳಲ್ಲಿ ನಡೆದ ಹೋರಾಟಗಳು ಕರ್ನಾಟಕದ ಹಲವು ಭಾಗಗಳಲ್ಲಿ ತೀವ್ರರೂಪದಲ್ಲಿ ಘಟಿಸಿರುವುದು ಇಲ್ಲಿ ಉಲ್ಲೇಖನಾರ್ಹ ಆದರೂ ಸಹ ಬ್ರಿಟೀಷರ ಗುಲಾಮನಂತಿದ್ದ ಹೈದ್ರಾಬಾದ ಸಂಸ್ಥಾನದ ನಿಜಾಮನು ಈ ಭಾಗದ ಜನತೆಯ ಹೋರಾಟವನ್ನು ಹತ್ತಿಕ್ಕುವ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದನು. ಬೀದರ ಜಿಲ್ಲೆಯಾದ್ಯಂತ ಚಳುವಳಿ ತೀವ್ರ ರೂಪ ಪಡೆದಾಗ ಜನ ಸ್ವಾತಂತ್ರ್ಯ ಘೋಷಿಸಿಕೊಳ್ಳವರೆಂಬ ಭಯ ನಿಜಾಮನಿಗೆ ಕಾಡುತ್ತಿತ್ತು.

೧) ನಿಜಾಮ ಸಂಸ್ಥಾನದ ಹಿನ್ನಲೆ :-

ಹೈದ್ರಾಬಾದ ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟ ಹಾಗೂ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ನಡೆದ ಏಕೀಕರಣ ಹೋರಾಟದ ಚರಿತ್ರೆಯನ್ನು ಪೂರ್ಣವಾಗಿ ಅರಿಯಲು ಹಾಗೂ ಮಹತ್ವ ಗುರುತಿಸಲು ಈ ಸಂಸ್ಥಾನ ಹಾಗೂ ಪ್ರದೇಶಗಳಲ್ಲಿದ್ದ ಸರಕಾರದ ಸ್ವರೂಪ ಮತ್ತು ಆಳ್ವಿಕೆಗಳ ಚಾರಿತ್ರಿಕ ಅರಿವು ಅಗತ್ಯ. ಭಾರತದಲ್ಲಿ ಅತ್ಯಂತ ಶ್ರೀಮಂತವಾಗಿದ್ದ ಹೈದ್ರಾಬಾದ ಸಂಸ್ಥಾನವನ್ನು "ಮಿರ್ ಖಮರುದ್ದೀನ್ ಚಿನ್ ಖಲಿಚ್‌ಖಾನ್" ಎಂಬುವವನು ಸ್ಥಾಪಿಸಿದನು[೩] ಇವನು ಔರಂಗಜೇಬನ ಸೇನಾಧಿಪತಿಯಾಗಿದ್ದ. " ಖಾಜಿ ಉದ್ದೀನ್ ಖಾನ್ ಫಿರೋಜ್ ಜಂಗ್" ನ ಮಗನಾಗಿದ್ದ. ಫಿರೋಜ್ ಜಂಗನು ಮೊದಲ 'ಖಲೀಫ ಅಬುಬಕರ್‌ನ' ವಂಶಸ್ಥ ಎಂಬ ಪ್ರತೀತ ಇತ್ತು. ಔರಂಗಜೇಬನು ಮರಣಕ್ಕೆ ೬ ವರ್ಷ ಮೊದಲು ಅಂದರೆ ೧೭೧೩ ರಲ್ಲಿ ಚಕ್ರವರ್ತಿ 'ಫರೂಕ್ ಶಿಯಾರ್ ಮಿರ್ ಖಮರುದ್ದೀನ್' ನನ್ನ 'ನಿಜಾಮ ಉಲ್-ಮಲ್ಕ್ ಫಿರೋಜ್ ಜಂಗ್'[೪] ಎಂಬ ಬಿರುದಿನೊಂದಿಗೆ ದಖನ್‌ಗೆ ಸುಬೇದಾರನನ್ನಾಗಿ ನೇಮಿಸಿದನು. ಇವನು ಉತ್ತರದ ಮಾಳವದಿಂದ ದಕ್ಷಿಣದ ತಿರುಚಿನಾಪಳ್ಳಿಯವರೆಗೆ ಹರಡಿದ್ದ ಈಡಿ ದಖನ ಭಾಗವನ್ನು ಅಳುತ್ತಿದ್ದ. ಮುಂದೆ ಮೊಘಲ ಸುಲ್ತಾನ 'ಮಹಮ್ಮದ್ ಶಹಾ' ಇವನಿಗೆ 'ಅಸಫ್ ಜಹಾ' ಎಂಬ ಬಿರುದನ್ನು ನೀಡಿದನು[೫] ಇವನ ವಂಶಸ್ಥರು ಇಂದಿಗೂ ಇದೇ ಅಸಫ್ ಜಹಾ ಎಂಬ ಬಿರುದಿನಿಂದಲೇ ಗುರುತಿಸಲ್ಪಡುತ್ತಾರೆ. ೧೭೨೪ ರ ಶಿಖಾರ್ ಖೇಡ್ ಎಂಬ ಯುದ್ಧದಲ್ಲಿ 'ಮುಖೇರಿಜ್‌ಖಾನ್' ನನ್ನು ಸೋಲಿಸಿ ನಿಜಾಮನು ಸ್ವತಂತ್ರ್ಯ ಹೈದ್ರಾಬಾದ ಸಂಸ್ಥಾನವನ್ನು ದಕ್ಷಿಣ ಭಾರತದಲ್ಲಿ ಸ್ಥಾಪಿಸಿದನು. ದೆಹಲಿಯ

ಚಕ್ರವರ್ತಿ ಜೊತೆಗಿನ ಸಂಬಂಧವನ್ನು ಕಡೆದು ಹಾಕಿಕೊಂಡನು. ಹೀಗೆ ಸ್ವತಂತ್ರ ರಾಜ್ಯವನ್ನು ಘೋಷಿಸಿ ಹೈದ್ರಾಬಾದ ನಗರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು, ಅಲ್ಲಿ ಅರಮನೆ ಸ್ಥಾಪಿಸಿದನು. ಹೀಗೆ ಔರಂಗಜೇಬನ ಮರಣದ ನಂತರ ಉಂಟಾದ ಮೊಘಲ ಸಾಮ್ರಾಜ್ಯದ ವಿಘಟನೆಯೊಂದಿಗೆ ಅಸಪ್‌ಜಹಾನ ವಂಶಸ್ಥರ ಆಳ್ವಿಕೆ ಪ್ರಾರಂಭವಾಯಿತು.

ಕ್ರಿ.ಶ. ೧೭೨೪ ರಿಂದ ೧೯೪೮ ರ ಸೆಪ್ಟೆಂಬರ್ ೧೩ ರ ಪೊಲೀಸ ಕಾರ್ಯಚರಣೆಯವರೆಗೆ ಹೈದ್ರಾಬಾದ ಸಂಸ್ಥಾನವನ್ನು ಆಳಿದ ಏಳು ಮಂದಿ ನಿಜಾಮರ ವಿವರ ಹೀಗಿದೆ.

೧) ಮಿರ್ ಖಮರುದ್ದಿನ್ ಚಿನ್ ಖಿಲಜಿ ಖಾನ್ (೧೭೨೪–೧೭೪೮)

೨) ನವಾಬ್ ನಿಜಾಮ್ ಅಲಿಖಾನ್ (೧೭೬೧–೧೮೦೩)

೩) ನವಾಬ್ ಸಿಕಂದರ್ ಬಹಾದ್ದೂರ್ (೧೮೦೪–೧೮೨೮)

೪) ನಸೀರು ಡೌಲಾ ಬಹಾದ್ದೂರ್ (೧೮೨೯–೧೮೫೭)

೫) ಅಪಜಾಲು ದೌಲಾ ಬಹಾದ್ದೂರ್ (೧೮೫೭–೧೮೬೯)

೬) ಮೀರ ಮೆಹಬೂಬ್ ಅಲಿಖಾನ್ ಬಹಾದ್ದೂರ್ (೧೮೬೯–೧೯೧೧)

೭) ನವಾಬ್ ಮಿರ್ ಉಸ್ಮಾನ್ ಅಲಿಖಾನ್ ಬಹಾದ್ದೂರ್ (೧೯೧೧–೧೯೪೮)[೬]

ಜೀವನದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಸಂಪತ್ತು ಮತ್ತು ಅಧಿಕಾರವನ್ನೇ ಒಲೈಸುತ್ತಿದ್ದ 'ಮೀರ್ ಉಸ್ಮಾನ್ ಅಲಿಖಾನ್ ಬಹಾದ್ದೂರ್' ಅಗಸ್ಟ್ ೨೯, ೧೯೧೧ ರಂದು ಅಧಿಕಾರಕ್ಕೆ ಬಂದನು. ೧೯೩೭ ರಿಂದ ೧೯೪೮ ರ ವರೆಗೆ ಈತನ ಅಸ್ಥಾನದಲ್ಲಿ ಪ್ರಧಾನ ಮಂತ್ರಿಗಳಾಗಿ ಸೇವೆ ಸಲ್ಲಿಸಿದವರ ವಿವರ ಹೀಗಿದೆ.

- ಅಕ್ಬರ ಹೈದರಿ
- ಸರ್ ಮಿರ್ಜಾ ಇಸ್ಮಾಯಿಲ್
- ಚಟ್ಟಾರಿಯ ನವಾಬ
- ಮೀರ್ ಲಿಯಾಖ್ ಅಲಿ[೭]

'ಮಜ್ಲೀಸ್–ಎ–ಇಥ್ಥಹಾದ್–ಉಲ್ ಮುಸ್ಲೆಮಿನ್' ಸಂಸ್ಥೆಯ ಅತ್ಯಂತ ಪ್ರಭವಶಾಲಿ ವ್ಯಕ್ತಿಗಳಾಗಿದ್ದವರೆಂದರೆ 'ನವಾಬ್ ಬಹಾದ್ದೂರ್ ಯಾರ್ ಜಂಗ್' ಮತ್ತು ಕಾಸಿಂ ರಜ್ವಿ ನಿಜಾಮನ ಆಶಿರ್ವಾದ ಹೊಂದಿದ್ದ ಇದ್ದೆಹಾದ್ ಸಂಸ್ಥಾನದ ರಾಜಕೀಯ ಹಾಗೂ ಧಾರ್ಮಿಕ ಹಿತಾಶಕ್ತಿಗಳನ್ನು ಪೋಸಿಸುತ್ತಿದ್ದ ಬಹುಮುಖ್ಯ ಕೋಮು ಶಕ್ತಿಯಾಗಿತ್ತು.

ಹೈದ್ರಾಬಾದ್ ಸಂಸ್ಥಾನದ ಜನತೆ ಸ್ವತಂತ್ರ ಸಾರ್ವಭೌಮ ಅಧಿಕಾರವನ್ನು ಘೋಷಿಸಿಕೊಳ್ಳುವ ಒಂದೇ ಒಂದು ಅವಕಾಶವನ್ನು ನಿಜಾಮನು ಬಿಡುತ್ತಿರಲಿಲ್ಲ. ಬ್ರಿಟೀಷ್ ರೆಸಿಡೆಂಟನ ಸಲಹೆಯನ್ನು ದಿಕ್ಕರಿಸಿ ತನ್ನದೇ 'ಘಸಲಿಯಲ್ಲಿ ಫರಮಾನ್‌ಗಳನ್ನು ಜಾರಿಗೊಳಿಸುತ್ತಿದ್ದ. ಆದರೆ ವಿಸ್ತರಣಾವಾದಿಗಳು ಹಾಗೂ ಯುದ್ಧ ನಿಪುಣರಾದ ಪೇಶ್ವೆಗಳ ಅಧೀನದಲ್ಲಿದ್ದ ಮರಾಠರು ನಿಜಾಮನನ್ನು ಶಾಂತಿ, ನೆಮ್ಮದಿಯಿಂದ ಇರಲು ಬಿಡಲಿಲ್ಲ. ೧೭೬೧ ರ ಪಾಣಿಪತ್ ಕದನದ ವಿನಾಶಕಾರಿ ಪರಿಣಾಮ ವಿದೇಶಿ ಆಕ್ರಮಣಕಾರರ ರಾಜಕೀಯ ಪ್ರಭುತ್ವ ಹಾಗೂ ಮೈಸೂರಿನಲ್ಲಿ ಹೈದರಾಲಿಯ ಉದಯ ಮುಂತಾದವು ನಿಜಾಮನಿಗೆ ಆತಂಕ ಉಂಟು ಮಾಡಿತು. ಈ ನಿಜಾಮನಲ್ಲಿ ಹೈದರಾಲಿಯ ರಾಜಕೀಯ ಚಾಣಕ್ಷತನವಾಗಲಿ ಅಥವಾ ನಾನಾ ಫಡ್ನವಿಸನ ರಾಜಕೀಯ ಮುತ್ಸದಿತನವಾಗಲಿ ಅಥವಾ ಮಿಲಿಟರಿ ಜ್ಞಾನವಾಗಲಿ ನಿಜಾಮನಲ್ಲಿರಲಿಲ್ಲ. ಇದರಿಂದಾಗಿ ನೆರೆಹೊರೆಯ ರಾಜಕೀಯ ಶತ್ರುಗಳ ಅಕ್ರಮಣವನ್ನು ತಡೆಯಲು ಹಾಗೂ ತನ್ನ ಸ್ವಾತಂತ್ರ್ಯ ಮತ್ತು ಸೀಮಿತ ಸಾರ್ವಭೌಮತ್ವವನ್ನು ಕಾಯ್ದುಕೊಳ್ಳಲು ಅಂದು ಪ್ರವರ್ಧಮಾನಕ್ಕೆ ಬರುತ್ತಿದ್ದ. ಬ್ರಿಟೀಷರ ನೇರವನ್ನು ಸಹಜವಾಗಿ ನಿಜಾಮನು ಬಯಸಿದನು. ಬ್ರಿಟೀಷ ಗವರ್ನರ್ ಜನರಲ್ ಲಾರ್ಡ್ ವೆಲ್ಲೆಸ್ಲಿಯ ಸಹಾಯಕ ಸೈನ್ಯ ಪದ್ದತಿಯ ಒಪ್ಪಂದಕ್ಕೆ ೧೭೯೮ ರಲ್ಲಿ ನಿಜಾಮನು ಸಹಿಹಾಕಿದನು. ಇದರೊಂದಿಗೆ ನಿಜಾಮನು ತನ್ನ ಸ್ವಾತಂತ್ರ್ಯವನ್ನು ಬ್ರಿಟೀಷರಲ್ಲಿ ಒತ್ತೆಯಿಟ್ಟನು. ಈ ಒಪ್ಪಂದದ ಪ್ರಕಾರ ನಿಜಾಮನು ೬ ಬಟಾಲಿಯನ್ ಸೈನಿಕರಿಂದ ಕೂಡಿದ್ದ ಸಹಾಯಕ ಸೈನ್ಯದ ವಾರ್ಷಿಕ ೨೪ ಲಕ್ಷ ೧೭ ಸಾವಿರ ರೂಪಾಯಿಗಳನ್ನು ಭರಿಸಬೇಕಾಯಿತು. ಅಲ್ಲದೇ ನಿಜಾಮ ಮತ್ತು ಪೇಶ್ವೆಯ ನಡುವಿನ ರಾಜಕೀಯ ಸಂಬಂಧವನ್ನು ನಿರ್ಧರಿಸುವ ಅಧಿಕಾರ ಬ್ರಿಟೀಷರ ಪಾಲಾಯಿತು.

ಭಾರತದಲ್ಲಿ ಬ್ರಿಟೀಷರು ತಮ್ಮ ಪರಮಾಧಿಕಾರವನ್ನು ಕಾಯ್ದುಕೊಳ್ಳಲು ಮತ್ತು ಮರಾಠಾ ಮತ್ತು ಮೈಸೂರು ಶಕ್ತಿಗಳನ್ನು ನಿಯಂತ್ರಿಸಲು ಹೈದ್ರಾಬಾದ ಸಂಸ್ಥಾನವನ್ನು ಒಂದು 'ಬಫರ್' ರಾಜ್ಯವನ್ನಾಗಿ ಬಳಸಿಕೊಂಡರು. ೧೮೫೭ ರ ಸ್ವಾತಂತ್ರ್ಯ ಸಂಗ್ರಾಮದ ಅಲೆಗಳನ್ನು ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಹರಡದಂತೆ ತಡೆದಿದ್ದನ್ನು ಗಮನಿಸಿದರೆ, ಬ್ರಿಟೀಷರಿಗೆ ನಿಜಾಂ ಶಕ್ತಿಯ ಅನಿವಾರ್ಯತೆ ಗೊತ್ತಾಗುತ್ತದೆ. ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿನ ನಿಜಾಮನು ಬ್ರಿಷರಿಗೆ ೩೭೫ ಲಕ್ಷ ಹಣ ಮತ್ತು ಸೇನಾ ತುಕಡಿಗಳನ್ನು ಕಳುಸಿದನು. ಎರಡನೇ ಜಾಗತಿಕ ಯುದ್ಧದ ಕಾಲಕ್ಕೆ ಹೈದ್ರಾಬಾದ ಸಂಸ್ಥಾನದ ಎಲ್ಲಾ ಉದ್ದಿಮೆಗಳು ಬ್ರಿಟೀಷರಿಗೆ ಪೂರೈಸುವ ಯುದ್ಧೋಪಕರಣ ಉತ್ಪಾದನೆಯಲ್ಲಿ ತೊಡಗಿದವು. ಹೀಗೆ ನಿಜಾಮ ಸಂಸ್ಥಾನ ತನ್ನ ಅಸಿತ್ವ ರಕ್ಷಿಸಿಕೊಳ್ಳಲು ಬ್ರಿಟೀಷ ಸಾಮ್ರಾಜ್ಯದ ಅನನ್ಯ ಭಕ್ತರಾಗಿದ್ದರು.

ಇದಕ್ಕೆ ಪ್ರತಿಫಲವಾಗಿ ಬ್ರಿಟೀಷ ಸರ್ಕಾರವು ನಿಜಾಮನಿಗೆ "ಹೀಟ್ ಎಕ್ಸಾಲ್ಟೆಡ್ ಹೈನೆಸ್" ಹಾಗೂ "ಫೇತಫುಲ ಅಲೈ ಆಫ್ ದಿ ಬ್ರಿಟೀಷ ಗವರ್ನ್‌ಮೆಂಟ್" ಎಂಬ ಬಿರುದುಗಳನ್ನು ನೀಡಿ ಗೌರವಿಸಿತು[೮]. ಈ ಹಿನ್ನಲೆಯಲ್ಲಿ ಬ್ರಿಟೀಷ ಸರ್ಕಾರವು ನಿಜಾಮನಿಗೆ ಅನೇಕ ಸೌಲಭ್ಯಗಳನ್ನು ಮತ್ತು ಆಂತರಿಕ ಅಧಿಕಾರವನ್ನು ದೊರಕಿಸಿತು. ನಿಜಾಮನು ತನ್ನ ಸಂಸ್ಥಾನದಡಿ ತನ್ನದೇ ಆದ ಸ್ವತಂತ್ರ್ಯ ಧ್ವಜ, ರಾಷ್ಟ್ರಗೀತೆ, ಸೈನ್ಯ ನಾಣ್ಯ ಸಾರಿಗೆ, ರೈಲ್ವೆ, ಅಂಚೆ, ಆಕಾಶವಾಣಿ ಮತ್ತು ಶಿಕ್ಷಣ ವ್ಯವಸ್ಥೆಯನ್ನು ಹೊಂದಿದ್ದನು.

೨) ಮಿರ್ ಉಸ್ಮಾನ್ ಅಲಿಖಾನ್ ಬಹಾದ್ದುರ್ (೧೯೧೧-೧೯೪೮)

ಮನುಷ್ಯನಿಗೆ ಆಸೆ ಆಕಾಂಕ್ಷೆಗಳಿರುವುದು ಸಹಜ. ಆದರೆ ಅವುಗಳು ತಮ್ಮ ಉಲ್ಲೆಯನ್ನು ಮೀರಿದಾಗ ಹಲವಾರು ತೊಡಕುಗಳು ಉಂಟಾಗಿರುವುದು ಇತಿಹಾಸದ ಪುಟಗಳಿಂದ ಅರಿತುಕೊಳ್ಳಬಹುದಾಗಿದೆ. ಅಂತಹ ಒಂದು ಸ್ವಾರಸ್ಯಕರ ಘಟನೆ ಹೈದ್ರಾಬಾದ ಸಂಸ್ಥಾನದಲ್ಲಿ ಜನ್ಮ ತಾಳಿತು. ಬದುಕಿನಲ್ಲಿ ಎಲ್ಲಕ್ಕಿಂತ ಮಿಗಿಲಾಗಿ ಐಶ್ವರ್ಯ ಮತ್ತು ಅಧಿಕಾರವನ್ನೇ ಬಳಸುತ್ತಿದ್ದ ಮೀರ ಉಸ್ಮಾನ ಅಲಿ ಖಾನ್ ಬಹಾದ್ದೂರ ೧೯೧೧ ರ ಅಗಸ್ಟ್ ೨೯ ರಂದು ಅಧಿಕಾರಕ್ಕೆ ಬಂದನು. ಸ್ವಾತಂತ್ರ್ಯ ಸಂಗ್ರಾಮದ ಕಥಾವಸ್ತು ಇವರ ಆಳ್ವಿಕೆಯಾಗಿದೆ. ಇವನು ಕೃಶ, ವಾಮನ ಆಕಾರ ಕನ್ನಡಕಧಾರಿ. ಹಲವಾರು ಭವ್ಯ ಅರಮನೆಗಳನ್ನು ಕಟ್ಟಿಸಿಕೊಂಡು ಅವುಗಳಲ್ಲಿ ವಾಸಮಾಡುತ್ತಿದ್ದರು. ತೆಳುಕಡ್ಡಿಯ ಕನ್ನಡಕ, ತಾಹಮಹಲ್‌ದ ಗುಮ್ಮಟದಂತೆ ಕಾಣುವ ರುಮಾಲು ಸುತ್ತುತ್ತಿದ್ದರು. ಸರಕಾರಿ ಸಮಾರಂಭಗಳಿಗೆ ಮಾತ್ರ ಬಿಳಿ ಬಣ್ಣದ ಉದ್ದನೆಯ ಕೋಟು ಧರಿಸುತ್ತಿದ್ದರು. ಅದಕ್ಕೆ ಪದಕ ಹಾಗೂ ೬ ಹವನ್ಸ ಲೈಟು, ಅವರ ಗೈಡು ಎಂಬ ಶಬ್ದಗಳ್ಳುಳ್ಳ ಭಾರತೀಯ ಸಂಸ್ಥಾನಿಕರ ಲಾಂಛನ ಅಂಟಿಸಲಾಗಿರುತ್ತಿತ್ತು. ಸೂರ್ಯ ಕಿರಣಗಳು ಕ್ಷಿತಿಜವನ್ನು ಮುಟ್ಟುವುದಕ್ಕೆ ಮೊದಲೆ ನಿಜಾಮ ಏಳುತ್ತಿದ್ದರು. ಪ್ರಾರ್ಥನೆಯಾದ ನಂತರ ಸುಗಂಧ ಪರಿಮಳಭರಿತ ನೀರಿನಿಂದ ಸ್ನಾನ ಮಾಡುತ್ತಿದ್ದರು. ಸ್ನಾನದ ಸಂದರ್ಭದಲ್ಲಿ ಸೋಪು ಉಪಯೋಗಿಸುತ್ತಿರಲಿಲ್ಲ. ಆದರೆ ರಿತಾ ಎಂಬ ಕಾಯಿಯ ಪುಡಿ ಉಪಯೋಗಿಸುತ್ತಿದ್ದರು. ಹಾಲು ಕುಡಿದ ನಂತರ ಚಿನ್ನದ ತಟ್ಟೆಯಲ್ಲಿ ಅತ್ಯಂತ ಸಾಧಾ ಊಟ ಮಾಡುತ್ತಿದ್ದರು. ಸರಕಾರಿ ಸಮಾರಂಭಗಳಲ್ಲಿ ಅತಿಥಿಗಳಿಗೆ, ಅವರು ಹಿಂದಿನ ರಾತ್ರಿ ಮುತ್ತುಗಳನ್ನು ತಿಂದ ನವಿಲುಗಳ ಮಾಂಸವನ್ನು ಉಣಬಡಿಸುವಲ್ಲಿ ಬಹಳಷ್ಟು ಖುಷಿ ಪಡುತ್ತಿದ್ದರು. ಸಾಮಾನ್ಯವಾಗಿ ಇವರು ಉಪಯೋಗಿಸುತ್ತಿದ್ದ ಪ್ರೀತಿಯ ಖಾದ್ಯಗಳೆಂದರೆ ಪರಿಮಳಭರಿತ "ಮುಗಲೈ ಪಿಲೆ" ಹಾಗೂ "ಚಿಗರೆ ಮಾಂಸದ ಕಬಾಬ" ಇಡೀ ದಿನ ಸರಕಾರಿ ಕಾಗದ ಪತ್ರಗಳೊಂದಿಗೆ

ವ್ಯವಹರಿಸುತ್ತಿದ್ದರು. ಉರ್ದು ಮತ್ತು ಪರ್ಶಿಯನ್ ಭಾಷೆಯ ಉಪಾಸಕರಾಗಿದ್ದರು. ಇವರ ಆಡಳಿತ ಅವಧಿಯಲ್ಲಿ ಹೈದ್ರಾಬಾದ ಕರ್ನಾಟಕದ ತುಂಬೆಲ್ಲಾ ನ್ಯಾಯಂಗ ವ್ಯವಸ್ಥೆ ಬಹು ಪರಿಣಾಮಕಾರಿಯಾಗಿತ್ತು.

೩) ೧೮೫೭ ರ ದಂಗೆ ಮತ್ತು ಪರಿಣಾಮ

೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಹೈದ್ರಾಬಾದ ಸಂಸ್ಥಾನವನ್ನು ೫ ನೇ ನಿಜಾಮ "ಅಪಜಾಲು ದೌಲಾ ಬಹಾದ್ದೂರ" ಎಂಬುವನು ಆಳುತ್ತಿದ್ದನು. ಒಂದನೇ ಸಾಲಾರ ಜಂಗನು ಈತನ ಪ್ರಧಾನ ಮಂತ್ರಿಯಾಗಿದ್ದ. ಪ್ರಥಮ ಸ್ವಾತಂತ್ರ ಸಂಗ್ರಾಮದ ಕಾಲಕ್ಕೆ ಪೇಶ್ವೆ ನಾನಾ ಸಾಹೇಬನ ಕರೆಯಂತೆ ಕರ್ನಾಟಕದ ಹೆಮ್ಮೆಗೆ ಕೆಂಚನಗೌಡ, ಮುಂಡರಗಿ ಭೀಮರಾವ, ಸುರಪುರದ ರಾಜಾ ವೆಂಕಟಪ್ಪ ನಾಯಕ ಇನ್ನೂ ಅನೇಕರು ಬ್ರಿಟೀಷರ ಆಳ್ವಿಕೆ ಮತ್ತು ದಾಸ್ಯದಿಂದ ಮುಕ್ತರಾಗಲು ಪ್ರಯತ್ನಿಸಿದರು. ಆದರೆ ಹೈದ್ರಾಬಾದ ಸಂಸ್ಥಾನದಲ್ಲಿನ ಪರಿಸ್ಥಿತಿ ಇವುಗಳಿಂದ ಭಿನ್ನವಾಗಿದ್ದಿತ್ತು. ಕಾರಣ ನಿಜಾಮನು ಬ್ರಿಟೀಷರೆಂಬ ಅಂಕುಶವನ್ನು ಸಂಸ್ಥಾನದಲ್ಲಿನ ರಾಷ್ಟ್ರೀಯ ಚಳುವಳಿಯನ್ನು ಹತ್ತಿಕ್ಕಲು ಉಪಯೋಗಿಸಿಕೊಂಡಿದ್ದನು. ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಬೇಕೆಂಬ ಈ ಭಾಗದ ಜನತೆಯ ಆಶೋತ್ತರಗಳಿಗೆ ನಿಜಾಮನು ಮತ್ತು ಆತನ ಮಂತ್ರಿ ಸಾಲರಜಂಗರು ತಣ್ಣಿರೆರೆಚಿದರು. ಬ್ರಿಟೀಷ ಸಾಮ್ರಾಜ್ಯದ ವಿರುದ್ದ ನಡೆಯುತ್ತಿದ್ದ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯನ್ನು ಹತ್ತಿಕ್ಕಲು ಹೈದ್ರಾಬಾದ ನಿಜಾಮನ ಬೆಂಬಲ ಅತೀ ಅವಶ್ಯಕವೆಂಬ ಅಂಶವನ್ನು ಬಾಂಬೆ ಪ್ರಾಂತದ ಗವರ್ನರನು ಗವರ್ನರ ಜನರಲ್‌ಗೆ ಬರೆದ ಒಂದು ಪತ್ರದಲ್ಲಿ ಹೀಗಿದೆ. "ನಿಜಾಮನು ಕೈಬಿಟ್ಟರೆ ಎಲ್ಲವು ಕೈಬಿಟ್ಟಂತೆ" ಇದು ಇವರಿರ್ವರ ಅವಲಂಬಿತನವನ್ನು ತೋರ್ಪಡಿಸುತ್ತದೆ.

೧೮೫೭ ರ ನಂತರ ನಿಜಾಮನು ಬ್ರಿಟೀಷರಿಂದ ಅಸಫ ಜಹಾದ್ವಜ, ರಾಷ್ಟ್ರಗೀತೆ, ಕಂದಾಯ, ಹಣದ ಮುದ್ರಣ, ಪೊಲೀಸ, ಬ್ಯಾಂಕ, ಸಾರಿಗೆ, ಉದ್ದಿಮೆ ಮುಂತಾದ ಕ್ಷೇತ್ರಗಳಲ್ಲಿ ಪೂರ್ಣ ಅಧಿಕಾರವನ್ನು ಪಡೆದುಕೊಂಡನು. ೧೯೨೬ ರಲ್ಲಿ ನಿಜಾಮನು ಇದನ್ನು ದುರುಪಯೋಗ ಪಡಿಸಿಕೊಂಡು ಬ್ರಿಟೀಷರಿಗೆ ಸಮಾನವಾದ ಸ್ಥಾನಮಾನ ಪಡೆಯಲು ಹವಣಿಸಿದನು. ಆದರೆ ಗವರ್ನರ ಜನರಲ್ ಲಾರ್ಡ ರೀಡಿಂಗನು ಅದನ್ನು ಹತ್ತಿಕ್ಕಿದನು. ಹೈದ್ರಾಬಾದ ಸಂಸ್ಥಾನವನ್ನು ತಮ್ಮ ಹತೋಟಿಗೆ ಪಡೆಯಲು ೧೯೨೭ ರ ಮಾರ್ಚ ೨೭ ರಂದು ನಾಲ್ವರು ಬ್ರಿಟೀಷ ಅಧಿಕಾರಿಗಳನ್ನು ನೇಮಿಸಲಾಯಿತು. ವೈಸರಾಯನು ತನ್ನ ಒಂದು ಸಂದೇಶದಲ್ಲಿ "ನಿಜಾಮನ

ಸಂಸ್ಥಾನವು ಭಾರತದ ಉಳಿದೆಲ್ಲಾ ಸಂಸ್ಥಾನಿಕರ ಸ್ಥಾನಮಾನಕ್ಕಿಂತ ಯಾವುದೇ ವಿಧದಲ್ಲಿ ಭಿನ್ನವಿಲ್ಲ"[೧೦] ಎಂದು ಘೋಷಿಸಿದನು.

ಈ ಕಾಲಕ್ಕೆ ೧೯೩೦ ರಲ್ಲಿ ಮಹಾತ್ಮಾ ಗಾಂಧೀಜಿಯವರ ಮುಂದಾಳತ್ವದಲ್ಲಿ ಜನತೆಯು "ಪ್ರಾತಿನಿಧ್ಯ ಕೊಡುವವರೆಗೆ ತೆರಿಗೆ ನೀಡುವುದಿಲ್ಲ" ಎಂಬ ಬಲವಾದ ನಿರ್ಧಾರಕ್ಕೆ ಬಂದಿತು. ಇದಕ್ಕೆ ಹೈದ್ರಾಬಾದ ಸಂಸ್ಥಾನ ಹೊರತಾಗಿರಲಿಲ್ಲ. ಕಾರಣ ನಿಜಾಮನು ಸಂಸ್ಥಾನದಲ್ಲಿನ ಸ್ವಾತಂತ್ರ ಚಳುವಳಿಯನ್ನು ಹತ್ತಿಕ್ಕಲು ಬ್ರಿಟೀಷ ಸರ್ಕಾರದ ನೆರವುಬೇಕೆಂಬ ನಿರ್ಧಾರಕ್ಕೆ ಬಂದನು. ಇದರಿಂದಾಗಿ ನಿಜಾಮನು ಬ್ರಿಟೀಷರ ನಿಷ್ಠಾವಂತ ಸಾಮಂತನಾಗಿ ಉಳಿದುಕೊಂಡನು. ಬ್ರಿಟೀಷ ರೆಸಿಡೆಂಟರು ಮತ್ತು ಇಥೆಹಾದನ ಮಾರ್ಗದರ್ಶನದಲ್ಲಿದ್ದ ಕೊನೆಯ ನಿಜಾಮ ಮೀರ ಉಸ್ಮಾನ ಅಲಿ ಖಾನ ಬಹಾದ್ದೂರ ಜನತೆಯ ಬೇಡಿಕೆಯ ಬಗ್ಗೆ ಜಾಣ ಕುರುಡುತನವನ್ನು ಪ್ರದರ್ಶಿಸುತ್ತಿದ್ದನು.

೪) ಸಂವಿಧಾನಾತ್ಮಕ ಸುಧಾರಣೆಗಳು :-

ಬ್ರಿಟೀಷರು ರೌಲತ್ ಕಾಯ್ದೆ, ಜಲಿಯನ್‌ವಾಲಾಬಾಗ ಹತ್ಯಾಕಾಂಡ, ಖಿಲಾಪತ ಚಳುವಳಿಗ ಪ್ರಭಾವದಿಂದಾಗಿ ಭಾರತದ ಮೇಲಿನ ತಮ್ಮ ದಮನಕಾರಿ ನೀತಿಯನ್ನು ತ್ಯಜಿಸಿ ಸ್ವಲ್ಪ ಮಟ್ಟಿನ ಸುಧಾರಣೆಗಳನ್ನು ಜಾರಿಗೆ ತರುವಂತೆ ಜಾಣತನ ಮಾಡಿದರು. ಅದರ ಫಲವಾಗಿ ೧೯೧೯ ರಲ್ಲಿ "ಮಾಂಟ್ಯಗೋ ಜೇಮ್ಸ್‌ಪೂರ್ಡ" ಸುಧಾರಣೆಗಳು ಅಸ್ತಿತ್ವಕ್ಕೆ ಬಂದವು. ಬ್ರಿಟೀಷ ಭಾರತದಲ್ಲಾಗುತ್ತಿದ್ದ ಏರುಪೇರುಗಳನ್ನು ಗಮನಿಸಿದ ನಿಜಾಮನು ೧೯೧೯ ರಲ್ಲಿಯೇ ರಾಜಕೀಯ ಸುಧಾರಣೆಗಳನ್ನು ತರುವ ಸಲುವಾಗಿ 'ಸರ್ ಅಲಿ ಇಮಾಮ್' ಆಯೋಗವನ್ನು ರಚಿಸಿದನು. ಆದರೆ ಇಮಾಮರ ರಾಜೀನಾಮೆಯಿಂದಾಗಿ ಕೆಲಸ ಅರ್ಧಕ್ಕೆ ನಿಂತಾಗ 'ಬಿ.ಆರ್. ಮುಗ್ದಮ್' ರನ್ನು ನೇಮಿಸಲಾಯಿತು. ಆದರೆ ಆಯೋಗ ನೀಡಿದ ಸಲಹೆ ಸೂಚನೆಗಳನ್ನು ನಿಜಾಮನು ಒಪ್ಪದೇ, ಸಂಸ್ಥಾನದ ಜನತೆಯನ್ನು ಸಂವಿಧಾನಿಕ ಸುಧಾರಣೆಗಳಿಂದ ದೂರವಿಡಲು ಪ್ರಯತ್ನಿಸಿದನು. ಆದ್ದರಿಂದ ಜಿಲ್ಲಾ ನಾಯಕರ ಮುಂದಾಳತ್ವದಲ್ಲಿ ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ಆರ್.ವಿ. ಬಿಡಪ, ರಾಮಚಂದ್ರ ವೀರಪ್ಪ, ಭಾಯಿ ಬನ್ಸಿಲಾಲ್, ಭಾಯಿ ಶಾಮಲಾಲ್, ಹಕೀಖತರಾವ, ಮಹಿಂದಕರ್, ಮುಂತಾದವರು ತಾಲ್ಲೂಕಿನಾದ್ಯಂತ ಜನರ ಗಮನ ಸೆಳೆಯಲು ಕರಪತ್ರ ಮುದ್ರಿಸಿ ಹಂಚುವ ಭೂಗತ ಕೆಲಸಕ್ಕೆ ಕೈಹಾಕಿದರು.

೧೯೩೫ ರ ಕಾಯ್ದೆಯಂತೆ ಬ್ರಿಟೀಷರು ಪ್ರಾಂತೀಯ ಸ್ವಾಯತ್ತತೆಯನ್ನು ಘೋಷಿಸಿದರು. ಇಂತಹ ಪ್ರಾಂತೀಯ ಸ್ವಾಯತ್ತೆಯನ್ನು ಹೈದ್ರಾಬಾದ ಸಂಸ್ಥಾನದ ಜನರು ಕೂಡ ಬಯಸಿದರು. ಆದರೆ ನಿಜಾಮನ ನೀತಿ ಇವೆಲ್ಲವುದರಗಳಿಂದ ಬಹು

ದೂರ ಉಳಿದಿತ್ತು. ೧೯೩೮ ರಲ್ಲಿ ರಾಜಕೀಯ ಮತ್ತು ನಾಗರಿಕ ಹಕ್ಕುಗಳಿಗಾಗಿ ಆರ್ಯ ಸಮಾಜ, ಹಿಂದು ಮಹಾಸಭಾ, ರಾಜ್ಯ ಕಾಂಗ್ರೇಸ್‌ಗಳ ನೇತೃತ್ವದಲ್ಲಿ ಸತ್ಯಾಗ್ರಹ ಚಳುವಳಿ ಬೀದರ ಜಿಲ್ಲೆಯಾದ್ಯಂತ ಫಸರಿಸಿತು. ಅದರಂತೆ ಹುಮನಾಬಾದ ತಾಲ್ಲೂಕಿನ ಬಹುತೇಕ ಹೋರಾಟಗಾರರು ಆರ್ಯ ಸಮಾಜ ಮತ್ತು ಹಿಂದು ಮಹಾ ಸಭಾದ ಕಾರ್ಯಕರ್ತರಾಗಿದ್ದರು. ಆರ್.ವಿ. ಬಿಡಪ, ರಾಮಚಂದ್ರ ವೀರಪ್ಪ, ಭಾಯಿ ಬನ್ಸಿಲಾಲ್, ಭಾಯಿ ಶಾಮಲಾಲ್, ಹಕೀಖತರಾವ, ಮಹಿಂದಕರ್, ಮುಂತಾದವರು ತಾಲ್ಲೂಕಿನಾದ್ಯಂತ ಸಂವಿಧಾನಿಕ ಸುಧಾರಣೆಗಳಿಗಾಗಿ ಚಳುವಳಿಗನ್ನು ಹೂಡಿದರು. ಇದರ ಪರಿಣಾಮವಾಗಿ ನಿಜಾಮನು ೧೯೩೮ ರಲ್ಲಿ "ದೇವದೂತ ಸಿದ್ಧಾಂತವನ್ನು" ಕೈಬಿಡಬೇಕಾಯಿತು.

ಅಂತಿಮವಾಗಿ ನಿಜಾಮನು ದಿವಾನ ಬಹಾದ್ದೂರ ಅರ್ವಮುದ್ದು ಅಯ್ಯಂಗಾರ್ ಅವರ ನೇತೃತ್ವದಲ್ಲಿ ಆಯೋಗವೊಂದನ್ನು ರಚಿಸಿದನು. ಇದು ೮೮ ಜನರಿರುವ ಪ್ರಜಾಪರಿಷತ್ತಿನಲ್ಲಿ ಶೇ ೧೨ ರಷ್ಟಿರುವ ಮುಸ್ಲಿಮರಿಗೆ ಶೇ ೫೦ ರಷ್ಟು ಹಾಗೂ ಶೇ ೮೮ ರಷ್ಟಿರುವ ಇನ್ನುಳಿದ ಹಿಂದುಗಳಿಗೆ ಶೇ ೫೦ ರಷ್ಟು ಪ್ರಾತಿನಿಧ್ಯವನ್ನು ನೀಡಲು ಸೂಚಿಸಿತು. ಒಂದೆಡೆ ಬ್ರಿಟೀಷರು ರಾಜಕೀಯ ಚಳುವಳಿಯನ್ನು ಹತ್ತಿಕ್ಕಲು ೧೯೩೫ ರ ಕಾಯ್ದೆಯನ್ನು ಬಳಸಿದರು. ಅದ್ದರಿಂದ ನೆಹರೂ ಅವರು ಅದನ್ನು ಕುರಿತು "೧೯೩೫ ರ ಕಾಯ್ದೆಯು ಗುಲಾಮಗಿರಿ ತನದ ಹೊಸ ಸನ್ನದು" [೧೧] ಎಂದು ಟೀಕಿಸಿದರು. ಇನ್ನೊಂದೆಡೆ ಬ್ರಿಟೀಷರ ಹಿಂಬಾಲಕನಂತೆ ವರ್ತಿಸುತ್ತಿದ್ದ ನಿಜಾಮನು ಕೂಡು ಈ ಕಾಯ್ದೆಯನ್ನು ಹೈದ್ರಾಬಾದ ಕರ್ನಾಟಕದ ರಾಷ್ಟ್ರೀಯವಾದಿಗಳ ಮನ ವೊಲಿಸಲು ಬಳಸಿಕೊಂಡನು ಎಂದು ಸ್ವಾಮಿ ರಮಾನಂದ ತೀರ್ಥರು ಟೀಕಿಸಿದರು.

೧೯೪೨ ರ ಹೊತ್ತಿಗೆ ಶಾಂತಿಧೂತ ಮಹಾತ್ಮಾ ಗಾಂಧಿಜೀಯವರು ಕೂಡ ತಮ್ಮ ತಾಳ್ಮೆ ಕಳೆದುಕೊಂಡವರಂತೆ ಕಂಡುಬಂದಿದ್ದು, ಬ್ರಿಟೀಷರಿಗೆ ನುಂಗಲಾರದ ತುತ್ತಾಯಿತು. ಕಾರಣ ಗಾಂಧೀಜಿಯವರು ೧೯೪೨ ರಲ್ಲಿ ಭಾರತ ಬಿಟ್ಟು ತೊಲಗಿ ಚಳುವಳಿಯ ಮೂಲಕ ಅಖಂಡ ಭಾರತೀಯರಿಗೆ ಮಡಿಯುವುದರಕ್ಕಿಂತ ಪೂರ್ವದಲ್ಲಿ ದೇಶಕ್ಕಾಗಿ ಏನಾದರು ಮಾಡಿ ಎಂಬ ಅರ್ಥದಲ್ಲಿ ಮಾಡು ಇಲ್ಲವೆ ಮಡಿ ಎಂದು ಉದ್ಗರಿಸಿದರು. ಅಂತೆಯೇ ಬಹುದಿನಗಳಿಂದಲು ಹುಮನಾಬಾದ ತಾಲ್ಲೂಕಿನಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ಚಳುವಳಿಗೆ ಹೊಸ ಕಳೆ ಬಂದಂತಾಗಿ ತೀವ್ರ ರೀತಿಯಲ್ಲಿ ಅದು ಮುಂದುವರೆಯಿತು. ಈ ಕಬ್ಬಿಣದ ಕಡಲೆಯ ಹೋರಾಟವನ್ನು ಮನಗಂಡ ಬ್ರಿಟನ್ ಪ್ರಧಾನಿ ಅಟ್ಲೆ ಫೆಬ್ರುವರಿ ೨೦ ೧೯೪೭ ರಂದು ಭಾರತದ ವಿಷಯಗಳಿಗೆ ಸಂಬಂಧಿಸಿದ ಘೋಷನೆಯನ್ನು ಹೊರಡಿಸಿ, ಜೂನ ೧೯೪೮ ರ

ವೇಳೆಗೆ ಭಾರತೀಯರಿಗೆ ಅಧಿಕಾರವನ್ನು ವರ್ಗಾವಣೆ ಮಾಡುವುದಾಗಿ ಸಾಮಾನ್ಯ ಸಭೆಯಲ್ಲಿ ಹೇಳಿಕೆಯೊಂದನ್ನು ನೀಡಿದನು. ಈ ಅಧಿಕಾರ ಹಸ್ತಾಂತರದ ಉಸ್ತುವಾರಿ ಲಾರ್ಡ್ ಮೌಂಟ್ ಬ್ಯಾಟನರ ಹೆಗಲೇರಿತು. ಈ ಕಾಲಕ್ಕೆ ಭಾರತಾದ್ಯಂತ ವ್ಯಾಪಿಸಿದ ಕೋಮು ಜ್ವಾಲೆಯ ವಿಷಮ ಸ್ಥಿತಿಯ ಕುರಿತು ಅಧ್ಯಯನವನ್ನು ಕೈಗೊಂಡ ಬ್ಯಾಟನ್ನರು ಈ ಸ್ಥಿತಿಯಲ್ಲಿ ಒಕ್ಕೂಟ ರಚನೆ ಅಸಾಧ್ಯವೆಂಬ ತೀರ್ಮಾನಕ್ಕೆ ಬಂದರು. ಅದರ ಪ್ರಕಾರ ಭಾರತವನ್ನು ಕೋಮುವಿನ ಆಧಾರದ ಮೇಲೆ ವಿಭಜಿಸುವುದು ಅನಿವಾರ್ಯವೆಂದು ಸಾರಲಾಯಿತು. ಬ್ರಿಟೀಷ ಪಾರ್ಲಿಮೆಂಟಿನ '೧೯೪೭ ರ ಭಾರತದ ಸ್ವಾತಂತ್ರ್ಯ ಅಧಿನಿಯಮದ' ಪ್ರಕಾರ ಅಖಂಡ ಭಾರತವನ್ನು ಎರಡು ಭಾಗಗಳಾಗಿ, ಭಾರತದ ಅಂದಿನ ೫೬೨ ಸಂಸ್ಥಾನಗಳು ಸ್ವತಂತ್ರವಾಗಿರುವ ಅಥವಾ ಭಾರತ ಮತ್ತು ಪಾಕಿಸ್ತಾನದ ಒಕ್ಕೂಟ ಸೇರುವ ಸ್ವಾತಂತ್ರವನ್ನು ನೀಡಲಾಯಿತು. ಈ ಅಂಶದ ಸದುಪಯೋಗ ಮಾಡಿಕೊಳ್ಳುವಲ್ಲಿ ಹೈದ್ರಾಬಾದ ಸಂಸ್ಥಾನದ ನಿಜಾಮನು ಕಾತುರನಾಗಿದ್ದನು. ಕಾರಣ ಹುಮನಾಬಾದ ತಾಲ್ಲೂಕಿನ ನಾಯಕರು ಮತ್ತು ಜನತೆ ಇಲ್ಲಿಯವರೆಗೆ ಸಂಸ್ಥಾನದ ಜನತೆಯ ಹೆಗಲಿಗೆ ಹೆಗಲು ನೀಡಿ ಬ್ರಿಟೀಷರ ವಿರುದ್ಧ ಹೋರಾಡಿದ ನಂತರ, ಮತ್ತೆ ಅಂತಹುದೇ ಸ್ವಾತಂತ್ರ ಚಳುವಳಿಗೆ ಅಣಿಗೊಳ್ಳುವ ಅನಿವಾರ್ಯತೆಗೆ ಸಿಲುಕಿಕೊಂಡರು. ಭಾರತದ ಹೃದಯ ಭಾಗದಲ್ಲಿ ಇನ್ನೊಂದು 'ಛೋಟಾ ಪಾಕಿಸ್ತಾನ' ಸ್ಥಾಪಿಸುವ ಹುಚ್ಚು ಸಾಹಸಕ್ಕೆ ನಿಜಾಮನು ಜೋತು ಬಿದ್ದು ಭಾರತದ ಒಕ್ಕೂಟ ಸೇರಲು ನಿರಾಕರಿಸಿದನು. ಕಾರಣ ಇಡೀ ಭಾರತವೇ ೧೫ ಆಗಸ್ಟ್ ೧೯೪೭ ರಂದು ಸ್ವಾತಂತ್ರದ ಉನ್ಮಾದದಲ್ಲಿ ತೇಲುತ್ತಿದ್ದರೆ, ಹೈದ್ರಾಬಾದ ಸಂಸ್ಥಾನದಡಿ ಜನತೆ ಇನ್ನು ನಿಜಾಮನ ಕಪಿಮುಷ್ಟಿಯಿಂದ ಹೊರಬಂದಿರಲಿಲ್ಲ. ಇದೆಲ್ಲದರ ಪರಿಣಾಮವಾಗಿ ಬೀದರ ಜಿಲ್ಲೆಯ ಪ್ರತಿ ತಾಲ್ಲೂಕುಗಳಲ್ಲಿ ನಡೆದ ಸ್ವಾತಂತ್ರ್ಯ ಮತ್ತು ಜವಾಬ್ದಾರಿ ಸರ್ಕಾರದ ಚಳುವಳಿಗಳು ಹುಮನಾಬಾದ ತಾಲ್ಲೂಕಿನಲ್ಲಿ ನಡೆಯಿತು. ತಾಲ್ಲೂಕಿನ ಹೋರಾಟವು ಆರ್.ವಿ.ಬಿಡಪ, ರಾಮಚಂದ್ರ ವೀರಪ್ಪ, ಭಾಯಿ ಬನ್ಸಿಲಾಲ್ , ಭಾಯಿ ಶಾಮಲಾಲ್, ಹಕೀಖತರಾವ, ಮಹಿಂದಕರ್, ಮುಂತಾದ ತಾಲ್ಲೂಕಿನ ವಿವಿಧೆಡೆಯ ನಾಯಕರುಗಳ ನೇತೃತ್ವದಲ್ಲಿ ನಡೆದು ಕೊನೆಗೆ ಭಾರತ ಸ್ವಾತಂತ್ರ ಸಂಗ್ರಾಮದ ಅಂತಿಮ ಯುದ್ಧ ಹೈದ್ರಾಬಾದ ಸಂಸ್ಥಾನದ ನೆಲದ ಮೇಲೆ ಸೆಪ್ಟೆಂಬರ್ ೧೩ ೧೯೪೮ ರಂದು ನಡೆಯಬೇಕಾಯಿತು.

ಅಡಿ ಟಿಪ್ಪಣಿಗಳು :

೧) ಮಹಾಬಲೇಶ್ವರಪ್ಪ ಬಿ.ಸಿ; ಹೈದ್ರಾಬಾದ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು ಪುಟ ಸಂಖ್ಯೆ : ೧೨

೨) –ಅದೇ– ಪುಟ ಸಂಖ್ಯೆ : ೧೨

೩) –ಅದೇ– ಪುಟ ಸಂಖ್ಯೆ : ೧೨

೪) –ಅದೇ– ಪುಟ ಸಂಖ್ಯೆ : ೧೨ ಮತ್ತು ೧೩

೫) –ಅದೇ– ಪುಟ ಸಂಖ್ಯೆ : ೧೩

೬) –ಅದೇ– ಪುಟ ಸಂಖ್ಯೆ : ೧೧

೭) –ಅದೇ– ಪುಟ ಸಂಖ್ಯೆ : ೧೫

೮) –ಅದೇ– ಪುಟ ಸಂಖ್ಯೆ : ೧೫

೯) ಸದಾಶಿವ ಕೆ.; ಸಮಗ್ರ ಭಾರತದ ಇತಿಹಾಸ ಪುಟ ಸಂಖ್ಯೆ : ೧೭೦

ಅಧ್ಯಾಯ – ೪

ಹುಮನಾಬಾದ ತಾಲ್ಲೂಕಿನಲ್ಲಿ ರಾಷ್ಟ್ರೀಯತೆಯ ಬೆಳವಣಿಗೆ

ರಾಷ್ಟ್ರೀಯತೆ ಎಂಬ ಪರಿಕಲ್ಪನೆಯು ಜನಾಂಗೀಯ ರಕ್ತ ಸಂಬಂಧದ ಅಥವಾ ಹುಟ್ಟಿನಿಂದ ಬಂದ ಸಂಬಂಧದ ಅರ್ಥವನ್ನು ಪಡೆದಿದೆ. ರಾಷ್ಟ್ರೀಯತೆಯು ಒಂದು ಭಾವನಾತ್ಮಕ ಗುಣವಾಗಿದೆ ಎಂದು ಹೇಳಬಹುದು. ತಮ್ಮ ಜನಾಂಗ, ತಮ್ಮ ಧರ್ಮ, ಭಾಷೆ, ಸಂಸ್ಕೃತಿ, ರಾಜ್ಯ ಹಾಗೂ ಪ್ರೀತಿಯೇ, ತಮ್ಮ ಮಾತೃಭೂಮಿಯನ್ನು ಪ್ರೀತಿಸುವುದು ಒಂದು ಅತ್ಯಂತ ಸಹಜ ಭಾವನೆಯಾಗಿದೆ. ತಾಯಿ ಮತ್ತು ತಾಯಿಯ ನಾಡು ಸ್ವರ್ಗಕ್ಕಿಂತ ಹೆಚ್ಚಾಗಿದೆ ಎಂದು ಹೇಳಬಹುದು.

ಈ ಭಾವನೆಯಿಂದ ಪ್ರೇರಿತರಾದ ಹೈದ್ರಾಬಾದ-ಕರ್ನಾಟಕದ ಖ್ಯಾತ ಪಂಡಿತರು, ಕವಿಗಳು, ತತ್ವಜ್ಞಾನಿಗಳು, ರಾಜಕೀಯ ನೇತಾರರು, ರಾಷ್ಟ್ರಿಯವಾದಿಗಳು, ಹುತಾತ್ಮರು ಜನರಲ್ಲಿ ಸ್ವಾತಂತ್ರ್ಯ ಹಾಗೂ ಏಕೀಕರಣದ ಬಗ್ಗೆ ಜಾಗೃತಿ ಮೂಡಿಸಲು ರಾಷ್ಟ್ರೀಯತೆಯನ್ನು ಬೋಧಿಸುವ ಹಾಗೂ ಪ್ರಕಾರ ಕಾರ್ಯವನ್ನು ಮಾಡಿದರು ಎಂದು ಹೇಳಬಹುದು. ಇದರ ಪರಿಣಾಮವಾಗಿ ವಿದೇಶಿ ಸಂಕೋಲೆಯಲ್ಲಿ ಬದುಕುತ್ತಿದ್ದ ಜನರು ವಿದೇಶಿ ಆಳ್ವಿಕೆಯಿಂದ ವಿಮೋಚನೆ ಪಡೆಯಲು ಪ್ರಯತ್ನ ಪಡುವಂತಾಯಿತು. ಈ ದಿಶೆಯಲ್ಲಿ ನಿಜಾಮನ ಹೈದ್ರಾಬಾದ ಸಂಸ್ಥಾನದಲ್ಲಿ ಜರುಗಿದ ಸ್ವಾತಂತ್ರ್ಯ ಸಂಗ್ರಾಮವು ತನ್ನದೇ ಆದ ದಾರಿ ತುಳಿದು ಕೊನೆಗೆ ಕ್ರಾಂತಿಯಾಗಿ ರೂಪಗೊಂಡಿತು. ಹುಮನಾಬಾದ ತಾಲ್ಲೂಕಿನಲ್ಲಿ ಜನರು ಸಾಮೂಹಿಕವಾಗಿ ಸ್ವಾತಂತ್ರ ಸಂಗ್ರಾಮಕ್ಕೆ ಧುಮುಕಲು ಮತ್ತು ರಾಷ್ಟ್ರೀಯತೆ ಭಾವನೆ ಬೆಳೆಯಲು ಕಾರಣವಾದ ಅಂಶಗಳು ಈ ಕೆಳಗಿನಂತೆ ನೋಡಬಹುದು.

೧) ಆರ್ಯಸಮಾಜ ಚಳುವಳಿ :

೧೮೫೭ ರಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರಿಂದ ಪ್ರಾರಂಭಿಸಲ್ಪಟ್ಟ ಆರ್ಯಸಮಾಜ ನಿಜಾಮನ ಅಧಿಪತ್ಯದಲ್ಲಿ ಧರ್ಮದ ಪತಾಕೆ ಹಿಡಿದು ಸಮಾಜಿಕ, ರಾಜಕೀಯ ಪುನರುತ್ಥಾನವನ್ನು ಸಂಘಟಿಸಿದ ಚಳುವಳಿಯಲ್ಲಿ ಚಾಲಕ ಶಕ್ತಿಯಾಗಿ ಕಾರ್ಯನಿರ್ವಹಿಸಿತು. ಸ್ವಾಮಿ ದಯಾನಂದ ಸರಸ್ವತಿಯವರು ಭಾರತೀಯ ಸಮಾಜದಲ್ಲಿನ ಮೂಢ ನಂಬಿಕೆಗಳನ್ನು ಆರ್ಯಸಮಾಜದ ಮುಖಾಂತರ ಹೋಗಲಾಡಿಸಲು ಪ್ರಯತ್ನಿಸಿದರು ಎಂದು ಹೇಳಬಹುದು. ಸ್ವಾಮಿ ದಯಾನಂದ ಸರಸ್ವತಿಯ ಸ್ಪೂರ್ತಿಯಿಂದ ಹೈದ್ರಾಬಾದ ಕರ್ನಾಟಕ ಸಂಸ್ಥಾನದಲ್ಲಿಯು ಅನೇಕ ಸ್ಥಳಗಳಲ್ಲಿ ಆರ್ಯಸಮಾಜದ ಅನೇಕ ಶಾಖೆಗಳು ಪ್ರಾರಂಭಿಸಲ್ಪಟ್ಟವು ಎಂದು

ಹೇಳಬಹುದು. ಅದೇ ರೀತಿಯಾಗಿ ರಾಷ್ಟ್ರ ಮತ್ತು ರಾಜ್ಯ ನಾಯಕರ ಸ್ಫೂರ್ತಿಯಿಂದ ಹುಮನಾಬಾದ ತಾಲ್ಲೂಕಿನಲ್ಲಿ ಅನೇಕ ಶಾಖೆಗಳು ಪ್ರಾರಂಭವಾದವು. ಈ ಭಾಗದಲ್ಲಿ ಆರ್ಯಸಮಾಜ ಗಳಿಸಿಕೊಂಡಷ್ಟು ಮಾನ್ಯತೆಯನ್ನು ಭಾರತದ ಉಳಿದ ಭಾಗಗಳಲ್ಲಿ ಗಳಿಸಿಕೊಂಡಿರಲಿಲ್ಲ. ಬಹುಸಂಖ್ಯಾತ ಹಿಂದುಗಳ ಮೇಲೆ ಅಲ್ಪಸಂಖ್ಯಾತ ಮುಸ್ಲಿಮರು ಆಡಳಿತವನ್ನು ಹೇರಿದ್ದೆ ಹೈದ್ರಾಬಾದ ಸಂಸ್ಥಾನದಲ್ಲಿ ಬಹುಮುಖ್ಯ ರಾಜಕೀಯ ಸಮಸ್ಯೆಯಾಗಿತ್ತು. ಆಡಳಿತ ವರ್ಗವು ಅನುಸರಿಸುತ್ತಿದ್ದ ಮುಸ್ಲಿಮೇತರರ ಮತಾಂತರ ದಟ್ಟವಾದ ದಾರಿದ್ರ್ಯ, ಅನಕ್ಷರತೆ ಮತ್ತು ಅಭದ್ರತೆಯ ಸ್ಥಿತಿಯಲ್ಲಿ ಹಿಂದುಗಳ ಮನಸ್ಸಿಗೆ ಆಘಾತವನ್ನುಂಟು ಮಾಡಿತ್ತು. ಶೋಷಣೆ ಹಾಗೂ ಬಲವಂತದ ಮತಾಂತರದ ಮೂಲಕ ಜವಾಬ್ದಾರಿ ಪ್ರತಿನಿಧಿಕ ಸರಕಾರವನ್ನು ಒತ್ತಾಯಿಸುತ್ತಿದ್ದ ಚಳುವಳಯಲ್ಲಿ ಭಾಗವಹಿಸುತ್ತಿದ್ದ ಮುಸ್ಲಿಮೇತರರ ಸಂಖ್ಯೆಯನ್ನು ಕಡಿಮೆ ಮಾಡಲು ನಿಜಾಮನು ಧೃಢ ನಿಶ್ಚಯ ಮಾಡಿದನು. ಈ ದಿಶೆಯಲ್ಲಿ ಕ್ರಿ.ಶ. ೧೯೩೦ ರಲ್ಲಿ ಒಂದು ಫರಮಾನು ಹೊರಡಿಸಿ ನಿಜಮನು ಮೈಫೂಸ್ ಮತ್ತು ಗಯ್ಯಾರ ಮೈಫೂಸ ಎಂಬ ಶಾಸನಗಳನ್ನು ಜಾರಿ ಗೊಳಿಸಿದನು. ಮೊದಲನೆ ಶಾಸನ ಮುಸ್ಲಿಂರ ಆಸ್ತಿ ಹಕ್ಕುಗಳ ರಕ್ಷಣೆಗೆ ವಿಶೇಷ ಅಧಿಕಾರಿವನ್ನು ಮತ್ತು ಮತಾಂತರ ಹೊಂದಿದ ಹಿಂದು ಧರ್ಮದ ದಲಿತ ವರ್ಗಕ್ಕೂ ಈ ವಿಶೇಷ ಅಧಿಕಾರಗಳನ್ನು ವಿಸ್ತರಿಸುವುದರ ಮೂಲಕ ನಿಜಾಮನ ಉದ್ದೇಶಕ್ಕೂ ಅವರೆಲ್ಲ ಬೆಂಬಲ ಕೊಡುವಂತೆ ಪ್ರಯತ್ನಿಸಲಾಯಿತು. ಈ ಶಾಸನ ಮುಸ್ಲಿಮರಿಗೆ ಹಿಂದುಗಳ ಜಮೀನನ್ನು ಖರೀದಿಸಲು ಅನುಮತಿ ನೀಡಿತು. ಆದರೆ ಎರಡನೇಯ ಶಾಸನದ ಪ್ರಕಾರ ಹಿಂದುಗಳು ಮುಸ್ಲಿಮರ ಜಮೀನನ್ನು ಖರೀದಿಸುವ ಹಾಗೂ ಸಾಲದ ಮೇಲೆ ಒತ್ತೆ ಇಟ್ಟು ಮುಸ್ಲಿಮರ ಭೂಮಿಯನ್ನು ವಶಪಡಿಸಿಕೊಳ್ಳುವ ಹಕ್ಕನ್ನು ಕಳೆದುಕೊಂಡರು. ಹೀಗೆ ರಾಜಕೀಯವನ್ನು ಧರ್ಮದಲ್ಲಿ ತುಳುಕುಹಾಕಿ ಹಿಂದುಗಳ ಸಿವಿಲ ಮತ್ತು ಧಾರ್ಮಿಕ ಹಕ್ಕುಗಳನ್ನು ಮೊಟಕುಗೊಳಿಸಿದನು.

ನಿಜಾಮನು ಈ ವಿವಿಧ ನೀತಿಗಳು ಹಿಂದುಗಳನ್ನು ರೊಚ್ಚಿಗೆಬ್ಬಿಸಿತು. ಆರ್ಯಸಮಾಜವು ಇದನ್ನೆಲ್ಲ ನೋಡಿಕೊಂಡು ಮೌನವಾಗಿರಲು ಸಾಧ್ಯವಾಗಲಿಲ್ಲ. ಹಿಂದುಗಳ ರಕ್ಷಣೆಗೆ ಆರ್ಯಸಮಾಜವು ಮುಂದಾಯಿತು. ನಿಜಾಮನ ದಬ್ಬಾಳಿಕೆ ಮತ್ತು ಮತಾಂತರದ ನೀತಿಯ ವಿರುದ್ಧ ಹೋರಾಟ ಮಾಡಲು ಜನರಲ್ಲಿ ಜಾಗೃತಿ ಮೂಡಿಸುವ ಹಾಗೂ ಅವರನ್ನು ಸಂಘಟಿಸುವ ಕೆಲಸದಲ್ಲಿ ಆರ್ಯಸಮಾಜ ಮುಂದಾಯಿತು. ಹೈದ್ರಾಬಾದಿನಲ್ಲಿ ಸ್ಥಾಪನೆಯಾಗಿದ್ದ ಆರ್ಯಸಮಾಜ ಪ್ರತಿನಿಧಿ ಸಭಾದ ನಿರ್ದೇಶನದಂತೆ ಪಂಡೀತ ಕೇಶವರಾವ ಕೋರೇಟಕರ್, ವಿನಾಯಕರಾವ ವಿದ್ಯಾಲಂಕಾರ್, ಪಂಡೀತ ರಾಮಚಂದ್ರ ಮತ್ತು ಪಂಡೀತ ನರೇಂದ್ರಜೀ ಮುಂತಾದ ನಾಯಕರು ಹೈದ್ರಾಬಾದ-ಕರ್ನಾಟಕದಾದ್ಯಂತ ಬಿರುಗಾಳಿಯಂತೆ ಸಂಚಾರ ಮಾಡಿ

ನಾಗರಿಕ ಹಾಗೂ ಧಾರ್ಮಿಕ ಹಕ್ಕುಗಳನ್ನು ಸಂರಕ್ಷಿಸಲು ಹೋರಾಟ ಮಾಡಲು ಜನರನ್ನು ಸಂಘಟಿಸಿದರು. ಈ ಕಾರ್ಯದ ಅಂಗವಾಗಿ ಬೀದರ, ಹುಮನಾಬಾದ, ಹಳ್ಳಿಖೇಡ, ಚಿಟಗುಪ್ಪ, ಗುಲಬರ್ಗಾ, ಮಹಾಗಾಂವ, ಭಾಲ್ಕಿ, ಬಸವಕಲ್ಯಾಣ, ಇಟಗಿ ಮುಂತಾದ ಸ್ಥಳಗಳಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶಾದಾದ್ಯಂತ ಆರ್ಯಸಮಾಜದ ಮಂದಿರಗಳು, ಕಛೇರಿಗಳು ಪ್ರಾರಂಭವಾದವು. ಇವು ೧) ಜಾತಿ ಪದ್ದತಿ ಖಂಡನೆ ೨) ಮಾನವ ಜನಾಂಗದ ಸಮಾನತೆ ೩) ಶಿಕ್ಷಣ ಮತ್ತು ಸಂಸ್ಕಾರಗಳಲ್ಲಿ ಸರ್ವರಿಗೂ ಸಮಾನ ಅವಕಾಶ ೪) ಸತ್ಯಾರ್ಥ ಪ್ರಕಾಶದ ಸಂದೇಶ ಅಂದರೆ ವೇದಗಳಿಗೆ ಹಿಂದಿರುಗಿ, ಭಾರತೀಯರಿಗೆ ಭಾರತ ಮುಂತಾದ ತತ್ವಪ್ರಚಾರದ ಕೇಂದ್ರಗಳಾದವು. ಆರ್ಯಸಮಾಜದ ಈ ಕಾರ್ಯಕ್ರಮಗಳಿಂದ ಆಕರ್ಷಿತರಾದ ಹುಮನಾಬಾದ ತಾಲ್ಲೂಕಿನ ಉತ್ಸಾಹಿ ಮತ್ತು ನಿರ್ಭಯ ತರುಣರಾಗಿದ್ದ ರಾಮಚಂದ್ರ ವೀರಪ್ಪಾ, ಲಕ್ಷ್ಮಣ ವೀರಪ್ಪಾ, ಶಿವಚಂದ್ರಜೀ ನೇಲ್ಲೊಗಿ, ಹಳ್ಳಿಖೇಡದ ಬನ್ಸಿಲಾಲ ಮತ್ತು ಶಾಮಲಾಲ, ಚಿಟಗುಪ್ಪದ ಹಕೀಖತ್‌ರಾವ ಮತ್ತು ಆರ್.ವಿ. ಬಿಡಪ ಮುಂತಾದವರು ಆರ್ಯಸಮಾಜದ ಚಳುವಳಿಯಲ್ಲಿ ಧುಮುಕಿದರು.

ಆರ್ಯಸಮಾಜ ಮಂದಿರಗಳಲ್ಲಿ ಜನರಿಗೆ ಶಿಕ್ಷಣ ಕೊಡುವ ಕಾರ್ಯದಲ್ಲಿ ನಿಷ್ಠರಾಗಿ ಈ ಕಾರ್ಯಕರ್ತರು ದುಡಿಯುತ್ತಿದ್ದರು. ಚಿಟಗುಪ್ಪ ಮತ್ತು ಬೀದರನಲ್ಲಿ ಆರ್ಯಸಮಾಜ ಶಾಲೆಯನ್ನು ತೆರೆಯಲಾಯಿತು. ಹಳ್ಳಿಖೇಡದ ಶಾಮಲಾಲರು ಉದಗೀರನಲ್ಲಿ ಅಸ್ಪೃಶ್ಯರಿಗಾಗಿ ಆಸ್ಪತ್ರೆಯನ್ನು ತೆರೆದರು. ನಾಗರೀಕ ಹಾಗೂ ಧಾರ್ಮಿಕ ಹಕ್ಕುಗಳ ಪುನರಸ್ಥಾಪನೆಯ ಹೋರಾಟದಲ್ಲಿ ಕಡು ಬಡವರಾಗಿದ್ದ ಹಿಂದುಗಳಿಗೆ ಉಚಿತ ವಕೀಲ ಸೇವೆ ಒದಗಿಸುವ ಪಣವನ್ನು ತೊಡುವುದಾಗಿ ಆರ್ಯಸಮಾಜದ ನ್ಯಾಯವಾದಿಗಳ ಅಂಗ ನಿರ್ಧರಿಸಿತು. ಹಿಂದು ಧರ್ಮಕ್ಕೆ ಹಿಂದಿರುಗಿ ಬರುವಂತೆ ಮತಾಂತರಗೊಂಡ ಜನರ ಮನವಲಿಸುವ ಕೆಲಸದಲ್ಲಿ ಆರ್ಯಸಮಾಜ ಕಾರ್ಯಕರ್ತರು ನಿರತರಾದರು.

ಭಾರತವು ಭಾರತೀಯರಿಗೆ ಮತ್ತು ಹಿಂದುಗಳನ್ನು ಬಿಟ್ಟು ಹಿಂದು ಸಂಸ್ಥಾನಲ್ಲಿ ಉಳಿದವರೆಲ್ಲಾ ವಿದೇಶಿಯರು ಎಂಬ ಸಂದೇಶವು ಪರಕೀಯ ನಿಜಾಮನ ಆಳ್ವಿಕೆಯನ್ನು ಹಾಗೂ ರಜಾಕಾರರ ದೌರ್ಜನ್ಯವನ್ನು ಎದುರಿಸಲು ಬೇಕಾದ ಆತ್ಮಸ್ಥೈರ್ಯವನ್ನು ನೀಡಿತು. ೧೯೩೫-೪೫ ರ ನಡುವಿನ ವರ್ಷಗಳಲ್ಲಿ ಹುಮನಾಬಾದ ತಾಲ್ಲೂಕಿನ ವಿವಿಧ ಭಾಗಗಳಲ್ಲಿ ದಸರಾ ಹಾಗೂ ಬಸವಜಯಂತಿ ದಿನಗಳಂದು "ಓಂ" ಲಾಂಛನ ಹೊತ್ತ ಧ್ವಜವನ್ನು ಹಾರಿಸುವುದರ ಮೂಲಕ ಹಾಗೂ ಹವನ ಕುಂಡವನ್ನು ಏರ್ಪಡಿಸುವುದರ ಮೂಲಕ ನಿಜಾಮ ಸರ್ಕಾರದ

ಪ್ರತಿಬಂಧಕಾಜ್ಞೆ ೧೪೪ ಕಾನೂನನ್ನು ಆರ್ಯಸಮಾಜದ ಕಾರ್ಯಕರ್ತರು ಉಲ್ಲಂಘನೆ ಮಾಡಿದರು. ಹಿಂದುಗಳ ಧಾರ್ಮಿಕ ಹಕ್ಕುಗಳಿಗಾಗಿ ಆರ್ಯಸಮಾಜ ಕಾರ್ಯಕರ್ತರು ಒತ್ತಾಯಿಸುತ್ತಿದ್ದರು. ಹಿಂದು ಧರ್ಮದ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವಂತೆ ಮಾಡಲು ಮತ್ತು ಜನರೆಲ್ಲಾ ಒಟ್ಟಾಗಿ ಇರುವಂತೆ ಮಾಡುವ ಸಲುವಾಗಿ ಲಿಂಗಾಯತರು, ಹರಿಜನರು ಹಾಗೂ ಬ್ರಾಹ್ಮಣರನಡುವೆ ಅಂತರಜಾತಿ ವಿವಾಹಗಳನ್ನು ಬೀದರ, ಉದಗೀರ ಮತ್ತು ಚಿಟಗುಪ್ಪಗಳಲ್ಲಿ ಏರ್ಪಡಿಸಿದರು. ರಜಾಕಾರರನ್ನು ತುಳಿಯುವ ಸಲುವಾಗಿ ಹಾಗೂ ಸ್ವಯಂ ರಕ್ಷಣೆಗಾಗಿ ಶಸ್ತ್ರಾಸ್ತ್ರಗಳನ್ನು ಬಳಸಲು ಬೇಕಾದ ತರಬೇತಿಯನ್ನು ಹಿಂದುಗಳಿಗೆ ನೀಡಿದರು. ರಾಷ್ಟ್ರೀಯತೆ ಉದ್ದೇಶವುಳ್ಳ "ಜೈ ಹನುಮಾನ ವ್ಯಾಯಾಮ ಶಾಲೆ" ಗಳನ್ನು ಕಟ್ಟಿ ಯುವಕರು ಕಟ್ಟು ಮಸ್ತಾಗಿರಲು ಅವಕಾಶ ಮಾಡಿಕೊಡಲಾಯಿತು.

ನಿಜಾಮ ಸರ್ಕಾರವು ಆರ್ಯಸಮಾಜದ ಬೇಡಿಕೆಗಳಿಗೆ ಕಿವಿಗೊಡದೆ ಇದ್ದಾಗ ೨೪ ನೇ ಅಕ್ಟೋಬರ ೧೯೩೮ ರಂದು ನಿಜಾಮ ಸರ್ಕಾರದ ವಿರುದ್ಧ ಸತ್ಯಾಗ್ರಹ ನಡೆಸಲು ಅರ್ಯಸಮಾಜ ನಿರ್ಧರಿಸಿತು. ಗುಲಬರ್ಗಾದಲ್ಲಿ ೪ ನೇ ಫೆಬ್ರುವರಿ ಮತ್ತು ೩ ನೇ ಮಾರ್ಚ ೧೯೩೦ ರಂದು (ಕ್ರಮವಾಗಿ ಪ್ರಥಮ ಸರ್ವಾಧಿಕಾರಿ ಮಹಾತ್ಮಾ ನಾರಾಯಣ ಸ್ವಾಮಿ ಮತ್ತು ದ್ವಿತೀಯ ಸರ್ವಾಧಿಕಾರಿ ಚಂದ್ರಕರಣಜೀ ಅವರ) ನೇತೃತ್ವದಲ್ಲಿ ಹೈದ್ರಾಬಾದ-ಕರ್ನಾಟಕದ ೧೫೦೦ ಆರ್ಯಸಮಾಜ ಕಾರ್ಯಕರ್ತರು ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಈ ಸತ್ಯಾಗ್ರಹದಲ್ಲಿ ಹುಮನಾಬಾದ ತಾಲ್ಲೂಕಿನಿಂದ ಭಾಗವಹಿಸಿದ ಹಕೀಖತರಾವ ಚಿಟಗುಪ್ಪಿಕರ್‌ರವರನ್ನು ಬಂಧಿಸಿ ಹೈದ್ರಾಬಾದ ಚಂಚಲಗುಡ್ಡದ ಕಾರಾಗ್ರಹದಲ್ಲಿ ಬಂದಿಸಿಟ್ಟರು. ಮುಂದೆ ಇವರನ್ನು ಫಸಲಿ ೧೦-೧೧-೧೩೪೮ ರಂದು ಬಿಡುಗಡೆ ಮಾಡಲಾಯಿತು.

ಹೀಗೆ ನಿಜಾಮನ ವಿರುದ್ಧ ಆರ್ಯಸಮಾಜವು ಪ್ರಥಮಬಾರಿಗೆ ಸಂಘಟಿತ ಧ್ವನಿಯೆತ್ತಿತ್ತು. ಸರ್ಕಾರವು ತನ್ನ ವಶಕ್ಕೆ ತೆಗೆದುಕೊಂಡ ಸತ್ಯಾಗ್ರಹಿಗಳಿಗೆ ೩ ವರ್ಷಗಳ ಕಠಿಣ ಶಿಕ್ಷೆ ಕಾರಾಗ್ರಹವಾಸದ ಶಿಕ್ಷೆ ನೀಡಲಾಯಿತು. ಗುಲಬರ್ಗಾ, ರಾಯಚೂರು, ಬೀದರ ನಾಂದೇಡ, ಔರಂಗಾಬಾದ ಮುಂತಾದ ಕಡೆ ಕಾರಾಗ್ರಹಗಳಲ್ಲಿ ಸತ್ಯಾಗ್ರಹಿಗಳನ್ನು ಬಂಧಿಸಿಡಲಾಯಿತು. ದೇಶಭಕ್ತರು ಸ್ಫೂರ್ತಿಯಿಂದ 'ಆರ್ಯಸಮಾಜ ಜಿಂದಾಬಾದ' ನಿಜಾಮಶಾಹಿ ಮುರ್ದಾಬಾದ 'ವಂದೇ ಮಾತರಮ' ಭಾರತವು ಭಾರತೀಯರಿಗೆ' ಎಂಬ ಘೋಷಣೆಗಳನ್ನು ಕೂಗಿದರು. ನಿಜಾಮ ಸರ್ಕಾರದ ಮತಾಂಧತೆಯ ಶಕ್ತಿ ಎದುರು ಜನ ಒಗ್ಗಟ್ಟಾಗಿ ನಿಂತು ಚಳುವಳಿ ನಡೆಸುವ ಅವಶ್ಯಕತೆಯನ್ನು ಆರ್ಯಸಮಾಜವು ತೋರಿಸಿಕೊಟ್ಟಿತು.

ನಿಜಾಮನ ವಿರುದ್ಧ ಸಂಘರ್ಷದಲ್ಲಿ ಗುಂಜೋಟಿಯ ವೇದಪ್ರಕಾಶಜೀ, ಬಸವಕಲ್ಯಾಣದ ಧರ್ಮಪ್ರಕಾಶ, ಗುಲಬರ್ಗಾದ ವಿಷ್ಣುಭಗವಾನಜೀ, ಹುಮನಾಬಾದನ ಶಿವಚಂದ್ರಜೀ, ಲಕ್ಷ್ಮಣರಾವ, ರಾವಜೀರಾವ ಮತ್ತು ನರಸಿಂಗರಾವ ೧೯೩೮-೩೯ ರ ಅವಧಿಯಲ್ಲಿ ತಮ್ಮ ಪ್ರಾಣವನ್ನು ಬಲಿಕೊಟ್ಟು ಹುತಾತ್ಮರಾದರು. ಈ ಸತ್ಯಾಗ್ರಹಿಗಳನ್ನು ಬಡಿದು ಬಡಿದು ಸಾಯಿಸಲಾಗಿತ್ತು. ಕಾರಾಗ್ರಹಗಳಲ್ಲಿ ಮೊಗಲಾಯಿ ಪೊಲೀಸರು ನಡೆಸಿದ ಅಮಾನವಿಯ ವರ್ತನೆಯಿಂದಾಗಿ ೨೪ ಸತ್ಯಾಗ್ರಹಿಗಳು ತಮ್ಮ ಜೀವನವನ್ನು ಬಲಿಕೊಡಬೇಕಾಯಿತು.

ಆರ್ಯಸಮಾಜ ಕಾರ್ಯಕರ್ತರು ಬಲಿದಾನದ ಸ್ಫೂರ್ತಿಯ ಮುಂದೆ ೧೯೪೨ 'ಮಾಡು ಇಲ್ಲವೆ ಮಡಿ' ೧೯೪೬-೪೭ ರ 'ಭಾರತ ಒಕ್ಕೂಟ ಸೇರಿ' ಚಳುವಳಿಯಲ್ಲಿ ಮತ್ತು ೧೯೪೭-೪೮ ರ ಗಡಿ ಚಳುವಳಿಗಳಲ್ಲಿಯು ಚನ್ನಾಗಿ ಪ್ರಕಟಗೊಂಡಿತು. ಈ ಬಲಿದಾನದ ವೀರಗಾಥೆಯು ಜನರಲ್ಲಿ ಧಾರ್ಮಿಕ ಭಾವನೆಯನ್ನು ಹಾಗೂ ರಾಜಕೀಯ ಪ್ರಜ್ಞೆಯನ್ನು ಪ್ರಚೋದಿಸಿ ಬೆಳೆಸಿತು. ಹೈದ್ರಾಬಾದ ಕರ್ನಾಟಕ ಪ್ರದೇಶದ ರಾಷ್ಟ್ರೀಯವಾದಿಗಳಲ್ಲಿ ಶೇ ೭೦ ರಷ್ಟು ಆರ್ಯಸಮಾಜದ ಕಾರ್ಯಕರ್ತರೆ ಇದ್ದರು ! ಹೀಗೆ ಆರ್ಯಸಮಾಜವು ರಾಷ್ಟ್ರೀಯವಾದಿಗಳಿಗೆ ನಿಜಾಮ ಸರ್ಕಾರದ ವಿರುದ್ಧ ಹೋರಾಡಲು ಭದ್ರವಾದ ವೇದಿಕೆಯನ್ನು ಒದಗಿಸಿತು.

೨) ಗ್ರಂಥಾಲಯ ಚಳುವಳಿ ಹಾಗೂ ಪತ್ರಿಕೋದ್ಯಮ :-

ನಿಜಾಮನ ರಾಷ್ಟ್ರೀಯ ವಿರೋಧಿ ಫರಮಾನುಗಳು ಜಾರಿಯಲ್ಲಿದರು ಸಹ ರಾಷ್ಟ್ರೀಯ ಶಾಲೆಗಳ ಚಟುವಟಿಕೆಗಳಿಂದಾಗಿ, ರಾಷ್ಟ್ರೀಯವಾದಿ ಪತ್ರಿಕೆಗಳ ಪ್ರಸಾರದಿಂದಾಗಿ ಮತ್ತು ಪ್ರಚಾರಕರ ಸಂಚಾರದಿಂದಾಗಿ ರಾಷ್ಟ್ರೀಯ ಭಾವನೆಯು ಮುಖ್ಯವಾಗಿ ಲಿಂಗಾಯತ ಹಾಗೂ ಬ್ರಾಹ್ಮಣ ಸಮೂದಾಯಗಳಲ್ಲಿ ತೀವ್ರವಾಗಿ ಹಬ್ಬುತ್ತಿದ್ದುದನ್ನು ೧೩೨೦ ಫಸಲಿಯಲ್ಲಿ ಪರಭಣಿಯ ಜಿಲ್ಲಾ ಪೊಲೀಸ ಅಧಿಕಾರಿಯ ವರದಿಯಿಂದ ತಿಳಿದುಬರುತ್ತದೆ. ಸ್ವಾತಂತ್ರ್ಯ ಹೋರಾಟಗಾರರಿಗೆ ರಾಜಕೀಯ ಸಭೆಗಳನ್ನು ಸಾರ್ವಜನಿಕವಾಗಿ ನಡೆಸಲು ನಿಜಾಮನ ಫರಮಾನುಗಳಿಂದಾಗಿ ಅವಕಾಶಗಳಿರಲಿಲ್ಲ. ಇದರಿಂದಾಗಿ ಜನರು ಸಂಸ್ಥಾನದಾದ್ಯಂತ ಗ್ರಂಥಾಲಯಗಳನ್ನು ಹಾಗೂ ಭಜನಾ ಮಂಡಳಿಗಳನ್ನು ಸ್ವದೇಶಿ ಸ್ಫೂರ್ತಿ ಭಾವನೆಯಿಂದ ಸ್ಥಾಪಿಸಿದರು. ಹೈದ್ರಾಬಾದ ಕರ್ನಾಟಕ ಪ್ರದೇಶವು ಈ ಬೆಳವಣಿಗೆಯಿಂದ ಮುಕ್ತವಾಗಿರಲು ಸಾಧ್ಯವಿರಲಿಲ್ಲ. ಹೈದ್ರಾಬಾದ ಸಂಸ್ಥಾನದಲ್ಲಿ ಹಾಗೂ ಭಾರತದಾದ್ಯಂತ ಸ್ವಾತಂತ್ರ್ಯ ಚಳುವಳಿ ಹೇಗೆ ನಡೆಯುತ್ತಿದೆ ಎಂಬುದರ

ವಿವರಗಳು ಸಮಾಚಾರ ಪತ್ರಿಕೆ ಹಾಗೂ ಗ್ರಂಥಗಳ ಮೂಲಕ ಜನರಿಗೆ ದೊರಕುವಂತೆ ಮಾಡುವುದೇ ಗ್ರಂಥಾಲಯ ಚಳುವಳಿಯ ಉದ್ದೇಶವಾಗಿತ್ತು. ಅಶಿಕ್ಷಿತ ಗ್ರಾಮಾಂತರಗಳಲ್ಲಿ ರಾಷ್ಟ್ರೀಯತೆ ಭಾವನೆಯನ್ನು ಪ್ರಚಾರ ಪಡಿಸಲು ಬೇಕಾದ ವೇದಿಕೆಯಾಗಿ ಭಜನಾ ಮಂಡಳಿಗಳು ಬಳಕೆಯಾದವರು. ಸಾಕಷ್ಟು ಸಂಖ್ಯೆಯಲ್ಲಿ ಅಧಿಕಾರಿಗಳು ಹಾಗೂ ಶಿಕ್ಷಕಿತ ವರ್ಗದವರು ಈ ಭಜನಾ ಮಂಡಳಿಗಳ ಸದಸ್ಯರಾಗಿದ್ದರು.

ರಾಜ್ಯ ಕಾಂಗ್ರೇಸ್ ಮತ್ತು ಆರ್ಯಸಮಾಜದ ನಿರ್ದೇಶನದಂತೆ ೧೯೩೩ ರಲ್ಲಿ ಆರ್.ವಿ. ಬಿಡಪ ಮತ್ತು ಹಕೀಖತರಾವ ಚಿಟಗುಪ್ಪದಲ್ಲಿ "ಸುಧಾಕರ ಸಂಘ" ಗ್ರಂಥಾಲಯವನ್ನು ಪ್ರಾರಂಭ ಮಾಡಿದರು. ಈ ವಾಚನಾಲಯಕ್ಕೆ ಬೇಕಾದ ಪತ್ರಿಕೆಗಳನ್ನು, ನಿಯತಕಾಲಿಕೆಗಳನ್ನು ಕೊಳ್ಳಲು ಬೇಕಾದ ಹಣವನ್ನು ವ್ಯಾಪಾರಿಗಳು, ಧಾರ್ಮಿಕ ಸಂಸ್ಥೆಗಳು, ಕಾಂಗ್ರೇಸ್ ಕಾರ್ಯಕರ್ತರು, ಆರ್ಯ ಸಮಾಜದ ಕಾರ್ಯಕರ್ತರು ಮತ್ತು ಹಿಂದು ಸಭಾದಿಂದ ರಾಷ್ಟ್ರೀಯವಾದಿಗಳು ಸಂಗ್ರಹಿಸುತ್ತಿದ್ದರು. ವಾಚನಾಲಯದಲ್ಲಿ ಕಾಣಬರುತ್ತಿದ್ದ ಪತ್ರಿಕೆಗಳೆಂದರೆ ಸಂಯುಕ್ತ ಕರ್ನಾಟಕ, ಹರಿಜನ, ಲೋಕಮತ, ಕೇಸರಿ, ಮರಾಠ, ನಾಗರಿಕ, ಶಿವಾನುಭಾವ, ಧರ್ಮಸಂಜೀವಿನಿ, ಅಂಕುಶ, ಶುಭೋದಯ, ಸೊಲ್ಲಾಪೂರ ಸಮಾಚಾರ, ಕನ್ನಡಿಗ ಮತ್ತು ಪ್ರಸಿದ್ಧ ಉರ್ದು ಪತ್ರಿಕೆಗಳಾದ ನಿಜಾಮ ವಿಜಯ, ಶಿಯಾಸತ್, ಇಮ್ರೋಜ್, ಮುಷೀರ್-ಇ-ದಖನ್ ಇತ್ಯಾದಿ.

ಈ ವಾಚನಾಲಯಗಳ ಅಲಮಾರುಗಳಲ್ಲಿ ಕಂಡು ಬರುತ್ತಿದ್ದ ಗ್ರಂಥಗಳೆಂದರೆ ಸತ್ಯಾಗ್ರಹ ಧರ್ಮ, ನಾಡ ಹಾಡುಗಳು, ಸತ್ಯಾರ್ಥ ಪ್ರಕಾಶ, ದೇಶ ಭಕ್ತಿ ಕಥೆಗಳು, ಕನ್ನಡಿಗರ ಕುಲಗುರು ಬಸವಕಲ್ಯಾಣ ವಾಣಿ, ಕ್ಷಾತತೇಜ ಗಳಗನಾಥರ ಕಾದಂಬರಿಗಳಾದ ಮಾಧವ ಕರುಣಾವಿಲಾಸ, ಈಶ್ವರಿ ಸೂತ್ರ ಮತ್ತು ಶಿವಾಜಿ, ಕಿತ್ತೂರು ಚನ್ನಮ್ಮ, ಬಸವೇಶ್ವರ, ಭಗತಸಿಂಗ, ಝಾನ್ಸಿರಾಣಿ ಲಕ್ಷ್ಮಿಬಾಯಿ ಮುಂತಾದವರ ಕುರಿತ ಕಥೆ ಪುಸ್ತಕಗಳು. ಈ ಎಲ್ಲಾ ಗ್ರಂಥಗಳು ಕಾದಂಬರಿಗಳು ಸಾಮಾನ್ಯವಾಗಿ ಚಾರಿತ್ರಿಕವಾಗಿರುತ್ತಿದ್ದವು. ವಚನಕಾರರು ಕ್ರಾಂತಿಯ ಕಾಲದಿಂದಲೂ ಹೇಗೆ ಈ ದೇಶದಲ್ಲಿ ವೀರರು ಶೂರರು ಪರಕೀಯರು ಆಳ್ವಿಕೆ ವಿರುದ್ಧ ಸಂಘರ್ಷ ಮಾಡಿದರು ಎಂಬುದರ ಪರಿಚಯವನ್ನು ಅವು ತಿಳಿಸುತ್ತಿದ್ದವು. ಮಾತೃಭೂಮಿ ಬಗ್ಗೆ ಅಭಿಮಾನ ಬೆಳೆಸುವುದರಲ್ಲಿ ಇವು ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದವು. ಈ ಚಳುವಳಿಯ ಪ್ರಭಾವದಿಂದಾಗಿ ನಿಜಾಮನನ್ನು ಅಧಿಕಾರದಿಂದ ಇಳಿಸಲು ಸಹಾಯಕವಾಯಿತು ಎಂದು ಹೇಳಬಹುದು.

೩) ಕೀರ್ತನೆಗಳ ಪ್ರಭಾವ :-

ಮಠಾಧಿಪತಿಗಳು, ಭಜನಾಮಂಡಳಿ ಕಾರ್ಯಕರ್ತರು ಹಾಗೂ ಕನ್ನಡ ಸಾಹಿತ್ಯ ಸಂಸ್ಥೆಗಳು ಧಾರ್ಮಿಕ ಸಮಾವೇಶಗಳಲ್ಲಿ, ಹಬ್ಬ ಹರಿದಿನ, ಉತ್ಸವಗಳಲ್ಲಿ, ಸಭೆ ಸಮಾರಂಭ ಏರ್ಪಡಿಸಿ ಕೀರ್ತನೆ, ಪುರಾಣ ಕಾರ್ಯಕ್ರಮ ನಡೆಸುತ್ತಿದ್ದರು. ರಾಷ್ಟ್ರೀಯ ಚಳುವಳಿಯಲ್ಲಿ ಸಂಭವಿಸಿದ ಘಟನೆಗಳನ್ನು ಉಲ್ಲೇಖಿಸುವುದರ ಜೊತೆಗೆ ಕೀರ್ತನೆಗಳ ಮಧ್ಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಹುತಾತ್ಮರ ಜೀವನ ಹೋರಾಟಗಳನ್ನು ವಿವರಿಸಿ ಜನರ ಹೃದಯದಲ್ಲಿ ದೇಶಭಕ್ತಿ ಕಿಡಿಗಳನ್ನು ಬೆಳಗಿಸುತ್ತಿದ್ದರು. ೧೯೦೪ ರಲ್ಲಿ ಜಯರಾಮಚಾರರ ಕೀರ್ತನೆಗಳನ್ನು ಕೇಳಲು ಹುಮನಾಬಾದದಿಂದ ಅನೇಕ ಸ್ವಾತಂತ್ರ ಹೋರಾಟಗಾರರು ಭಾಗವಹಿಸಿದರು. ಅವರ ವಿದ್ವತ್ ಎಷ್ಟು ಉನ್ನತವಾಗಿತ್ತೆಂದರೆ ಅವರ ಒಂದೊಂದು ನುಡಿಯು ಕವಿತೆಯಾಗಿತ್ತು. ೧೯೪೦ ರಲ್ಲಿ ಬೀದರನಲ್ಲಿ ನಡೆದ ನಿಜಾಮ ಕರ್ನಾಟಕ ಪರಿಷತ್‌ನ ಸಭೆಯಲ್ಲಿ ಹುಮನಾಬಾದ ತಾಲ್ಲೂಕಿನ ರಾಮಚಂದ್ರ ವೀರಪ್ಪ, ಆರ್.ವಿ. ಬಿಡಪ, ಹಕೀಖತರಾವ ಮುಂತಾದ ಹೋರಾಟಗಾರರು ಭಾಗವಹಿಸಿದರು. ಕೀರ್ತನೆ ಕಾರ್ಯಕ್ರಮಗಳ ಮೂಲಕ ಸಂಗ್ರಹವಾದ ಸಂಪಾದನೆಯಲ್ಲಾ ಅವರು ನಿಜಾಮ ಮತ್ತು ಬ್ರಿಟಿಷರ ವಿರುದ್ಧದ ಹೋರಾಟ ಸಂಘಟಿಸುವುದಕ್ಕೆ ವ್ಯಯಮಾಡಿದರು. ಹುಮನಾಬಾದ ತಾಲ್ಲೂಕಿನಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ಪ್ರಸಾರ ಮಾಡುವುದರಲ್ಲಿ ಗ್ರಂಥಾಲಯ ಚಳುವಳಿ ಹಾಗೂ ಕೀರ್ತನೆಗಳು ಪ್ರಮುಖ ಪಾತ್ರ ವಹಿಸಿದವು.

೪) ತರುಣ ಸಂಘಗಳ ಪಾತ್ರ :

೧೯೩೫ -೪೦ ರ ವರೆಗೆ ರಜಾಕಾರರು ನಡೆಸಿದ ದೌರ್ಜನ್ಯದಿಂದಾಗಿ ಹಿಂದುಗಳಿಗೆ ಉಂಟಾದ ದುಸ್ಥಿತಿಯನ್ನು ನೋಡಿಕೊಂಡು ಸ್ವಾಭಿಮಾನಿಗಳು ಸುಮ್ಮನೆ ಕೂಡಲು ಸಾಧ್ಯವಿರಲಿಲ್ಲ. ೧೯೩೨ ರಲ್ಲಿ ಗುಲಬರ್ಗಾದಲ್ಲಿ ಸರದಾರ ಶರಣಗೌಡಾ ಇನಾಮದಾರ ಮತ್ತು ಕಲ್ಯಾಣಪ್ಪ ಸಜ್ಜನಶೆಟ್ಟಿ ಅವರು ಸೇರಿಕೊಂಡು ವೀರಶೈವ ತರುಣ ಸಂಘ ಪ್ರಾರಂಭಿಸಿದರು. ಇದರ ಪರಿಣಾಮವಾಗಿ ಚಂದ್ರಶೇಖರ ಪಾಟೀಲ ಹಾಗೂ ಶರಣ ಕವಿಗಳ ಪ್ರಯತ್ನದ ಫಲವಾಗಿ ೧೯೩೫ ರಲ್ಲಿ ಯುಗಾದಿಯಂದು ಮಹಾಗಾಂವನಲ್ಲಿ ತರುಣ ಸಂಘ ಅಸ್ಥಿತ್ವಕ್ಕೆ ಬಂದಿತು. ಇದೇ ರೀತಿ ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ವಿವಿಧ ಸ್ಥಳಗಳಲ್ಲಿ ತರುಣ ಸಂಘಗಳು ತೆರೆಯಲ್ಪಟ್ಟವು. ತರುಣ ಸಂಘಗಳ ಮುಖ್ಯ ಉದ್ದೇಶ ತರುಣರು ತಮ್ಮ ದೇಹವನ್ನು ವಜ್ರಕಾಯದಂತೆ ಬೆಳೆಸಿಕೊಳ್ಳಲು ಅವಕಾಶ ಒದಗಿಸುವುದು. ಇದರ ಜೊತೆಗೆ ರಜಾಕಾರರ ಅಥವಾ

ಗೂಂಡಾಗಳ ಹಾವಳಿಗಳನ್ನು ತಡೆದು ಮುಸ್ಲಿಮೇತರರ ರಜಾಕಾರರ ವಿರುದ್ಧ ಜೀವರಕ್ಷಣೆ ಮಾಡಿಕೊಳ್ಳಲು ಹಿಂದುಗಳಿಗೆ ಲಾಠಿ, ತಲವಾರು, ಜಂಭೆ, ಪೇಕಪಠಾ ಹಾಗೂ ಬಂದೂಕುಗಳನ್ನು ಬಳಸುವ ತರಬೇತಿಯನ್ನು ಗುಲಬರ್ಗಾದ ಪ್ರಸಿದ್ಧ ವ್ಯಾಯಾಮ ಶಿಕ್ಷಕ ಭೀಮಾಸ್ಯ ಎಂಬುವವರ ಮಾರ್ಗದರ್ಶನದಲ್ಲಿ ರಾಮಚಂದ್ರವೀರಪ್ಪನವರು ನೀಡುತ್ತಿದ್ದರು. ತರುಣ ಸಂಘದ ಸದಸ್ಯರೆಲ್ಲ ಪೊಲೀಸ ರ ವಿಚಾರಣೆ ಒತ್ತಡಗಳನ್ನು ಎದುರಿಸಬೇಕಾಗುತ್ತಿತ್ತು. ೧೯೩೫ ರಲ್ಲಿ ಹುಮನಾಬಾದನಲ್ಲಿ ಹಿಂದುಗಳು ತಮ್ಮ ಸಾಮಾಜಿಕ ಧಾರ್ಮಿಕ ಹಕ್ಕುಗಳನ್ನು ಒತ್ತಾಯಿಸಲು ಬಸವಜಯಂತಿ ಹಾಗೂ ಜಾತ್ರೆಯಲ್ಲಿ "ಓಂ" ಲಾಂಛನ ಹೊತ್ತ ಧ್ವಜಗಳನ್ನು ಹಾರಿಸುವುದರಲ್ಲಿ ಯಶಸ್ವಿಯಾದರು. ನಾಗರಿಕ ಹಾಗೂ ಧಾರ್ಮಿಕ ಹಕ್ಕುಗಳನ್ನು ಸಂಪೂರ್ಣವಾಗಿ ದಮನಮಾಡಿದ ನಿಜಾಮ ಸಂಸ್ಥಾನದಲ್ಲಿ ರಾಷ್ಟ್ರಧ್ವಜವನ್ನಾಗಲಿ ಅಥವಾ "ಓಂ" ಧ್ವಜವನ್ನಾಗಲಿ ಹಾರಿಸುವುದು ಮಹೋನ್ನತ ಸಾಧನೆಯಾಗಿತ್ತು.

ಶಿವಶರಣರ ಸಂದೇಶವನ್ನು ಪ್ರಚುರು ಪಡಿಸುವುದು ಮತ್ತು ನಾಡಹಬ್ಬವನ್ನು ಆಚರಿಸುವ ಸಲುವಾಗಿ ಯುವಕರೆಲ್ಲಾ ಒಟ್ಟಿಗೆ ಸೇರುವಂತೆ ಈ ಸಂಘಗಳು ವೇದಿಕೆಯನ್ನು ಒದಗಿಸಿ ಕೊಟ್ಟಿದ್ದವು. ಸ್ವಾತಂತ್ರ್ಯ ಉದ್ದೇಶ ಸಾಧನೆಗಾಗಿ ಮತ್ತು ಗಾಂಧಿಜೀ ಮತ್ತು ತಿಲಕರ ವಿಚಾರಗಳನ್ನು ಯುವಕರ ಮನಸ್ಸಿನಲ್ಲಿ ತುಂಬುವ ಸಲುವಾಗಿ ಕಾರ್ಯಮಾಡುತ್ತಿದ್ದ ಈ ಸಂಘವು ಒಂದು ರಾಜಕೀಯ ಶಾಲೆಗಳಾಗಿ ರೂಪಗೊಂಡವು. ನಿಜಾಮ ಆಳ್ವಿಕೆಯ ವಿರುದ್ಧ ಸಂಘಟಿತ ಸಂಘರ್ಷಕ್ಕೆ ತರುಣ ಸಂಘಗಳು ಅನಿವಾರ್ಯವಾಗಿ ಬೇಕಾಗಿದ್ದವು.

೫) ಸ್ವಾಮಿ ರಮಾನಂದ ತೀರ್ಥರ ಪ್ರಭಾವ :-

'ಹೈದ್ರಾಬಾದ ಸಂಘರ್ಷದ ಮಹಾತ್ಮಾ ಗಾಂಧಿ' ಎಂದು ಸ್ವಾಮಿ ರಮಾನಂದ ತೀರ್ಥರನ್ನು ಕರೆದಿರುವುದು ಸೂಕ್ತವಾಗಿದೆ. ಬಿಜಾಪೂರ ಜಿಲ್ಲೆಯ ಸಿಂಧಗಿಯಲ್ಲಿ ಜನಿಸಿದ ಸ್ವಾಮೀಜಿಯವರು ರಾಜಕಾರಣ ಅಧ್ಯಾತ್ಮಿಕತೆಗಳ ಸುಂದರ ಸಂಗಮವಾಗಿದ್ದರು. ಹೈದ್ರಾಬಾದ ಸಂಸ್ಥಾನವನ್ನು ವಿಸರ್ಜಿಸಿ ಭಾರತ ಗಣರಾಜ್ಯದಲ್ಲಿ ವಿಲೀನ ಗೊಳಿಸುವ ಹಾಗೂ ವಿಮೋಚನೆ ಗೊಳಿಸುವ ಹೋರಾಟದಲ್ಲಿ ಅವರದ್ದು ನಾಯಕನ ಪಾತ್ರ. 'ಪ್ರಜಾತಂತ್ರದ ವಿಕಾಸ' ಎಂಬ ಮಹಾ ಪ್ರಬಂಧಕ್ಕೆ ತಿಲಕವಿದ್ಯಾಪೀಠದಿಂದ ಎಂ.ಎ. ಪದವಿ ಪಡೆದುಕೊಂಡಮೇಲೆ ಹಿಪ್ಪರಗಾದ ರಾಷ್ಟ್ರೀಯ ಶಾಲೆಯಲ್ಲಿ ಮುಖ್ಯ ಗುರುಗಳಾಗಿ ಸಂಭಾವನೆ ಸ್ವೀಕರಿಸದೇ ಕೆಲಸ ಮಾಡಿದರು. ನಿಜವಾಸ ಸನ್ಯಾಸಿಯಂತೆ ತಮ್ಮ ಆಹಾರವನ್ನು ನಿತ್ಯವು ಬೇಡಿ, ತಂದು

ಸ್ವೀಕರಿಸುತ್ತಿದ್ದರು. ಆರ್ಯ ಸಮಜದ ಹಾಗೂ ತಿಲಕರ ಅಭಿಮಾನಿಗಳಾಗಿದ್ದ ಸ್ವಾಮೀಜಿಯವರು ನಿಜಾಮ ಸರ್ಕಾರದ ವಿರುದ್ಧ ನಡೆಯುತ್ತಿದ್ದ ಹೋರಾಟಕ್ಕೆ ಜನರನ್ನು ಸಂಘಟಿಸಿದರು. ಪ್ರಸಿದ್ಧ ಕಾರ್ಮಿಕ ನಾಯಕ ಎನ್.ಎಂ. ಜೋಷಿಯವರ ನಾಯಕತ್ವದಲ್ಲಿ ಕಾರ್ಮಿಕರ ಸ್ಥಿತಿಗತಿಗಳನ್ನು ಉತ್ತಮ ಪಡಿಸಲು ಹೋರಾಡಿದರು. ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರದ ಮಾನ್ಯತೆ ಕೊಡುವಂತೆ ಮಾಡಿದರು. ಇಲ್ಲಿ ನಾವು ತಿಳಿದುಕೊಳ್ಳಬೇಕಾದ ಸಂಗತಿಯಂದರೆ ನಿಜಾಮ ಸರ್ಕಾರವು ಖಾಸಗಿ ವಿದ್ಯಾ ಸಂಸ್ಥೆಗಳ ಬೆಳವಣಿಗೆಯನ್ನು ಸಹಿಸುತ್ತಿರಲಿಲ್ಲ.

ಹೈದ್ರಾಬಾದ ಸಂಸ್ಥಾನದಲ್ಲಿ ನಡೆಯುತ್ತಿದ್ದ ರಾಜಕೀಯ ಬೆಳವಣಿಗೆಯನ್ನು ಅವರು ಸೂಕ್ಷ್ಮವಾಗಿ ವೀಕ್ಷಿಸುತ್ತಿದ್ದರು. 'ಮೆಕೆಂಜಿ' ವರದಿ ವಿರುದ್ಧ ಒಂದು ಶೈಕ್ಷಣಿಕ ಸಮಾವೇಶದಲ್ಲಿ ಅವರು ಮಾಡಿದ ಭಾಷಣ ಹಾಗೂ ೧೯೩೭ ರಲ್ಲಿ ಹೈದ್ರಾಬಾದನ ಉಸ್ಮಾನಿಯಾ ವಿಶ್ವ ವಿದ್ಯಾಲದಲ್ಲಿ ಜನ್ಮಾಷ್ಠಮಿಯ ಸಂದರ್ಭದಲ್ಲಿ ಮಾಡಿದ ಭಾಷಣದಿಂದ ಸ್ವಾಮೀಜಿಯವರು ಲೋಕ ಪ್ರಸಿದ್ಧರಾದರು. ಅವರ ಪ್ರಗತಿಪರ ವಿಚಾರಗಳ ಹಾಗೂ ಧೃಢವಾದ ನಂಬಿಕೆಗಳಿಂದ ವಿದ್ಯಾರ್ಥಿ ಸಮುದಾಯವು ತುಂಬಾ ಪ್ರಭಾವಿತಗೊಂಡಿತು. ಅಂದಿನ ಸಂಧರ್ಭದಲ್ಲಿ ಸರಿಯಾದ ದಾರಿಯನ್ನು ಅವರು ತೋರಿಸುತ್ತಾರೆ ಎಂದು ನಂಬಲಾಗಿತ್ತು. ೧೯೩೮ ರಲ್ಲಿ ಲಾತೂರಿನಲ್ಲಿ ನಡೆದ ಎರಡನೆಯ ಮರಾಠವಾಡ ಪರಿಷತ್ ಸಮ್ಮೇಳನದಲ್ಲಿ ಪರಿಷತ್‌ನ ಪ್ರಧಾನ ಕಾರ್ಯದರ್ಶಿಯಾಗಿ ಸ್ವಾಮೀಜಿ ಆಯ್ಕೆಯಾದರು. ಮರಾಠವಾಡ, ತೆಲಂಗಾಣ ಹಾಗೂ ಕರ್ನಾಟಕ ಪ್ರಾದೇಶಿಕ ಪರಿಷತ್‌ಗಳಿಗೆ ಹಾಗೂ ಹೈದ್ರಾಬಾದ ಸಂಸ್ಥಾನ ಸಮಾವೇಶಕ್ಕೆ ಅವರರೊಬ್ಬ ಮಾರ್ಗದರ್ಶಿ ಜ್ಯೋತಿಯಾಗಿದ್ದರು. ಸ್ವಾತಂತ್ರ್ಯದ ಮಹತ್ವವನ್ನು ಪ್ರಸಾರ ಮಾಡುವಾಗ ಜನರು ರಜಾಕಾರರ ಹಾಗೂ ನಿಜಾಮನ ದಬ್ಬಾಳಿಕೆಗೆ ಸಂಕೋಚ ಪಟ್ಟುಕೊಳ್ಳಬಾರದು ಎಂದು ಅವರು ಬೋಧಿಸುತ್ತಿದ್ದರು. ದೈತ್ಯ ಸಾಮರ್ಥ್ಯದ, ಪಾರದರ್ಶಕ ಪ್ರಮಾಣಿಕತೆಯ ಹಾಗೂ ಕಡು ನಿಷ್ಠೆಯ ಸ್ವಾಮೀಜಿಯವರು ಆರ್ಯಸಮಾಜ, ಹಿಂದು ಪ್ರಮಾಣಿಕತೆಯ, ಮಹಾಸಭಾ ಹಾಗೂ ನಾಗರಿಕ ಹಕ್ಕುಗಳ ಸಂಘ ಮುಂತಾದವುಗಳ ಚಟುವಟಿಕೆಗಳು ಹೈದ್ರಾಬಾದ ಚಳುವಳಿಯನ್ನು ಹೆಚ್ಚು ಕೋಮು ಸ್ವರೂಪದನ್ನಾಗಿ ಮಾಡಿವೆ ಎಂದು ಭಾವಿಸಿದರು. ರಾಜಕೀಯ ಸಂಸ್ಥೆಗಳನ್ನು ರಾಷ್ಟ್ರೀಯ ಸ್ವರೂಪದಲ್ಲಿ ಸಂಘಟಿಸಲು ಸ್ವಾಮೀಜಿ ಬಯಸಿದ್ದರು. ಕಾಂಗ್ರೆಸ್ ಎನ್ನುವ ಹೆಸರಿನ ಸಂಘಟನೆಯ ಮೂಲಕವೆ ನಿಜಾಮನ ವಿರುದ್ಧ ಹೋರಾಟ ನಡೆಸಬೇಕು ಎಂಬುದು ಅವರ ಇಚ್ಛೆ ಮತ್ತು ಕಾಳಜಿಯಾಗಿತ್ತು. ಅದಕ್ಕೆ ಹೈದ್ರಾಬಾದ ರಾಜ್ಯ ಕಾಂಗ್ರೆಸ್ ಎಂದು ಹೆಸರು ಕೊಟ್ಟರು. ಜಾತ್ಯಾತೀತತೆ ನಿಯಮದ ಆಧಾರದ ಮೇಲೆ ಜವಾಬ್ದಾರಿ ಸರ್ಕಾರ ಸ್ಥಾಪಿಸಲು ಜನರು ತಮ್ಮ ಸುಖ ಸಂತೋಷಗಳನ್ನು ತ್ಯಾಗಮಾಡಬೇಕು ಎಂದು ಕರೆ ನೀಡುತ್ತಿದ್ದರು.

೧೯೩೭ ರಲ್ಲಿ ಹರಿಪುರದಲ್ಲಿ ನಡೆದ ಎ.ಐ.ಸಿ.ಸಿ. ಸಮಾವೇಶದಲ್ಲಿ ಹೈದ್ರಾಬಾದ ರಾಜ್ಯ ಕಾಂಗ್ರೇಸ್ ರಚಿಸಲು ಮಹಾತ್ಮಾ ಗಾಂಧಿಯ ಕಟ್ಟಾ ಅನುಯಾಯಿಯಾಗಿದ್ದ ಸ್ವಾಮೀಜಿಗೆ ಅನುಮತಿ ದೊರಕಿತು. ನಿಜಾಮನ ಸರ್ವಾಧಿಕಾರಿ ಆಳ್ವಿಕೆಯನ್ನು ಕಿತ್ತೊಗೆಯಲು ಜಾತ್ಯಾತೀತತೆ ರಾಜಕೀಯ ಸಂಘಟನೆಯಾಗಿ ರಾಜ್ಯ ಕಾಂಗ್ರೇಸ್ ರಚಿಸಬೇಕೆಂದು ೨೯ ನೇ ಜನೆವರಿ ೧೯೩೭ ರಂದು ನಡೆದ ಹೈದ್ರಾಬಾದ ಅಧಿವೇಶನದಲ್ಲಿ ತೀರ್ಮಾನಿಸಲಾಯಿತು. ಶ್ರೇಷ್ಠ ಶಿಕ್ಷಣ ತಜ್ಞರು, ತತ್ವಜ್ಞಾನಿಯು ಹಾಗೂ ನಿಜಾಮನ ಪ್ರಧಾನ ಮಂತ್ರಿಯಾಗಿದ್ದ ಸರ್. ಅಕ್ಬರ್ ಹೈದರಿಯವರು ಜವಾಬ್ದಾರಿ ಸರ್ಕರದ ಒತ್ತಡವು ಕೇವಲ ಪಕ್ಷರಾಜಕೀಯವೆಂದು ಕಾಂಗ್ರೇಸ ಒಂದು ಕೋಮು ಸಂಸ್ಥೆಎಂದು ಖಂಡಿಸಿದನು. ಅವನು ಒಂದು ಆದೇಶ ಹೊರಡಿಸಿ ೮ ನೇ ಸೆಪ್ಟೆಂಬರ್ ೧೯೩೮ ರಂದು ಅದು ಹುಟ್ಟುವುದಕ್ಕೆ ಮೊದಲೆ ಹೈದ್ರಾಬಾದ ರಾಜ್ಯ ಕಾಂಗ್ರೇಸ್ ಮೇಲೆ ನಿಷೇಧ ಹೇರಿದನು. ಆದರೆ ಸ್ವಾಮೀಜಿಯವರು ಹೈದ್ರಾಬಾದ ರಾಜ್ಯ ಕಾಂಗ್ರೇಸ್ ಚೈತನ್ಯ ನೀಡಿ ನಿಷೇಧಿಸಲ್ಪಟ್ಟ ರಾಜ್ಯ ಕಾಂಗ್ರೇಸ್ ಸದಸ್ಯರಾಗಿ ಅವರು ಕೆಲಸ ಮಾಡಿದರು. ಪ್ರಥಮ ಸರ್ವಾಧಿಕಾರಿಯಾಗಿ ಅವರು ಹೋರಾಟಕ್ಕೆ ಧುಮುಕಿದರು ಮತ್ತು ನಿಜಾಮ ಸರ್ಕಾರದ ವಿರುದ್ಧ ಸತ್ಯಾಗ್ರಹ ಕೈಗೊಂಡರು. ನಿಜಾಮನ ಕ್ರೂರ ಆಳ್ವಿಕೆಯನ್ನು ಕೊನೆಗೊಳಿಸಲು ಜನರು ಧೈರ್ಯ ಸ್ವಾಭಿಮಾನ ಮತ್ತು ಆತ್ಮ ಸಮರ್ಪಣೆ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಅವರು ಒತ್ತಾಯಿಸುತ್ತಿದ್ದರು. ಹೈದ್ರಾಬಾದ ರಾಜ್ಯ ಕಾಂಗ್ರೇಸ್ ರಚನೆಯ ಸಂದರ್ಭದಲ್ಲಿ ಅವರು ಪೊಲೀಸ ಕಮಿಷನರ ಅವರಿಗೆ ಬರೆದ ಒಂದು ಪತ್ರ ಕುತೂಹಲಕಾರಿಯಾಗಿದೆ.

ನವಾಬ್ ರಹಮತ್ ಯಾರ ಜಂಗ್ ಬಹಾದ್ದೂರ್‌ರವರಿಗೆ,
ನಗರ ಪೊಲೀಸ ಕಮೀಷನರ್
ನಿಜಾಮ ಸರ್ಕಾರ

ಸ್ವಾಮಿ,

ಹೈದ್ರಾಬಾದ ರಾಜ್ಯ ಕಾಂಗ್ರೆಸಿನ ಕಾರ್ಯಕಾರಿ ಮಂಡಳಿಯು ನನ್ನನ್ನು ಪ್ರಥಮ ಸರ್ವಾಧಿಕಾರಿಯಾಗಿ ಆರಿಸಿದೆ ಮತ್ತು ಕಾರ್ಯಕಾರಿ ಮಂಡಳಿಯ ಎಲ್ಲಾ ಅಧಿಕಾರಗಳನ್ನು ನನ್ನ ವಶಕ್ಕೆ ನೀಡಲಾಗಿದೆ.

ಪುತಲಿ ಚೌಡಿ ಠಾಣೆಯ ಹತ್ತಿರ ನಾಲ್ಕು ಜನ ಸಂಘಟನಾ ಕಾರ್ಯದರ್ಶಿಗಳ ಜೊತೆಯಲ್ಲಿ ಇಂದು ಮಧ್ಯಾಹ್ನ ೩-೦೦ ಗಂಟೆಗೆ ಹೈದ್ರಾಬಾದ ರಾಜ್ಯ ಕಾಂಗ್ರೇಸನ ಕೆಲಸವನ್ನು ನಾನು ಪ್ರಾರಂಭಿಸುತ್ತಿದ್ದೇನೆ. ಈ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ.

೨೭ ಅಕ್ಟೋಬರ್ ೧೯೩೮
ಜಾಂಬಾಗ ಹೈದ್ರಾಬಾದ

ಸ್ವಾಮಿ ರಮಾನಂದ ತೀರ್ಥ (ಸಹಿ)
ಪ್ರಥಮ ಸರ್ವಾಧಿಕಾರಿ
ಹೈದ್ರಾಬಾದ ರಾಜ್ಯ ಕಾಂಗ್ರೇಸ್[೧]

ದಿನಾಂಕ: ೩೦-೧೦-೧೯೩೮ ರಂದು ಸ್ವಾಮೀಜಿಯವರು ಪ್ರಥಮ ಸರ್ವಾಧಿಕಾರಿಯಾಗಿ ಸತ್ಯಾಗ್ರಹ ಕೂತರು. ರಾಜ್ಯ ಕಾಂಗ್ರೇಸ್ ಮೇಲಿನ ನಿಷೇಧವನ್ನು ಹಿಂತೆಗೆದುಕೊಳ್ಳುವಂತೆ ಅವರು ನಿಜಾಮನನ್ನು ಒತ್ತಾಯಿಸಿದರು. ಅವರ ಬಂಧನದ ಸಂದರ್ಭದಲ್ಲಿ ಅವರು ಯುವಕರಿಗೆ ನೀಡಿದ ಕರೆಯು ಉಲ್ಲೇಖನೀಯವಾಗಿದೆ.

"ಯುವಕರೆ, ನೆನಪಿನಲ್ಲಿ ಕ್ರೂರ ಆಳ್ವಿಕೆಯನ್ನು ವಿರೋಧಿಸುವುದು ದೈವರಾಧನೆ ಇದ್ದಂತೆ. ನಾವು ಮಧ್ಯದಲ್ಲಿ ನಿಲ್ಲಿಸಿರುವ ಕೆಲಸವನ್ನು ಕೈಗೆತ್ತಿಕೊಳ್ಳಿ, ನಮ್ಮದು ಶುದ್ಧ ರಾಷ್ಟ್ರೀಯ ಹೋರಾಟ, ವಿಮೋಚನೆಗಾಗಿ ಹೋರಾಟ ಮಾಡಿ ನಿಜಾಮನ ದಬ್ಬಾಳಿಕೆಗೆ ಗಮನ ಕೊಡಬೇಡಿ. ನಿಮ್ಮ ಆಪ್ತರು, ಹಿತೈಷಿಗಳು ಅಡ್ಡಬಂದರೂ ನಿಲ್ಲಬೇಡಿ. ಮುನ್ನುಗ್ಗುವದೇ ನಮ್ಮ ದಾರಿ"[೨]

ಕಾರಾಗ್ರಹದಲ್ಲಿದ್ದಾಗ ಜನರ ಅಭಿಪ್ರಾಯಕ್ಕೆ ಮನ್ನಣೆ ಕೊಡುವಂತೆ ನಿಜಾಮನನ್ನು ಅವರು ಒತ್ತಾಯಿಸಿದರು. ಜವಾಬ್ದಾರಿ ಸರ್ಕಾರ ರಚಿಸುವಂತೆ ಕೇಳಿಕೊಂಡರು. ನಿಜಾಮನ ಕೊತೆ ಎಲ್ಲಾ ವಿವಿಧ ಸಂಧಾನವನ್ನು ತಿರಸ್ಕರಿಸಿದ ಸ್ವಾಮೀಜಿಯವರು ಹಿಂದು ಮುಸ್ಲಿಮರು ೫೦-೫೦ ರ ಅನುಪಾತದಲ್ಲಿ ಪ್ರಾತಿನಿಧ್ಯವಿರುವ ಜನಪ್ರಿಯ ಅಸೆಂಬ್ಲಿ ರಚನೆಯ ಸಲಹೆನ್ನು ತಿರಸ್ಕರಿಸಬೇಕೆಂದು ಅವರು ಜನರಿಗೆ ಕರೆ ನೀಡಿದರು. ಗಾಂಧಿಜೀಯವರ ಸೂಚನೆ ಮೇರೆಗೆ ೧೯೩೯ ರಲ್ಲಿ ಸತ್ಯಾಗ್ರವನ್ನು ನಿಲ್ಲಿಸಿದಾಗ ಸ್ವಾಮೀಜಿಯವರ ಬಿಡುಗಡೆಯಾಯಿತು.

ದಿನಾಂಕ ೧೧-೦೯-೧೯೪೦ ರಂದು ವ್ಯಕ್ತಿಗತ ಸತ್ಯಾಗ್ರಹ ನಡೆಸಲು ಸ್ವಾಮೀಜಿಯವರು ಗಾಂಧೀಜಿಯವರಿಂದ ಅನುಮತಿ ಪಡೆದರು. ಈ ಸಂದರ್ಭದಲ್ಲಿ ಬಂಧಿತರಾದ ಸ್ವಾಮೀಜಿಯವರನ್ನು ನಿಜಾಮ ಸರ್ಕಾರವು ನಿಜಾಮಬಾದ್‌ದ ಕೇಂದ್ರ ಕಾರಾಗ್ರಹದಲ್ಲಿ ೧೫ ತಿಂಗಳ ಕಾಲ ಬಂಧನದಲ್ಲಿಟ್ಟರು. ೧೯೪೨ ರಲ್ಲಿ ಅವರು ಮತ್ತೆ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭಾಗವಹಿಸಿದಾಗ ೧೬ ತಿಂಗಳು ಸ್ಥಾನಬದ್ಧತೆಗೆ ಒಳಗಾದರು. ಹೈದ್ರಾಬಾದ ಕರ್ನಾಟಕದ ಜನಾರ್ಧನರಾವ ದೇಸಾಯಿ, ಕೊಪ್ಪಳದ ವಿ.ಎಸ್. ದೇಸಾಯಿ, ನರಸಿಂಹರಾಯ ಹಂಪಿಕರ್, ಜನಾರ್ಧನರಾವ ಚಂಡ್ರಕಿ, ಶಿರೂರು ವೀರಭದ್ರಪ್ಪಾ ಹುಮನಾಬಾದನ ರಾಮಚಂದ್ರ ವೀರಪ್ಪ ಚಿಟಗುಪ್ಪದ ಆರ್.ವಿ. ಬಿಡಪ, ಹಕೀಖತರಾವ, ಕೆ.ಎಸ್. ರಾಜ ಮುಂತಾದವರು ಸ್ವಾಮೀಜಿಯವರ ರಾಜಕೀಯ ಗರಡಿಯಲ್ಲಿ ತರಬೇತಿ ಪಡೆದವರಾಗಿದ್ದಾರೆ. ಸ್ವರಾಜ್ಯ ಗಳಿಸುವುದಕ್ಕಾಗಿ ಕಾಂಗ್ರೇಸ್‌ನ ವಿಚಾರಗಳನ್ನು ಸ್ವಾಮೀಜಿಯವರ ಸಲಹೆ ಸೂಚನೆಯಂತೆ ಹಲಗು ರಾತ್ರಿ ಪ್ರಚಾರ ಮಾಡುತ್ತಿದ್ದರು. ಸ್ವಾಮೀಜಿಯವರ ಸಲಹೆ ನಿರಂತರ ಹೋರಾಟ ಹಾಗೂ ತ್ಯಾಗಗಳಿಂದ ರಾಜ್ಯದಲ್ಲಿ ಉಂಟಾಗಿದ್ದ ರಾಜಕೀಯ ಗಂಭೀರ ಪರಿಸ್ಥಿತಿಯನ್ನು

ಗಮನಿಸಿದ ಪ್ರಧಾನ ಮಂತ್ರಿ ನಿಜಾಮ ಸರ್ ಇಸ್ಮಾಯಿಲ್ ಮಿರ್ಜಾರವರು ೩ ನೇ ಜುಲೈ ೧೯೪೬ ರಲ್ಲಿ ರಾಜ್ಯ ಕಾಂಗ್ರೇಸ್ ಮೇಲಿದ್ದ ನಿಷೇಧವನ್ನು ರದ್ದು ಪಡಿಸಿದರು. ೧೯೪೭ -೪೮ ರ ರಾಜ್ಯ ಕಾಂಗ್ರೇಸ್ ಎಲ್ಲಾ ಚಟುವಟಿಕೆಗಳ ಹಿಂದಿನ ಚಾಲಕ ಶಕ್ತಿಯಾಗಿದ್ದ ಸ್ವಾಮೀಜಿಯವರು ಸಂಘರ್ಷಕ್ಕೆ ನೇರವಾಗಿ ನಿರ್ದೇಶನ ನೀಡುತ್ತಿದ್ದರು. ರಾಜಕೀಯ ಜಾಗೃತಿಯನ್ನು ಬೆಳಗಿಸುವ ಬೆಂಕಿಯ ಚಂಡಿನಂತೆ ಸ್ವಾಮೀಜಿಯವರು ಹೈದ್ರಾಬಾದ ಜನತೆಗೆ ಕಂಡು ಬಂದರು.

೬) ನಿಜಾಮ ಕರ್ನಾಟಕ ಪರಿಷತ್ : -

ಹೈದ್ರಾಬಾದ ಸಂಸ್ಥಾನದಲ್ಲಿದ್ದ ಕನ್ನಡಿಗರು ಪ್ರಾರಂಭದಿಂದಲು ಸಹ ಸಾಹಿತ್ಯಿಕ ಚಟುವಟಿಕೆಗಳಲ್ಲಿ ಆಸಕ್ತಿ ತೋರಿಸುತ್ತಾ ಬಂದಿದ್ದರು. ಸಾಹಿತ್ಯಿಕ ಚಟುವಟಿಕೆಗಳು ಸಾಮಾನ್ಯವಾಗಿ ಸರಕಾರದ ಕ್ರೂರ ದೃಷ್ಟಿಗೆ ಬೀಳುವುದಿಲ್ಲ. ಆದರೆ ಸ್ವಾತಂತ್ರ್ಯ ಭಾವನೆ ಮತ್ತು ಅದರ ಒತ್ತಾಯಗಳಿಂದ ಸಾಹಿತ್ಯ ಮುಕ್ತವಾಗಿರಲು ಸಾಧ್ಯವಿಲ್ಲ. ರಾಜ್ಯ ಕಾಂಗ್ರೇಸ್ ಮೇಲೆ ನಿಷೇಧವಿದ್ದಾಗ ಸ್ವಾಮೀಜಿಯವರು ನಿಜಾಮ ಕರ್ನಾಟಕ ಪರಿಷತ್‌ನ ಕಾರ್ಯಚಟುವಟಿಕೆಗಳಿಗೆ ಮಾರ್ಗದರ್ಶನ ನೀಡುವುದರ ಜೊತೆಗೆ ಸಭೆಗಳನ್ನು ನಡೆಸುತ್ತಿದ್ದರು. ಇಂತಹ ನಿಜಾಮ ಕರ್ನಾಟಕ ಪರಿಷತ್‌ನ ಸಭೆಗಳಲ್ಲಿ ಹುಮನಾಬಾದನ ಸ್ವಾತಂತ್ರ್ಯ ಹೋರಾಟಗಾರರು ಸಹ ಭಾವಹಿಸುತ್ತಿದ್ದರು. ಹೀಗೆ ರಾಜ್ಯ ಕಾಂಗ್ರೆಸ ಚಟುವಟಿಕೆಗಳು ನಿಜಾಮ ಕರ್ನಾಟಕ ಪರಿಷತ್ ಮೂಲಕ ಮುಂದುವರೆಯುತ್ತಿದ್ದವು.

ನಿಜಾಮ ಕರ್ನಾಟಕ ಪರಿಷತ್‌ನ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯ ಕಾಂಗ್ರೇಸ್ ಕಾರ್ಯಕಾರಿ ಮಂಡಳಿಯ ಸದಸ್ಯರು ಆಗಿದ್ದ ಜನಾರ್ಧನರಾವ ದೇಸಾಯಿ ಅವರ ನೇತೃತ್ವದಲ್ಲಿ ೧೯೪೦ ಜನೆವರಿ ೨೫,೨೬,೨೭ ರಂದು ಬೀದರ ನಲ್ಲಿ ನಡೆದ ಪರಿಷತ್‌ನ ಸಮಾವೇಶದ ಅಧ್ಯಕ್ಷರಾಗಿದ್ದರು. ಈ ಒಂದು ಅಧಿವೇಶನಕ್ಕೆ ಹುಮನಾಬಾದ ತಾಲ್ಲೂಕಿನ ಅನೇಕ ಸದಸ್ಯರು ಸಹ ಭಾಗವಹಿಸಿದ್ದರು. ಈ ಸಮಾವೇಶದ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪರಿಷತ್‌ನ ಗುರಿ ರಾಜಕೀಯ ಸ್ವಾತಂತ್ರ್ಯ ಎಂಬುದನ್ನು ಒತ್ತಿ ಹೇಳಿದರು. ಸ್ವಾತಂತ್ರ್ಯ ಗಳಿಸುವುದಕ್ಕಾಗಿ ಹೋರಾಟ ಮಾಡಲು ಜನರಲ್ಲಿ ಸ್ಪೂರ್ತಿ ತುಂಬಲು, ಪ್ರಾಚೀನ ಕಾಲದ ವೈಭವವನ್ನು ಜನರಿಗೆ ತಿಳಿಸುವ ಸಲುವಾಗಿ ಅಧಿವೇಶನದಲ್ಲಿ ಉದ್ರೇಕಕಾರಿ ಲೇಖನ ಬರಹಗಳನ್ನು ಮಂಡಿಸುತ್ತಿದ್ದರು. ಬೀದರನ ಅಧಿವೇಶನದಲ್ಲಿ ಹಿಂದು ಮುಸ್ಲಿಮರಿಗೆ ೫೦-೫೦ ಅನುಪಾತದಲ್ಲಿ ಪ್ರಾತಿನಿಧ್ಯವಿರುವ ಜನಪ್ರಿಯ ಅಸೆಂಬ್ಲಿ ಸ್ಥಾಪಿಸುವ ನಿಜಾಮನ ಸಲಹೆಯನ್ನು ತಿರಸ್ಕರಿಸುವ ನಿರ್ಣಯವನ್ನು ಪರಿಷತ್ ಸ್ವೀಕರಿಸಿತು. ಪರಿಷತ್

ಇನ್ನೊಂದು ನಿರ್ಣಯದಲ್ಲಿ ರಾಜ್ಯ ಕಾಂಗ್ರೇಸ ಮೇಲಿನ ನಿಷೇಧವನ್ನು ರದ್ದು ಪಡಿಸುವಂತೆ ಹಾಗೂ ನಾಗರಿಕ ಹಕ್ಕುಗಳನ್ನು ಒದಗಿಸುವಂತೆ ನಿಜಾಮನನ್ನು ಒತ್ತಾಯಿಸಲಾಯಿತು. ಬೀದರ ನಲ್ಲಿ ನಡೆದ ಅಧಿವೇಶನದ ಯಶಸ್ವಿಗಾಗಿ ಭಾಲ್ಕಿಯ ಚನ್ನಬಸವ ಪಟ್ಟದೇವರು, ಅಪ್ಪಾರಾವ ಪ್ರಭುರಾವ ಕಂಬಳಿವಾಲ, ರಂಗನಾಥರಾವ ಸಾಯಿಗಾಂವಕರ ಮತ್ತು ಚಿಟಗುಪ್ಪದ ಆರ್.ವಿ. ಬಿಡಪರು ಶ್ರಮಿಸಿದರು.

ಸಾಹಿತ್ಯ ವೇದಿಕೆಯಾಗಿದ್ದರು ಸಹ ನಿಜಾಮ ಕರ್ನಾಟಕ ಪರಿಷತ್ ಎಲ್ಲರ ಮನಸ್ಸಿನಲ್ಲು ಸ್ವಾತಂತ್ರ್ಯ ಭಾವನೆ ಬೆಳೆಯುವಂತೆ ಮಾಡಿತು ಮತ್ತು ನಿಜಾಮನ ಸರ್ವಾಧಿಕಾರಿ ಆಳ್ವಿಕೆಯ ವಿರುದ್ಧ ಚಳುವಳಿ ನಡೆಸಬಲ್ಲವಂತಹ ಕೆಚ್ಚೆದೆಯ ದೇಶಭಕ್ತರನ್ನು ತಯಾರಿಮಾಡಿಕೊಟ್ಟಿತು. ಕರ್ನಾಟಕ ಪರಿಷತ್‌ನ ಚಟುವಟಿಕೆಗಳಿಂದಾಗಿ ರಾಷ್ಟ್ರೀಯತೆ ಪ್ರವಾಹ ನುಗ್ಗಿ ಹರಿಯುವಂತಾಯಿತು.

೨) ಭಾರತ ಬಿಟ್ಟು ತೊಲಗಿ ಚಳುವಳಿ (ಚಲೇಜಾವ ಚಳುವಳಿ) :-

ಗಾಂಧಿಜೀಯವರ ಮಾರ್ಗದರ್ಶನದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಪ್ರಾರಂಭಿಸಿದ ಭಾರತ ಬಿಟ್ಟು ತೊಲಗಿ ಚಳುವಳಿಯು ಹೈದ್ರಬಾದ ಸಂಸ್ಥಾನವನ್ನು ಅತ್ಯಂತ ಸ್ಥಿತಿಯಲ್ಲಿ ಇಟ್ಟುಬಿಟ್ಟಿತು. ಹೈದ್ರಾಬಾದ ಸಂಸ್ಥಾನವು ಈ ಚಳುವಳಿಯ ಪ್ರಭಾವದಿಂದ ತಪ್ಪಿಸಿಕೊಳ್ಳುವಂತಿರಲಿಲ್ಲ. ರಾಜ್ಯ ಕಾಂಗ್ರೆಸನ ಮೇಲೆ ನಿಷೇಧವಿದ್ದುದ್ದರಿಂದ ಮತ್ತು ಮೊಗಲಾಯಿ ಅಧಿಕಾರಿಗಳು ದಮನಕಾರಿ ಕಾನೂನುಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರಿಂದ ಮತ್ತು ರಜಾಕಾರರ ಕ್ರೂರ ಕೃತ್ಯಗಳಿಂದಾಗಿ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಭಾರತ ಬಿಟ್ಟು ತೊಲಗಿ ಚಳುವಳಿಯು ಬೀದರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಭೂಗತ ಚಟುವಟಿಕೆಗಳಿಂದ ಮೀಸಲಾಗಿಬಿಟ್ಟಿತು.

ಹುಮನಾಬಾದನ ಎಸ್.ಬಿ. ಅವಧಾನಿ, ಕೆ.ಎಸ್. ರಾಜ ಮತ್ತು ಚಿಟಗುಪ್ಪದ ಹಕೀಖತರಾವ ಮುಂತಾದವರು ನಿಜಾಮ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಿ ಫಸಲಿ ೦೩-೧೧-೧೩೫೨ ರಂದು ಸಾರ್ವಜನಿಕ ಶಾಂತಿ ರಕ್ಷಣಾ ಕಾನೂನಿನನ್ವಯ ಬಂಧಿರಾದರು. ಪ್ರತಿಯೊಬ್ಬ ಅಪರಾಧಿಗೂ ೨೦೦ ರೂಪಾಯಿ ದಂಡ ಹಾಕಿ ಗುಲಬರ್ಗಾ, ಬೀದರ, ರಾಯಚೂರು, ಔರಂಗಾಬಾದ ಮತ್ತು ಹೈದ್ರಾಬಾದನ ಕೇಂದ್ರ ಕಾರಾಗ್ರಹದಲ್ಲಿ ಬಂಧಿಸಿಟ್ಟರು. ಈ ಎಲ್ಲಾ ರಾಷ್ಟ್ರೀಯವಾದಿಗಳನ್ನು ಫಸಲಿ ೨೧-೦೮-೧೩೫೨ ರಂದು ನಿಜಾಮ ಸರ್ಕಾರವು ಬಿಡುಗಡೆ ಮಾಡಿತು.

ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಹೋರಾಡಲು ಜನರನ್ನು ಪ್ರಚೋದಿಸುವ ಸಲುವಾಗಿ ರಾಷ್ಟ್ರೀಯವಾದಿಗಳು ಭೂಗತರಾಗಿ ಗಣೇಶ

ಹಾಗೂ ದಸರಾ ಹಬ್ಬಗಳನ್ನು ಬಳಸಿಕೊಂಡರು. ಜಮೀನ್ದಾರರಿಂದ ಹಾಗೂ ನಿಜಾಮನಿಂದ ರೈತರು ಹೇಗೆ ಶೋಷಣೆಗೆ ಒಳಗಾಗಿದ್ದಾರೆ ಎಂಬುದನ್ನು ಅವರು ಹಳ್ಳಿಗರಿಗೆ ತಿಳಿಯಪಡಿಸುತ್ತಿದ್ದರು. ಪ್ರಜಾತಂತ್ರ ವ್ಯವಸ್ಥೆ ಮಾತ್ರ ಜನರ ಬದುಕನ್ನು ಸುಧಾರಿಸಬಲ್ಲದು ಎಂಬ ನಂಬಿಕೆ ವ್ಯಾಪಕವಾಗಿತ್ತು. ದೇಶ ಭಕ್ತ ಹೋರಾಟಗಾರರು ಭಾರತ ಬಿಟ್ಟು ತೊಲಗಿ ಚಳುವಳಿಯ ಕಾಲದಲ್ಲಿ ಬ್ರಿಟೀಷ ಸರ್ಕಾರದ ಹಾಗೂ ನಿಜಾಮನ ವಿರುದ್ಧ ಇದ್ದ ಜನರ ಆಕ್ರೋಶವನ್ನು ಪೋಸ್ಟರಗಳ ಮೂಲಕ, ಕರಪತ್ರಗಳನ್ನು ರಾತ್ರಿವೇಳೆ ಹಂಚುವುದರ ಮೂಲಕ ವ್ಯಕ್ತಪಡಿಸುತ್ತಿದ್ದರು. ಇದಲ್ಲದೆ ಅವರು ಅಂಚೆ ಕಚೇರಿ ಹಾಗೂ ರೈಲ್ವೆ ನಿಲ್ದಾಣ ಹಾಗೂ ಸೇಂಧಿ ಅಂಗಡಿಗಳನ್ನು ಲೂಟಿ ಮಾಡುತ್ತಿದ್ದರು. ಅಲ್ಲದೇ ಈಚಲು ಮರಗಳನ್ನು ಸಹ ಕಡಿಯುತ್ತಿದ್ದರು. ಪೊಲೀಸ ಕಾವಲಿನ ಹದ್ದಿನಕಣ್ಣನ್ನು ತಪ್ಪಿಸಿ ಸೂರ್ಯಾಸ್ತದ ನಂತರ ಶಿಕ್ಷಣ ಸಂಸ್ಥೆಗಳ ಮೇಲೆ ಹಾಗೂ ಸರ್ಕಾರದ ಕಟ್ಟಡಗಳ ಮೇಲೆ ರಾಷ್ಟ್ರಧ್ವಜ, ಓಂ ಧ್ವಜ ಹಾಗೂ ಭಗವಾ ಧ್ವಜಗಳನ್ನು ಹಾರಿಸುವುದರ ಮೂಲಕ ಸತ್ಯಾಗ್ರಹಿಗಳು ಜನರ ಮನಸ್ಸಿನಲ್ಲಿ ರಾಜಕೀಯ, ಧಾರ್ಮಿಕ ಪ್ರಜ್ಞೆ ಮೂಡುವಂತೆ ಮಾಡುತ್ತಿದ್ದರು.

೮) ಇತರ ಕಾರಣಗಳು : –

ಮೇಲೆ ವಿವರಿಸಿದ ಅಂಶಗಳಲ್ಲದೆ ಕೆಳಗೆ ವಿವರಿಸುವ ಸಂಗತಿಗಳು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ರಾಷ್ಟ್ರೀಯತೆ ಬೆಳೆಯಲು ಕಾಣಿಕೆ ನೀಡಿದವು. ಪೂರ್ವಕರಾವಳಿಯ ಭಾಗದಲ್ಲಿನ ಬಂಗಾಳ, ನಾಗಪೂರ ರೈಲು ಮಾರ್ಗವು ದುರಸ್ತಿಯಲ್ಲಿದ್ದುದ್ದರಿಂದ ರಾಜಕೀಯ ನೇತಾರರೆಲ್ಲ ಕಾಕಿನಾಟಕ್ಕೆ ಹೋಗುವಾಗಲೆಲ್ಲಾ ಹೈದ್ರಾಬಾದ ಮೇಲೆ ಸಾಗಿ ಹೋಗಬೇಕಾಗಿತ್ತು. ರಾಷ್ಟ್ರೀಯ ನಾಯಕರುಗಳಾಗಿದ್ದ ಶ್ರೀಮತಿ ಸರೋಜನಿ ನಾಯ್ಡು (೧೯೨೩), ಮಹಾತ್ಮಾ ಗಾಂಧಿ (೧೯೨೪ ಮತ್ತು ೧೯೩೪), ಸರದಾರ ವಲ್ಲಭಬಾಯಿ ಪಟೇಲ (೧೯೩೧), ಜಯಪ್ರಕಾಶ ನಾರಾಯಣ (೧೯೪೭), ಸಿ.ಆರ್. ದಾಸ ಮುಂತಾದವರು ಈ ಭಾಗದಲ್ಲಿ ಸಂಚರಿಸುವ ಸುದ್ದಿ ಮುಟ್ಟಿದಾಗಲೆಲ್ಲ ಹೈದ್ರಾಬಾದ ಸಂಸ್ಥಾನದ ವಿವಿಧ ರೈಲು ನಿಲ್ದಾಣಗಳಲ್ಲಿ ಸಾರ್ವಜನಿಕರು ಅವರನ್ನು ಅದ್ದೂರಿಯಿಂದ ಸ್ವಾಗತಿಸುತ್ತಿದ್ದರು. ಸಾರ್ವಜನಿಕರ ಒತ್ತಾಯದ ಮೇರೆಗೆ ನೇತಾರರು ಸ್ವದೇಶಿ ಭಾವನೆ ಕುರಿತು ಸ್ವಾತಂತ್ರ್ಯದ ಮಹತ್ವ ಕುರಿತು ಭಾಷಣವನ್ನು ಮಾಡುತ್ತಿದ್ದರು. ಮೇ–೦೨ ೧೯೪೭ ರಂದು ಕೊಪ್ಪಳ ರೈಲು ನಿಲ್ದಾಣದಲ್ಲಿ ಜಯಪ್ರಕಾಶ ನಾರಾಯಣರು ಮಾಡಿದ ಭಾಷಣವು ಜನರಿಗೆ ಬ್ರಿಟೀಷ ಹಾಗೂ ನಿಜಾಮರ ವಿರುದ್ಧ ಹೋರಾಡಲು ಸ್ಫೂರ್ತಿಯನ್ನು ನೀಡಿತು. ಈ ಒಂದು ಭಾಷಣವನ್ನು ಕೇಳಲು ಹುಮನಾಬಾದ ತಾಲ್ಲೂಕಿನ ಹೋರಾಟಗಾರರು ಸಹ

ಭಾಗವಹಿಸಿದರು. ಅಲ್ಲದೇ ಹರ್ಡೇಕರ ಮಂಜಪ್ಪ ಮತ್ತು ಲೋಕಮಾನ್ಯ ತಿಲಕರ ವಿಚಾರಗಳಿಂದ ಹುಮನಾಬಾದನ ನವ ತರುಣರು ಬಹಳ ಪ್ರಭಾವಿತರಾಗಿದ್ದರು.

ಅಡಿಟಿಪ್ಪಣಿಗಳು :-

೧) ಮಹಾಬಳೇಶ್ವರಪ್ಪ ಬಿ.ಸಿ.; ಹೈದ್ರಾಬಾದ ಕರ್ನಾಟಕದಲ್ಲಿ ರಾಜಕೀಯ ಚಳುವಳಿ (೧೯೪೭-೨೦೦೦) ಪುಟ ೫೨

೨) -ಅದೇ- ಪುಟ ೫೪

ಅಧ್ಯಾಯ-೫

ರಜಾಕಾರರ ಚಳುವಳಿ

ಹೈದ್ರಾಬಾದ ಸಂಸ್ಥಾನದಲ್ಲಿ ರಾಷ್ಟ್ರೀಯ ಮತ್ತು ರಾಜಕೀಯ ಜಾಗೃತಿಯನ್ನು ಸಹಿಸದ ನಿಜಾಮನು ತನ್ನ ಸ್ವಾತಂತ್ರ ರಕ್ಷಣೆಗಾಗಿ ರಜಾಕಾರರನ್ನು ಮತ್ತು ಮೊಗಲೈ ಪೊಲೀಸರನ್ನು ಬೆಂಬಲಿಸಿದನು. ಇದರೊಂದಿಗೆ ಸಂಸ್ಥಾನದಲ್ಲಿ ಮತಾಂಧ ಶಕ್ತಿಗಳ ಕೈಮೇಲಾಯಿತು. ಹೈದ್ರಾಬಾದ ಸಂಸ್ಥಾನದ ವಿಲೀನ ಚಳುವಳಿಯಲ್ಲಿ ರಜಾಕಾರರ ಹಾವಳಿ ಒಂದು ಭಯಾನಕ ಹಾಗೂ ನಿರ್ಣಾಯಕ ಅಧ್ಯಾಯವಾಗಿದೆ. "ಮಜ್ಲೀಸ್ ಐ- ಇತ್ತೆಹಾದ ಉಲ್ ಮುಸ್ಲಿಮೀನ್" ಸಂಸ್ಥೆಯ ಹುಟ್ಟಿನಲ್ಲಿ ರಜಾಕಾರರ ಹುಟ್ಟು ಮತ್ತು ಬೆಳವಣಿಗೆ ಅಡಗಿದೆ. ಸಂಸ್ಥಾನದಲ್ಲಿ ಮುಲ್ಕಿ ಮತ್ತು ಮುಲ್ಕಿಯೇತರರನ್ನು ಬಲಪಡಿಸುವ ಮತ್ತು "ಧರ್ಮವಾದಿ ಸರ್ವಾಧಿಕಾರಿ ಸರ್ಕಾರ" ಸ್ಥಾಪಿಸುವ ಹಿನ್ನಲೆಯಲ್ಲಿ ನಿಜಾಮ ಸರ್ಕಾರದ ನಿವೃತ್ತ ಅಧಿಕಾರಿ ಮಹ್ಮದ್ ನವಾಜ ಖಾನ್ ೧೯೨೭ ರಲ್ಲಿ ಇತ್ತೆಹಾದ ಸಂಸ್ಥೆಯನ್ನು ಸ್ಥಾಪಿಸಿದನು. ಬಹಾದ್ದೂರ ಯಾರ ಜಂಗ ಮತ್ತು ನಂತರ ಖಾಸಿಮ ರಜ್ವಿಯು ಈ ಸಂಸ್ಥೆಯ ನಾಯಕತ್ವವನ್ನು ವಹಿಸಿಕೊಂಡರು. ಈ ಸಂಸ್ಥೆಯ ಅನುಯಾಯಿಗಳಿಗೆ ರಜಾಕಾರರ ಎಂದು ಕರೆಯುತ್ತಾರೆ. ರಜಾಕಾರ ಎನ್ನುವ ಪದ ದೇವರ ಸೇವೆಗೆ ಮೀಸಲಾದ ಸ್ವಯಂ ಸೇವಕ ಎಂದು ಅರ್ಥ ಕೊಡುತ್ತದೆ. ೧೯೪೬ ರಲ್ಲಿ ಇತ್ತೆಹಾದ ಸಂಸ್ಥೆಯ ಮುಖ್ಯಸ್ಥನಾಗಿ ಖಾಸಿಂ ರಜ್ವಿ ಅಧಿಕಾರ ವಹಿಸಿಕೊಂಡನು. ಅಲೀಘಡ ಮುಸ್ಲಿಂ ವಿಶ್ವವಿದ್ಯಾಲಯದ ಆವರಣದಲ್ಲಿ ಚಹಾ ಅಂಗಡಿ ನಡೆಸುತ್ತಿದ್ದ ಖಾಸಿಂ ರಜ್ವಿಯು ಅದೇ ವಿಶ್ವ ವಿದ್ಯಾಲಯದಿಂದ ಕಾನೂನು ಪದವಿ ಪಡೆದು ಮಹಾರಾಷ್ಟ್ರದ ಲಾತೂರಿನಲ್ಲಿ ವಕೀಲ ವೃತ್ತಿಯನ್ನು ಪ್ರಾರಂಭಿಸಿದನು. ಈತನ ನಾಯಕತ್ವದಲ್ಲಿ ಇತ್ತೆಹಾದ ಅರೆಸೈನಿಕ ಪ್ಯಾಸಿಸ್ಟ ಸಂಸ್ಥೆಯಾಗಿ ರೂಪಗೊಂಡಿತು. ಈ ಸಂಸ್ಥೆ ನಿಜಾಮನ ರಾಜಕೀಯ ಪಕ್ಷ ಅಲ್ಲ. ಇದು ಅಲ್ಲಾ ಹಜರತ್ ದಯಪಾಲಿಸಿದ ಇಡೀ ಡೆಕ್ಕನ್ನಿನ ಸಾರ್ವಭೌಮ ಶಕ್ತಿಯಂದು ಖಾಸಿಂ ರಜ್ವಿ ಘೋಷಿಸಿದನು. ಸಂಸ್ಥಾನದಲ್ಲಿ ಸತ್ಯಾಗ್ರಹ ಚಳುವಳಿಯನ್ನು ನಿರ್ನಾಮಮಾಡಲು ಮತ್ತು ದೇಶ ಭಕ್ತರಲ್ಲಿ ಭಯ ಹುಟ್ಟಿಸಲು ನಿಜಾಮನ ಅಧಿಕಾರವನ್ನು ಮೊಟಕುಗೊಳಿಸಿ ಸರಕಾರದ ಸರ್ವಾಧಿಕಾರಿಯಾಗಿ ಕೆಲಸ ನಿರ್ವಹಿಸಲು ಪ್ರಾರಂಭಿಸಿದನು. ಸಂಸ್ಥಾನದ ಗ್ರಹ ಸಚಿವರಾದ ಮೋಹಿನ್ ನವಾಜ್ ಜಂಗ್, ರಕ್ಷಣಾ ಖಾತೆಯ ಅಬ್ದುಲ್ ರಹೀಮ್ ಮತ್ತು ನಿಜಾಮನ ರಾಜಕೀಯ ಕಾರ್ಯದರ್ಶಿಯಾಗಿದ್ದ ಪಿಂಗ್ಲೆ ವೆಂಕಟರೆಡ್ಡಿ, ಖಾಸಿಂ ರಜ್ವಿಗೆ ಬೆಂಬಲ ಘೋಷಿಸಿದರು. ಭಾರತದ ವಿಲೀನವನ್ನು ವಿರೋಧಿಸಿದ ಖಾಸಿಂ ರಜ್ವಿಯು ಸ್ವಾತಂತ್ರ ಯೋಧರ ಮೇಲೆ ಅತ್ಯಾಚಾರ ಎಸಗಲು ರಜಾಕಾರರಿಗೆ

ಶಸ್ತ್ರಾಸ್ತ್ರ ಮತ್ತು ಮದ್ದು ಗುಂಡುಗಳನ್ನು ಒದಗಿಸಿದನು. ಬೆಂಕಿಯುಗುಳುವ ಕಣ್ಣು ಹಾಗೂ ಭಾವ ಪೂರ್ಣವಾಗ್ಮಿ ಆಗಿದ್ದ ಖಾಸಿಂ ರಜ್ವಿ ಮಧ್ಯಯುಗಿನ ರಮ್ಯ ನಾಯಕನಂತೆ ಭ್ರಮೆ ಹುಟ್ಟಿಸಿದನು. "ಆಜಾದ್ ಹೈದ್ರಾಬಾದ" ನಿರ್ಮಾಣ ಮಾಡಲು ಹಳ್ಳಿ ಹಳ್ಳಿಗಳಲ್ಲಿ ಖಾಸಿಂ ರಜ್ವಿಯ ಸಲಹೆಯಂತೆ ರಜಾಕಾರರು ಮುಗ್ಧ ಮತ್ತು ಸ್ವಾತಂತ್ರ ಪ್ರೇಮಿಗಳ ಮೇಲೆ ದುಷ್ಕೃತ್ಯಗಳನ್ನು ಎಸಗಿದರು. ಸಂಸ್ಥಾನದ ೫೨ ಸ್ಥಳಗಲ್ಲಿ ರಜಾಕಾರರಿಂದ ಕೂಡಿದ ಸಶಸ್ತ್ರ ಪಡೆಗಳನ್ನು ರಜ್ವಿಯು ಸ್ಥಾಪಿಸಿದನು. ೧೯೪೮ ರ ಜನೆವರಿಯಲ್ಲಿ ೩೦ ಸಾವಿರ ಸಂಖ್ಯೆಯ ರಜಾಕಾರರ ಪಡೆಯು ೧೯೪೮ ರ ಜುಲೈನಲ್ಲಿ ೧೪ ಲಕ್ಷ ಅರೆ ಸೈನಿಕರ ದೈತ್ಯ ಶಕ್ತಿಯಾಗಿ ಬೆಳೆಯಿತು. ನಿಜಾಮನ ರೇಡಿಯೋ ಸೇವೆ ಖಾಸಿಂ ರಜ್ವಿಯ ವಶದಲ್ಲಿತ್ತು. ರಜಾಕಾರರ ಪಡೆಯಲ್ಲಿ ಕೆಲವು ಹಿಂದುಗಳು ಕಾರ್ಯನಿರ್ವಹಿಸಿದರು ಎನ್ನುವ ಸಂಗತಿ ಗಮನಾರ್ಹವಾಗಿದೆ. ಹೈದ್ರಾಬಾದ ಸಂಸ್ಥಾನದ ಹಳ್ಳಿ-ಹಳ್ಳಿಗಳಲ್ಲಿ ಮುಗ್ಧ ಜನತೆಯ ಮೇಲೆ ರಜಾಕಾರರು ಅಮಾನವೀಯ ಕೃತ್ಯ ನಡೆಸಿದರು. ಹುಮನಾಬಾದ, ಚಿಂಚೋಳಿ, ಯಳಸಂಗಿ, ರಟ್ಕಲ್, ದೋಗಿಬಾನಾ, ಗೋರ್ಟಾ ಪ್ರದೇಶದಲ್ಲಿ ರಜಾಕಾರರು ಮಹಿಳೆಯರ ಮಾನಭಂಗ, ಲೂಟಿ, ಮುಗ್ಧರ ಕೊಲೆ, ಸ್ವಾತಂತ್ರ ಹೋರಾಟಗಾರರನ್ನು ಹಿಂಸಿಸಿ ಅವರ ಕೈಕಾಲುಗಳಿಗೆ ಬೇಡಿ ತೊಡಿಸಿ ಅವಮಾನಕರ ರೀತಿಯಲ್ಲಿ ಬೀದಿ ಬೀದಿಗಳಲ್ಲಿ ಮೆರವಣಿಗೆ ಮಾಡಿದರು. ಅಲ್ಲದೇ ಹಿಂದುಗಳು ಬಳಸುವ ನೀರಿನ ಬಾವಿಗಳಲ್ಲಿ ಸಗಣಿ, ಮೂಳೆಗಳನ್ನು ಹಾಕುವುದು, ಹಿಂದೂಗಳ ಬೆಳೆಗಳನ್ನು ಲೂಟಿಮಾಡುವುದು, ಸಂಪತ್ತನ್ನು ಕೊಳ್ಳೆ ಹೊಡೆಯಲು ಬೆಂಕಿಹಚ್ಚುವ ಕಾರ್ಯದಲ್ಲಿ ರಜಾಕಾರರು ನಿರತರಾದರು. ಬೃಹತ್ ಮೆರವಣಿಗೆಯಲ್ಲಿ ಚಾಕು ಚೂರಿ, ಭರ್ಚಿಗಳನ್ನು ಪ್ರದರ್ಶಿಸುತ್ತಾ ತಾವು ಕೊಂದ ಮಕ್ಕಳ ಶಿರವನ್ನು ಖಡ್ಗಗಳ ತುದಿಗೆ ಸಿಕ್ಕಿಸಿಕೊಂಡು ರಾಕ್ಷಸರಂತೆ ಮೆರೆದಾಡುತ್ತಾ, ಗಾಳಿಯಲ್ಲಿ ಗುಂಡು ಹಾರಿಸುತ್ತಾ ಜವಾಬ್ದಾರಿ ಸರ್ಕಾರವನ್ನು ಒತ್ತಾಯಿಸುವ ಜನರಲ್ಲಿ ಭಯ ಹುಟ್ಟಿಸಿದರು. ದೇವಾಲಯಗಳನ್ನೆಲ್ಲಾ ನೆಲಸಮ ಗೊಳಿಸುವ ಪ್ರಯತ್ನ ಮಾಡಿದರು. ಓಂ ಧ್ವಜ, ಭಗವಾ ಧ್ವಜ, ರಾಷ್ಟ್ರ ಧ್ವಜ ಮತ್ತು ಗಾಂಧಿ ಟೋಪಿಗಳನ್ನು ಸುಟ್ಟುಹಾಕಿದರು. ಹವನಕುಂಡಗಳ ಮೇಲೆ ದಾಳಿಮಾಡುತ್ತಿದ್ದರು. ಹುಮನಾಬಾದನ ಅನೇಕ ಸ್ಥಳಗಳಲ್ಲಿ ರಜಾಕಾರರು ಸ್ವಾತಂತ್ರ ಹೋರಾಟಗಾರರ ಬೆರಳುಗಳಿಗೆ ಸೀಮೆಎಣ್ಣೆಯಲ್ಲಿ ನೆನೆಸಿದ ಹತ್ತಿ ಬಟ್ಟೆ ಸುತ್ತಿ ಬೆಂಕಿ ಇಟ್ಟರು. ೧೯೪೭-೪೮ ಅವಧಿಯಲ್ಲಿ ನಿಜಾಮ ರಾಜ್ಯದಲ್ಲಿ ಶಾಂತಿ ಮತ್ತು ಕಾನೂನು ವ್ಯವಸ್ಥೆ ಮಾಯವಾಯಿತು. ಎಲ್ಲಿ ನೋಡಿದರು ರಜಾಕಾರರ ದಮನಕಾರಿ ಆಳ್ವಿಕೆ ಕಂಡಿತು. ಹುಮನಾಬಾದ ತಾಲ್ಲೂಕಿನಲ್ಲಿ ರಜಾಕಾರರ ಹಾವಳಿಗೆ ತುತ್ತಾದ ಗ್ರಾಮಗಳನ್ನು ಭೂಪಟದಲ್ಲಿ ನೋಡಬಹುದು. ಒಟ್ಟಾರೆ ಹೈದ್ರಾಬಾದ ಕರ್ನಾಟಕದ ೩೨೫ ಗ್ರಾಮಗಳಲ್ಲಿ ೫೬ ಕೋಟಿ ಹಣ, ೬೨ ಲಕ್ಷ ಬೆಲೆಬಾಳುವ ಸಾಮಾನುಗಳನ್ನು

ರಜಾಕಾರರು ದೋಚಿದರು. ೧೮೭ ಜನರನ್ನು ಕೊಲೆ ಮಾಡಿದರು. ೧೧೨ ಮಾನಭಂಗ ಪ್ರಕರಣಗಳು ನಡೆದವು.

ಹುಮನಾಬಾದ ತಾಲೂಕಿನಲ್ಲಿ ನಡೆದ ರಜಾಕಾರರ ದುಷ್ಕೃತ್ಯಗಳು:

- **ಮಹಿಳೆಯ ರಕ್ಷಣೆ :-**

ಹುಮನಾಬಾದ ಊರಿನ ಒಬ್ಬ ಲಿಂಗಾಯತ ಹೆಣ್ಣು ಮಗಳು ಪ್ರತಿ ದಿನ ಬಟ್ಟೆ ತೊಳೆಯಲು ಹೋಗುವಂತೆ ಆ ದಿನವು ಹೋದಳು. ಮುಸ್ಲಿಂ ಯುವಕರು ಅವಳು ಹೋಗುವುದನ್ನು ನೋಡಿದರು. ಅವಳ ಸುಂದರವಾದ ರೂಪ ಅವರ ಮನಸ್ಸನ್ನು ಆಕರ್ಷಿಸಿತು. ಇವಳನ್ನು ಬಿಡದೆ ಆ ಯುವಕರು ಹಿಂಬಾಲಿಸಿದರು. ಸುಮಾರು ೨೦ ಜನ ಯುವಕರು ಅವಳನ್ನು ಪೀಡಿಸುತ್ತಿದ್ದರು. ಹೆಣ್ಣು ಮಗಳು ಚೀರಾಡುತ್ತಿದ್ದಳು ಆ ಧ್ವನಿಯನ್ನು ಪಕ್ಕದ ಹೊಲದ ಹೆಣ್ಣು ಮಗಳು ಕೇಳಿದಳು. ತಾನು ಬಿಡಿಸಲು ಹೋದರೆ ನನ್ನನ್ನು ಬಿಡುವುದಿಲ್ಲವೆಂದು ತಿಳಿದು ಆ ಹೆಣ್ಣು ಮಗಳು ವಿಚಾರ ಮಾಡಿ ಪಕ್ಕದಲ್ಲಿ ಹೊಲದಲ್ಲಿ ಕೆಲಸ ಮಾಡುತ್ತಿದ್ದ ರಾಮಚಂದ್ರರಿಗೆ ಸೂಚನೆ ಕೊಟ್ಟಳು. ರಾಮಚಂದ್ರರು ಆಗ ಊಟ ಮಾಡುತ್ತಿದ್ದರು. ವಿಷಯ ತಿಳಿಯುತ್ತಲೇ ಊಟವನ್ನು ಅಲ್ಲಿಗೆ ನಿಲ್ಲಿಸಿ, ಒಕ್ಕಲುತನದ ಸಾಮಾನುಗಳಲ್ಲೊಂದಾದ ಉದ್ದನೆಯ ದಂಡಿಗೆಯನ್ನು ತೆಗೆದುಕೊಂಡು ಧಾವಿಸಿ ಬಂದರು. ಒಬ್ಬೊಬ್ಬರಿಗು ಒಂದೊಂದು ದಂಡಿಗೆಯಿಂದ ಏಟು ಕೊಟ್ಟು ಕಳುಹಿಸಿದರು. ಅಷ್ಟರಲ್ಲಿ ತರುಣರು ಒಟ್ಟಾಗಿ ಬಂದು ಒಬ್ಬರಿಗೆ ನಾಲ್ಕುಜನ ಸೇರಿ ರಾಮಚಂದ್ರರಿಗೆ ಸಿಕ್ಕಾಪಟ್ಟೆ ಹೊಡೆಯತೊಡಗಿದರು. ಎಲ್ಲರೂ ಹೊರಗೆ ಬಿಡದೆ ಮುತ್ತಿಗೆ ಹಾಕಿ ಬಡಿಯುತ್ತಿದ್ದರು. ಒಮ್ಮಿಂದೊಮ್ಮೆಲೆ ಒಬ್ಬ ಯುವಕ ಮುಂದೆ ಬಂದ ತನ್ನ ಕೈಯಲ್ಲಿರುವ ಭರ್ಚಿ ಹೊಟ್ಟೆಗೆ ಇಳಿಸಿದನು. ಇದರಿಂದ ಹೊಟ್ಟೆ ಹರಿಚು ರಕ್ತ ಸುರಿಯತೊಡಗಿತು. ಹೊಟ್ಟೆಯಿಂದ ಕರುಳುಗಳು ಹೊರ ಬಿದ್ದವು. ಇದನ್ನು ಕಂಡು ಇವನೇನು ಬದುಕುಳಿಯುವ ಸಾಧ್ಯತೆ ಕಡಿಮೆ ಎಂದು ಆ ಮುಸ್ಲಿಂ ಯುವಕರು ಅಲ್ಲಿಂದ ಪರಾರಿಯಾದರು.

ಇತ್ತ ಹೆಣ್ಣು ಮಗಳು ಸುರಕ್ಷಿತವಾಗಿ ಮನೆ ಸೇರಿದಳು. ಆದರೆ ಅವಳಿಗೆ ಸಮಾಧನಾವಾಗಲಿಲ್ಲ. ತನ್ನನ್ನು ಉಳಿಸುವುದಕ್ಕಾಗಿ ಅವನು ಮಾಡಿದ ಹೋರಾಟ ಕಂಡು ಮನಸ್ಸು ವಿಲಿವಿಲಿ ಒದ್ದಾಡತೊಡಗಿತು. ರಾಮಚಂದ್ರ ಸಹೋದರ ಲಕ್ಷ್ಮಣ ಅವರಿಗೆ ನಡೆದ ಸಂಗತಿಯಲ್ಲ ವಿವರಿಸಿದಳು ಮುಸ್ಲಿಂ ತರುರಣರು ರಾಮಚಂದ್ರರಿಗೆ ಚನ್ನಾಗಿ ಹೊಡೆದು ಪರಾರಿಯಾದುದನ್ನು ಮರೆಯಲ್ಲಿಯೆ ನಿಂತು ನೋಡುತ್ತಿರುವ

ಹೆಣ್ಣು ಮಗಳು ಓಡಿ ಬಂದು ದುಃಖಿಸತೊಡಗಿದಳು. ರಾಮಚಂದ್ರರ ಬಾಯಿಯಲ್ಲಿ ನೀರು ಹಾಕಲು ಅವಳಲ್ಲಿ ಯಾವ ಪಾತ್ರೆಗಳು ಇರಲಿಲ್ಲ. ಅಷ್ಟರಲ್ಲಿಯೇ ಆ ಕಡೆಯಿಂದ ಲಕ್ಷ್ಮಣ ತನ್ನ ತಮ್ಮನಿಗೆ ಗಂಡಾಂತರ ಒದಗಿ ಬಂದಿದೆ ಎಂದು ತಿಳಿದು ಆರ್ಯಸಮಾಜದ ಕಾರ್ಯಕರ್ತರೆಲ್ಲರನ್ನು ಕರೆದುಕೊಂಡು ಬಂದರು. ಅವರು ಬರುವಷ್ಟೊತ್ತಿಗೆ ರಾಮಚಂದ್ರರು ಕೇವಲ ಶ್ವಾಸವನ್ನು ಎಳೆದುಕೊಳ್ಳುತ್ತಾ ಬಿದ್ದುಬಿಟ್ಟಿದ್ದರು. ಇಂತಹ ಸ್ಥಿತಿಯಿಂದ ಇವರು ಹೇಗೆ ಬದುಕುಳಿದರು? ಇದು ಕೇವಲ ಭಗವಂತನ ಕೃಪೆ ಇದ್ದರೆ ಮಾತ್ರ ಸಾಧ್ಯವಾಗುತ್ತದೆ ಎಂದು ಮನದಲ್ಲಿ ನಿಶ್ಚಯಿಸಿಕೊಂಡರು.

ಆಗ ಹಳ್ಳಿಯಲ್ಲಿ ಸಿಗುವ ಎತ್ತಿನ ಬಂಡಿಯಲ್ಲಿ ರಾಮಚಂದ್ರರನ್ನು ಹಾಕಿಕೊಂಡು ದವಾಖಾನಗೆ ತಂದರು. ಅಲ್ಲಿ ವೈದ್ಯರು ಇರದೇ ಇದ್ದ ಕಾರಣ ಕಂಪೌಂಡರನು ಹೊಟ್ಟಯಿಂದ ಹೊರಬಿದ್ದ ಕರುಳನ್ನೆಲ್ಲಾ ಹೊಟ್ಟೆಯಲ್ಲಿ ಹಾಕಿ ಬಿಗಿದು ಪಟ್ಟಿ ಕಟ್ಟಿದನು. ತನ್ನ ಕೈಯಿಂದ ಆದಷ್ಟು ಪ್ರಥಮ ಚಿಕಿತ್ಸೆ ನೀಡಿ "ಇಲ್ಲಿಗೆ ವೈದ್ಯರು ಬುರುವುದು ತಡವಾಗುತ್ತದೆ ಬೇಗನೆ ದೊಡ್ಡ ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಸೂಕ್ತವೆಂದು ಹೇಳಿದನು."[೧] ಮುಂದೆ ಅಡತಿ ಮಾಲೀಕರ ವಾಹನದ ಸಹಾಯದಿಂದ ೬೫ ಕಿ.ಮಿ ದೂರವಿರುವ ಗುಲಬರ್ಗಾಕ್ಕೆ ಇವರನ್ನು ತೆಗೆದುಕೊಂಡು ಹೋದರು. ನಂತರ ಅಲ್ಲಿಯ ಸರಕಾರಿ ಆಸ್ಪತ್ರೆಯಲ್ಲಿ ರಾಮಚಂದ್ರರನ್ನು ಸೇರಿಸಲಾಯಿತು. ಇವರ ಈ ಚಿಂತಾಜನಕ ಸ್ಥಿತಿಯನ್ನು ಕಂಡು ಡಾ॥ ಫಜಲ್ ಅಹ್ಮದ್ ಸರ್ಜನರು ಬೆರಗಾದರು. "ನಾನು ಇವರ ಬಗ್ಗೆ ಭರವಸೆ ಕೊಡುವುದಿಲ್ಲ. ನನ್ನ ಪ್ರಾಮಾಣಿಕ ಪ್ರಯತ್ನ ನಾನು ಮಾಡಿಯೇ ಮಾಡುತ್ತೇನೆ ಇವರ ಅದೃಷ್ಟ ಹೇಗಿದೆಯೋ ಹಾಗೆಯೇ ಆಗಲಿ"[೨] ಎಂದು ಆಸ್ಪತ್ರೆಗೆ ಸೇರಿಸಿಕೊಂಡರು, ಅಂದೆ ಶಸ್ತ್ರ ಚಿಕಿತ್ಸೆ ಮಾಡಿದರು. ರಾಮಚಂದ್ರರು ಕೆಲವು ದಿನಗಳ ವರೆಗೆ ಆಸ್ಪತ್ರೆಯಲ್ಲಿದ್ದು ಪುನಹ ಮರಳಿ ಮನೆಗೆ ಬಂದು ಆರೈಕೆ ಮಾಡಿಕೊಂಡರು. ಎಲ್ಲಾ ಆರ್ಯ ಸಮಾಜದ ಕಾರ್ಯಕರ್ತರು ಭೇಟಿಯಾಗಿ ಅವರನ್ನು ಹರಿಸಿದರು. ಪುನರಜನ್ಮವಾಯಿತೆಂದು ಬಣ್ಣಿಸಿದರು. ಇವರ ಹತ್ತಿರ ಇನ್ನೂ ಸಾವು ಸುಳಿಯುವುದಿಲ್ಲ "ನೂರುವರ್ಷ ವೀರನಾಗಿ ಬಾಳುವನು ಈ ವೀರಪ್ಪ ಮಗನು" ಎಂದು ಕೆಲವರು ಶುಭ ನುಡಿದರು.

- **ಮಾಣಿಕನಗರದ ಜಾತ್ರಾ ಉತ್ಸವ :-**

ಜಾತ್ರೆಗಳು, ಉತ್ಸವಗಳು, ನಮ್ಮ ಸಂಸ್ಕೃತಿಯ ಪ್ರತೀಕಗಳಾಗಿವೆ. ಇಡೀ ವರ್ಷ ದುಡಿದ ಜನರಿಗೆ ಇವು ಮನರಂಜನಗಳನ್ನು ಒದಗಿಸುತ್ತವೆ. ಹೊಸ ಬಟ್ಟೆ ಧರಿಸಿ, ಸಿಹಿ ತಿಂಡಿಗಳನ್ನು ತಿನ್ನುತ್ತಾ ಬೇಕಾದ ಸಾಮಾನುಗಳನ್ನು ಖರೀದಿಸುತ್ತಾ

ಜನರನ್ನು ಭೇಟಿ ಮಾಡುತ್ತಾ ಸಂತೋಷದಿಂದ ಕಾಲ ಕಳೆಯುತ್ತಾರೆ. ಊರಿನ ಜನರ ತ್ಯಾಗದ ದುಡಿಮೆ ಮತ್ತು ಸಹಕಾರದಿಂದ ಜಾತ್ರಾ ಮಹೋತ್ಸವದಂಥ ಕಾರ್ಯಗಳು ನೆರವೇರುತ್ತವೆ. ದೂರದೂರದ ಉದ್ಯೋಗವನ್ನರಿಸಿ ಹೋದ ಜನರು ಕೂಡ ಅಭಿಮಾನದಿಂದ ಈ ಜಾತ್ರೆಗೆ ಬಂದು ಹೋಗುತ್ತಾರೆ. ಒಟ್ಟಿನಲ್ಲಿ ಮಾಣಿಕಪ್ರಭು ಸಂಸ್ಥಾನದಲ್ಲಿ ಜರುಗುವ ಜಾತ್ರಾ ಮಹೋತ್ಸವದಲ್ಲಿ ಆರ್ಯ ಸಮಾಜದ ಮುಖಂಡರು ತಮ್ಮ ಧರ್ಮದ ಪ್ರಚಾರ ಕಾರ್ಯ ಮಾಡುತ್ತಿದ್ದರು. ಜೀವದ ಹಂಗು ತೊರೆದು ಧರ್ಮಕ್ಕಾಗಿ ಹೋರಾಡುತ್ತಿದ್ದರು. ಆ ಒಂದು ಸಂದರ್ಬದಲ್ಲಿ ರಾಮಲಾಲ್, ಶ್ರೀ ಬನ್ಸಿಲಾಲ್, ಪಂಡಿತ ಶಿವಚಂದ್ರಜೀ, ಧರ್ಮಪ್ರಕಾಶ ಮುಂತಾದವರು ಆಗಮಿಸಿದರು. ಅತ್ಯಂತ ಯಶಸ್ವಿ ರೂಪದಲ್ಲಿ ಕಾರ್ಯಗಳು ನೆರವೇರುತ್ತಿದ್ದುದನ್ನು ಕಂಡು ಅನೇಕ ಮುಸ್ಲಿಂ ಗುಂಡಾಗಳು ಈ ಎಲ್ಲಾ ಮುಖಂಡರನ್ನು ಕೊಲೆಗೈಯಲು ಪ್ರಯತ್ನಿಸತೊಡಗಿದರು. ಈ ಸುದ್ದಿ ಸಿಂಹದಂತೆ ಗರ್ಜಿಸುವ ಲಕ್ಷ್ಮಣರಾಮರಿಗೆ ಗೊತ್ತಾಯಿತು. ಕೂಡಲೆ ಅವರು ತಮ್ಮ ಹೆಗಲಿಗೆ ಬಂದೂಕುಗಳನ್ನು ಹಾಕಿಕೊಂಡು ಪಕ್ಕದ ಹಳ್ಳಿ ಮಾಣಿಕನಗರಕ್ಕೆ ಧಾವಿಸಿ ಬಂದರು. ತಮ್ಮ ಮುಖಂಡರ ಅಂಗರಕ್ಷಕರಾಗಿ ಇಬ್ಬರು ಬಂದುಕುಗಳನ್ನು ಹಿಡಿದುಕೊಂಡು ನಿಂತಿದ್ದರು. ಇಂತಹ ಸಂದರ್ಭದಲ್ಲಿಯೂ ಮುಸ್ಲಿಂ ಗುಂಡಾಗಳು ಮೇಲೇರಿ ಬಂದು ಹೊಡೆಯಬೇಕೆನ್ನುವಷ್ಟರಲ್ಲಿ ಲಕ್ಷ್ಮಣರಾಮರು ಬಂದೂಕಿನಿಂದ ಸಾಕಷ್ಟು ಗುಂಡುಗಳನ್ನು ಹಾರಿಸಿದರು. ಜನರು ಪ್ರಾಣ ಭಯದಿಂದ ದಿಕ್ಕೆಟ್ಟು ಓಡತೊಡಗಿದರು. ಮುಸ್ಲಿಮರು ತಮ್ಮ ಕಾರ್ಯ ಕೈಗೂಡಲಿಲ್ಲವೆಂದು ಅಸಮಾಧಾನದಿಂದ ತೆರಳಿದರು. ಎಷ್ಟೋ ಮುಗ್ಧ ಜನರಿಗೆ ಗಾಯಗಳಾದವು. ಭಾಯಿ ಶಾಮಲಾಲರ ಕಾಲಿಗೆ ಬಲವಾದ ಪೆಟ್ಟು ಬಿದ್ದು, ಅವರು ನೆಲಕ್ಕುರುಳಿದರು. ಅವರನ್ನು ಚಿಕಿತ್ಸೆಗೊಳಪಡಿಸಿ ಸುರಕ್ಷಿತವಾಗಿ ಬೀದರಕ್ಕೆ ತಲುಪುವಂತೆ ಸಹೋದರರು ಏರ್ಪಾಡು ಮಾಡಿದರು.

ಹೀಗೆ ಸಕಾಲಕ್ಕೆ ಆಗಮಿಸಿ ರಾಮಚಂದ್ರರು ಮುಂದೆ ಆಗುವ ಅನಾಹುತವನ್ನು ತಪ್ಪಿಸಿದರು. ಹೀಗೆ ಹಲವಾರು ದೇಶ ಭಕ್ತರು, ಬಡವರ, ಮುಗ್ದರ, ಸ್ತ್ರೀಯರ, ಮಕ್ಕಳ ಜೀವ ಉಳಿಸಲು ಹವಣಿಸಿದ ಮಹಾ ಶೂರರು ರಾಮಚಂದ್ರರು. ಇಂಥವರಿಗೆ ಯಾವ ಪ್ರಶಸ್ತಿ ಫಲಕ, ಗೌರವ, ಬಿರುದುಗಳನ್ನು ಕೊಟ್ಟರು ಕಡಿಮೆ.

- **ಹುಮನಾಬಾದ ಹೋಳಿ ಹಬ್ಬದ ಘಟನೆ : –**

ಇತಿಹಾಸದಲ್ಲಿ ಸಾಕಷ್ಟು ಘಟನೆ ನಡೆದರು ಕೆಲವೊಮ್ಮೆ ಅಪರೂಪದ ಘಟನೆಗಳು ಮಾತ್ರ ನಮ್ಮ ನೆನಪಿನಲ್ಲಿ ಹಸಿರಾಗಿರುತ್ತವೆ. ಸಾವಿರಾರು ಸಿಪಾಯಿಗಳನ್ನು ಕಳೆದುಕೊಂಡ ಸಿಪಾಯಿ ದಂಗೆ, ಜಲಿಯಾನ್‌ವಾಲಾಬಾಗ ದುರಂತ, ಇತ್ತಿತ್ತಲಾಗಿ

ನಡೆದ ಕಾರ್ಗಿಲ ಯುದ್ಧ, ಗೋಧ್ರಾ ಹತ್ಯಾಕಾಂಡ ಮುಂತಾದವುಗಳು ದೇಶದಲ್ಲಿ ನಡೆಯುತ್ತಲೆ ಬಂದಿವೆ. ಅದರಂತೆ ಬೀದರ ಜಿಲ್ಲೆಯ ಹುಮನಾಬಾದನಲ್ಲಿ ನಡೆದ ಹೋಳಿ ಹಬ್ಬದ ಘಟನೆ ಈ ಭಾಗದ ಜನರ ತನುಮನದಲ್ಲಿ ಹಚ್ಚ ಹಸಿರಾಗಿದೆ. ಹೋಳಿ ಈ ಭಾಗದಲ್ಲಿ ಜರುಗುವ ಒಂದು ಪ್ರಮುಖ ಹಬ್ಬ. ಉಳಿದ ಹಬ್ಬಗಳಂತೆ ಈ ಹಬ್ಬ ಅತ್ಯಂತ ಶೃಂಗಾರದಿಂದ ಕೂಡಿದಲ್ಲ. ಆ ದಿನ ಗಂಡಸರೆಲ್ಲರು ಹಳೆಯ ಬಟ್ಟೆಗಳನ್ನು ಧರಿಸಿಕೊಂಡು ಒಂದು ಕೈಯಲ್ಲಿ ಬಣ್ಣದ ಡಬ್ಬಿಗಳನ್ನು ಹಿಡಿದುಕೊಂಡು ಮುಖಕ್ಕೆ ಮೈಗೆ ಬಣ್ಣವನ್ನು ಹಚ್ಚುತ್ತ ಅಶ್ಲೀಲ ಶಬ್ದಗಳಿಂದ ಬೈಯುತ್ತಾ ಓಣಿಗಳಲ್ಲಿ ಗುಂಪು ಕಟ್ಟಿ ಓಡಾಡುತ್ತಾರೆ. ಹೋಳಿ ಹಬ್ಬದ ಹೆಸರಿನಲ್ಲಿ ಮದ್ಯಪಾನ ಮಾಡಿ ಓಡಾಡುವುದು ಬೇಡವೆಂದು ತೀರ್ಮಾನಿಸಿ, ಹೊಸ ಶುಭಯಾತ್ರೆಗೆ ಹುಟ್ಟು ಹಾಕಲು ಎಲ್ಲ ಆರ್ಯ ಸಮಾಜದ ಮುಖಂಡರು ನಿರ್ಧರಿಸಿದರು. ಒಟ್ಟಿನಲ್ಲಿ ಹಬ್ಬದ ಹೆಸರಿನಲ್ಲಿ ನಡೆಯುವ ಅಶ್ಲೀಲ ಅಸಂಬದ್ಧ ವಿಷಯಗಳನ್ನು ತಡೆಗಟ್ಟುವುದೇ ಇದರ ಉದ್ದೇಶವಾಗಿತ್ತು.

೩ ನೇ ಮಾರ್ಚ ೧೯೪೭ ರಂದು ಎಲ್ಲಾ ಆರ್ಯ ಸಮಾಜದ ಬಂಧುಗಳು ವೆಂಕಟೇಶ್ವರ ಮಂದಿರದಲ್ಲಿ ಸಭೆ ಸೇರಿದರು. ಇದರ ಮುಖಂಡತ್ವವನ್ನು ಪಂಡೀತ ಶಿವಂದ್ರಜೀ ನೆಲ್ಲಗಿಯವರು ವಹಿಸಿದರು. ಈಗಿನ ಲಕ್ಷ್ಮಿ ವೆಂಕಟೇಶ್ವರ ವಿದ್ಯಾಮಂದಿರದ ಸ್ಥಳವೇ ಆರ್ಯಸಮಾಜದ ಕ್ಷೇತ್ರವಾಗಿತ್ತು. ಶಿವಂಚದ್ರಜೀ ಯವರು ಯುವಕರಿಗೆ ಶಸ್ತ್ರಾಸ್ತ್ರಗಳ ತರಬೇತಿ ನೀಡುತ್ತಿದ್ದರು. ಆರ್ಯ ಸಮಾಜದ ಕಾರ್ಯಕರ್ತರಲ್ಲಿ ಯಾವ ಬೇಧಭಾವವಿರಲಿಲ್ಲ. ಅಲ್ಲಿ ಎಲ್ಲರಿಗೂ ಮುಕ್ತಅವಕಾಶವಿತ್ತು. ಹಿರಿಯ ಕಾರ್ಯಕರ್ತರಾದ ಶಿವಚಂದ್ರಜೀ ಯವರು, ಶ್ರೀ ಶಿವಪ್ರಸಾದ, ಪುಂಡಲೀಕರಾವ, ಹನುಮಂತರಾವ, ವಿಠ್ಠಲರಾವ ಹಾಗೂ ಲಕ್ಷ್ಮಣರಾವ ಮತ್ತು ರಾಮಚಂದ್ರರರಿಗೆ ವ್ಯಾಯಾಮ, ಹೋಮ, ಹವನ, ಮಂತ್ರ ಜಪಾತಪಾ, ಆಸನ ಮುಂತಾದ ವಿದ್ಯೆಗಳನ್ನು ಕಲಿಸುತ್ತಾ ಅವರ ಮನಸ್ಸು ದುಷ್ಟಟಗಳಿಗೆ ಬಲಿಯಾಗದಂತೆ ತಮ್ಮ ಕಡೆಗೆ ಆಕರ್ಷಿಸಿಕೊಳ್ಳುತ್ತಿದ್ದರು.

ಶಿವಚಂದ್ರಜೀಯವರು ೧೯೪೭ ರಲ್ಲಿ ನಡೆದ ಹೋಳಿ ಹಬ್ಬದ ನೇತೃತ್ವವಹಿಸಿ ಹುಮನಾಬಾದ ಊರು ತುಂಬೆಲ್ಲಾ ಇವರ ಮೆರವಣಿಗೆ ಮಾಡಿದರು. ಇದರಿಂದ ಕುಪಿತರಾದ ರಜಾಕಾರರು ಅಗಡಿ ಗಲ್ಲಿಯಿಂದ ಮೆರವಣಿಗೆ ಬರಬೇಕು ಎಂದು ಆಗ್ರಹಿಸಿದರು. ರಜಾಕಾರರು ಪೊಲೀಸ ಅಧಿಕಾರಿಯಾಗಿದ್ದ ನಿಜಾಮುದ್ದಿನ್ ನೊಡನೆ ಒಳಗೊಳಗೆ ಪಿತುರಿನಡೆಸಿದರು. ತಮ್ಮ ಗಲ್ಲಿಗೆ ಮೆರವಣಿಗೆ ಬಂದಾಗ ಮಾರಕ ಅಸ್ತ್ರಗಳಿಂದ ದಾಳಿ ಮಾಡಿದರು. ಅನೇಕ ಕಾರ್ಯಕರ್ತರು ದಿಕ್ಕೆಟ್ಟು ಓಡಿದರು. ಹಿಂದುಗಳಿಗಿಂತ ರಜಾಕಾರರ ಸಂಖ್ಯೆ ಹೆಚ್ಚಾಯಿತು. ಕೆಲವು ಹಿಂದುಗಳು ಆರ್ಯಸಮಾಜದ ಮುಖಂಡರನ್ನು ಸ್ಥಳದಿಂದ ಪಾರುಮಾಡಲು ಪ್ರಿತ್ನಿಸಿದರು. ಆಕಡೆ

ಈಕಡೆ ಜನರು ಸಾಲಾಗಿ ನಿಂತು ಅವರು ಮಧ್ಯದಿಂದ ಹೋಗಲು ದಾರಿ ಮಾಡಿಕೊಟ್ಟರು. ಆಗ ಶಿವಚಂದರಜೀಯವರಿಗೆ ಬೊಪ್ಪಣ್ಣನವರ ಓಣಿಯಿಂದ ಹೋಗುವಂತೆ ಸೂಚಿಸಲಾಯಿತು. ಅವರು ಆ ಮಾರ್ಗದಿಂದ ಮುಂದಕ್ಕೆ ಹೋಗಿ ಒಂದು ತಲೆಬಾಗಿಲಿನಿಂದ ಹೋದಾಗ ಇಂದಿನಿಂದ ರಜಾಕಾರರ ದಂಡು ಓಡಿಬಂತು. ಅಲ್ಲಿ ಕೇವಲ ೭-೮ ಜನ ಆರ್ಯಸಮಾಜದವರಿದ್ದರು. ಎರಡು ಗುಂಪುಗಳ ಮಧ್ಯ ಚಕಮಕಿ ಆರಂಭವಾಯಿತು. ಅದರಲ್ಲಿ ಪರೀಟನು ತಮ್ಮ ಬಂದೂಕಿನಲ್ಲಿ ಗೋಲಿ ಇರುವವರೆಗೂ ರಜಾಕಾರರನ್ನು ಹಿಮ್ಮೆಟಿಸಿದನು. ಒಗ್ಗಟ್ಟಿನಿಂದ ಎಲ್ಲಾ ರಜಾಕಾರರು ಶಿವಚಂದ್ರಜಿಯವರನ್ನು ಹುಡುಕುತ್ತಾ, ಖಡ್ಗ, ಭರ್ಚಿ ಹಿಡಿದು ಪ್ರಹಾರ ಮಾಡುತ್ತಾ ನಡೆದರು. ಆ ಒಂದು ಸಂಧರ್ಭದಲ್ಲಿ ಪ್ರಹಾರಕ್ಕೆ ತುತ್ತಾದವರಲ್ಲಿ ಶಿವಚಂದ್ರಜಿ ಒಬ್ಬರು. ಅವರು ಆ ಏಟಿನ ಯಾತನೆಯನ್ನು ತಾಳದೆ ಪ್ರಾಣ ಬಿಟ್ಟರು. ಈ ಸುದ್ದಿ ತಿಳಿದು ರಾವಜಿರಾವ ಇಂಗಳೆ, ಲಕ್ಷ್ಮಣರಾವ, ನರಸಿಂಗಹರಾವ ಮುಂತಾದ ಆತ್ಮೀಯರು ಆಗಮಿಸಿದರು. ಅವರನ್ನು ಸಹ ಎಲ್ಲರ ಸಮ್ಮುಖದಲ್ಲಿ ರಜಾಕಾರರು ಕೊಂಡದರು. ಹೀಗೆ ಒಂದು ದಿವಸ ಹಾಡು ಹಗಲೇ ನಾಲ್ಕು ಕೊಲೆಗಳನ್ನು ಮಾಡಿ ಆರ್ಯ ಸಮಾಜದವರಿ ಆಕ್ರೋಷ ಹುಟ್ಟುವಂತೆ ಮಾಡಿದರು. ಆರ್ಯಸಮಾಜದ ವೀರ ತರುಣರು ವೀರಗರ್ಜನೆ ಮಾಡುತ್ತಾ "ಬನ್ನಿರೋ ನಾವು ತಮ್ಮ ನಾಯಕರಂತೆ ಸಾಯಲು ಸಿದ್ಧರಾಗಿದ್ದೇವೆ ಬೆನ್ನ ಹಿಂದೆ ಚೂರಿ ಹಾಕುವುದನ್ನು ಬಿಟ್ಟುಬಿಡಿ. ನೀವು ನಿಮ್ಮ ತಾಯಿ ಎದೆ ಹಾಲು ಕುಡಿದಿದ್ದರೆ ಎದುರಿಸಿ ವೀರ ಸ್ವರ್ಗ ಪಡೆಯಿರಿ"[೩] ಎಂದು ಕೂಗಾಡಿದರು.

ಈ ರೀತಿ ನಾಲ್ಕು ಜನರ ದಾರುಣ ಹತ್ಯೆ ಹೃದಯ ವಿದ್ರಾವಕ ದೃಶ್ಯವಾಗಿತ್ತು. ಹುಮನಾಬಾದನ ಈ ಹೋಳಿ ಹಬ್ಬದ ಘಟನೆ ಅಲ್ಲಿಯ ಜನರಿಗೆ ಕರಾಳ ದಿನವಾಯಿತು. ಈ ಘಟನೆ ಜರುಗಿದ ಮೇಲೆ ಅಲ್ಲಿರುವ ಎಲ್ಲಾ ಮುಸ್ಲಮಾನರು ಪರಾರಿಯಾದರು. ಲಕ್ಷ್ಮಣ ರಾಮಚಂದ್ರರು ಮೃತ ದೇಹಗಳ ಹತ್ತಿರ ಬಂದು ಒಂದೇ ಸಮನೆ ದುಃಖಿಸತೊಡಗಿದರು. ಸ್ವಗ್ರಾಮದವರಾದ ಶಿವಚಂದ್ರಜೀಯವರು ತಮಗೆ ಮಾರ್ಗದರ್ಶಕರಾಗಿ ಹಿರಿಯರಾಗಿ ಪ್ರತಿಯೊಂದು ಕಾರ್ಯದಲ್ಲಿ ಸಲಹೆ ಸೂಚನೆಗಳನ್ನು ನೀಡುತ್ತಾ ಗುರುವಿನ ಪೂಜ್ಯ ಸ್ಥಾನವನ್ನು ಪಡೆದುಕೊಂಡಿದ್ದರು. ಇಂಥವರನ್ನು ಕಳೆದುಕೊಂಡು ರಾಮಚಂದ್ರರು "ನಾನು ಇಂದು ಅನಾಥನಾದೆ" ಎಂದು ಗೋಳಾಡಿದರು.

ಭಕ್ತಿಯಿಂದ ಹೆಗಲಮೇಲೆ ಶವಗಳನ್ನು ಹೊತ್ತುಕೊಂಡು ಆರ್ಯಸಮಾಜದ ಭವನಕ್ಕೆ ತಂದರು. ಆರ್ಯಸಮಾಜದ ಪದ್ಧತಿಯಂತೆ ಪಾರ್ಥಿವ ಶರೀರಗಳನ್ನು ಮಂತ್ರಗಳೊಂದಿಗೆ ಅಗ್ನಿ ಸ್ಪರ್ಶ ಮಾಡಲಾಯಿತು. ಆರ್ಯ ಸಮಾಜದ ಪ್ರತಿಯೊಬ್ಬ ವೀರನು ನಿಜಾಮ ಸರ್ಕಾರದ ವಿರುದ್ಧ ಕಿಡಿ ಕಾರತೊಡಗಿದ. ಕಣ್ಣೆದುರಿಗೆ ಈ

ದಾರುಣ ಹತ್ಯೆ ನಡೆದದ್ದು ನೋಡಿ ಅವರ ಮನಸ್ಸು ಕದಡಿತು. ಇಂತಹ ಗಂಭೀರ ಪರಿಸ್ಥಿತಿಯಲ್ಲಿ ತಾನೇನು ಮಾಡಬೇಕು ಎಂಬುದು ರಾಮಚಂದ್ರರಿಗೆ ತಿಳಿಯಲಿಲ್ಲ. ಅನುಭವಿ ಆರ್ಯರನ್ನು ಕಳೆದುಕೊಂಡು ಅವರ ಮನಸ್ಸು ದುಃಖಃತಪ್ತವಾಯಿತು.

- **ಭಾಯಿ ಶಾಮಲಾಲರ ಬಲಿದಾನ :**

ಹೈದ್ರಾಬಾದ ರಾಜ್ಯದಲ್ಲಿ ಭಾಯಿ ಶಾಮಲಾಲರ ಹೆಸರು ಬಹಳ ಪ್ರಸಿದ್ಧವಾಗಿತ್ತು. ಆ ಸಮಯದಲ್ಲಿ ಅವರು ಆಗಿನ ದೇಶ ಭಕ್ತರಲ್ಲಿ ಎಲ್ಲಕ್ಕಿಂತ ದೊಡ್ಡ ಮುಂದಾಳುಗಳಾಗಿದ್ದರು. ಶ್ರೀ ರಾಮಚಂದ್ರಜೀಯವರಿಗೆ ಅವರ ಸಂಗಡ ಇರುವ ಸೌಭಾಗ್ಯ ಪ್ರಾಪ್ತವಾಗಿತ್ತು. ಭಾಯಿ ಶಾಮಲಾಲರು ಆ ಕಾಲದಲ್ಲಿ ನಿಜಾಮ ಹೈಕೋರ್ಟಿನಲ್ಲಿ ವಕಾಲತ್ತು ಮಾಡುತ್ತಿದ್ದರು. ಅವರ ಒಂದೊಂದು ವಾಕ್ಯವು ನ್ಯಾಯಾಧೀಶರಿಗೆ ಪ್ರೇರಣಾದಾಯಕವಾಗಿರುತ್ತಿತ್ತು. ಭಾಯಿ ಶಾಮಲಾಲರು ಹಿಮಾಲಯ ಪರ್ವತದಲ್ಲಿ ಅನೇಕ ವರ್ಷ ತಪಸ್ಸು ಮಾಡಿದವರಾಗಿದ್ದರು. ಭಾರತದ ಸುಪ್ರಸಿದ್ಧ ದೇಶಭಕ್ತರು ಮತ್ತು ರಾಷ್ಟ್ರೀಯ ಮುಖಂಡರುಗಳೊಡನೆ ಅವರ ಒಡನಾಟವಿತ್ತು. ಭಾಯಿ ಶಾಮಲಾಲರನ್ನು ಯಾವುದೇ ಕಾರಣವಿಲ್ಲದೇ ಬೀದರ ಜೈಲಿನಲ್ಲಿ ಬಂಧಿಸಿಡಲಾಗಿತ್ತು. ಅವರನ್ನು ಹೇಗಾದರು ಮಾಡಿ ಮುಗಿಸಿ ಬಿಡಬೇಕೆಂಬ ಯೋಜನೆಯನ್ನು ಸ್ವಯಂ ನಿಜಾಮ ರಾಜ್ಯ ಅರಸನಾದ ಮೀರ್-ಉಸ್ಮಾನ್ ಅಲಿ ಖಾನನು ಮಾಡಿದ್ದನು. ಅವರಿಗೆ ಜೈಲಿನಲ್ಲಿ ಅಮಾನವಿಯ ಯಾತನೆ ಕೊಡುತ್ತಿದ್ದರಲ್ಲದೇ ರೊಟ್ಟಿಯಲ್ಲಿ ಸಿಮೆಂಟ್ ಮತ್ತು ಗಾಜು ಬೆರೆಸಿ ಕೊಡಲಾಗುತ್ತಿತ್ತು. ಈ ಪ್ರಕಾರವಾಗಿ ಅವರಿಗೆ ಯಾತನೆ ಕೊಡುವ ಕೆಲಸ ಬಹಳ ದಿನಗಳ ವರೆಗೆ ನಡೆಯಿತು. ಒಂದು ದಿನ ರಾತ್ರಿ ಸಮಯದಲ್ಲಿ ಅವರನ್ನು ವಿಷಕೊಟ್ಟು ಕೊಲ್ಲಲಾಯಿತು. ಈ ರೀತಿ ಅವರನ್ನು ರಾಷ್ಟ್ರದ ಬಲಿವೇದಿಕೆಯ ಮೇಲೆ ಬಲಿದಾನ ಮಾಡಿಲಾಯಿತು. ನಿಜಾಮ ಸರ್ಕಾರ ಅವರ ಶವವನ್ನು ಕೊಡಲು ನಿರಾಕರಿಸಿತು. ಆಗ ಆರ್ಯ ಮುಖಂಡರು ನಿಜಾಮ ಸರ್ಕಾರದ ಜಾಲಿ ಆಜ್ಞೆಯನ್ನು ತಯ್ಯಾರಿಸಿ ಜೈಲರನಿಗೆ ಕೊಟ್ಟು ರಾತ್ರಿ ಸಮಯದಲ್ಲಿ ಅವರ ಶವವನ್ನು ಜೈಲಿನಿಂದ ಸೋಲಾಪೂರಕ್ಕೆ ತೆಗೆದುಕೊಂಡು ಹೋಗಲಾಯಿತು. ಅಲ್ಲಿ ವೀರಸಾವರಕರ್, ಬ್ಯಾರಿಷ್ಟರ ಅಣೆ ಮುಂತಾದ ಮಹಾನ ನೇತಾರರ ಸಮ್ಮುಖದಲ್ಲಿ ಆರ್ಯ ಸಮಾಜದ ಮಹಾನ ಸಭೆ ನಡೆಯುತ್ತಿತ್ತು. ಸಾವಿರಾರು ಜನರು ಕೂಡಿಕೊಂಡು ಶಾಮಲಾಲರ ಅಂತಿಮ ಶೋಕ ಯಾತ್ರೆಯನ್ನು ತೆಗೆದರು. ಆ ಸಂದರ್ಭದಲ್ಲಿ ಅವರ ಪಾರ್ಥಿವ ಶರೀರಕ್ಕೆ ಸಾಕ್ಷಿಯಾಗಿ ಅನೇಕ ನವ ಯುವಕರು "ನಾವು ರಕ್ತದ ಕೊನೆಯ ಹನಿ ಇರುವವರೆಗೆ ಹೋರಾಡಿ ನಿಜಾಮ ರಾಜ್ಯವನ್ನು ಕೊನೆಗಾಣಿಸಿಯೇ ತೀರುತ್ತೇವೆ" ಎಂದು ಆವೇಶದಿಂದ ಪ್ರತಿಜ್ಞೆ ಮಾಡಿದರು.

▪ ಚಿಟಗುಪ್ಪದ ಘಟನೆ :

ಚಿಟಗುಪ್ಪ ನಗರವು ನಿಜಾಮ ಪಾಯಗಾ ತಾಲೂಕಾಗಳ ಜಿಲ್ಲಾ ಕೇಂದ್ರವಾಗಿತ್ತು. ನಿಜಾಮನ ನವಾಬನಾದ ಮೋಯಿನ್ ದೌಲನ ಜಾಗೀರವಾಗಿತ್ತು. ಕಾರಣ ಇದಕ್ಕೆ ಚಿಟಪ್ಪ ಉರ್ಫ್ "ಮೋಯಿನಾಬಾದ" ಎಂದು ಕರೆಯಲಾಗುತ್ತಿತ್ತು. ಚಿಟಗುಪ್ಪ ಗ್ರಾಮವು ಸ್ವಾತಂತ್ರ ಹೋರಾಟಗಾರರ ಪ್ರಮುಖ ಕ್ಷೇತ್ರವಾಗಿತ್ತು. ಜೀವದ ಹಂಗು ತೊರೆದು ಹೋರಾಡಿದ ಹೋರಾಟಗಾರರ ವೀರ ಕಥೆಗಳನ್ನು ಜನರು ಇಂದಿಗೂ ಸ್ಮರಿಸುತ್ತಾರೆ. ೧೯೩೮ ರಲ್ಲಿ ಚಿಟಗುಪ್ಪದ ಭವಾನಿ ಭಕ್ತರು ಭವಾನಿಯ ಪಲ್ಲಕ್ಕಿ ಮೆರವಣಿಗೆಯನ್ನು ಹೊರಡಿಸಿದರು. ಪೊಲೀಸರು ಈ ಮೆರವಣಿಗೆಯಲ್ಲಿ ಯಾವುದೇ ಮಾರಕ ಅಸ್ತ್ರ ಹಿಡಿದುಕೊಂಡು ಹೋಗಬಾರದೆಂದು ಎಚ್ಚರಿಕೆ ನೀಡಿದರು. ಆರ್ಯ ಸಮಾಜದ ಮುಖಂಡರು ಅವರ ಮಾತನ್ನು ಲಕ್ಷಿಸದೇ ಅಸ್ತ್ರಗಳನ್ನು ತೆಗೆದುಕೊಂಡು ಹೊರಟರು. ತಹಸೀಲ ಕಛೇರಿಯ ಹತ್ತಿರವಿರುವ ಮಸೀದಿಯಲ್ಲಿ ಸುಮಾರು ೩೦೦ ರಿಂದ ೪೦೦ ಜನ ಮುಸ್ಲಿಮರು ಏಕಾಏಕಿ ಮೆರವಣಿಗೆ ಮೇಲೆ ಹಲ್ಲೆ ಮಾಡಿದರು. ಆರ್ಯ ಸಮಾಜದ ಮುಖಂಡರ ಮತ್ತು ಮುಸ್ಲಿಮರ ನಡುವಿನ ಘರ್ಷಣೆಯಲ್ಲಿ ೨೫ ಜನ ಗಾಯಗೊಂಡರು. ಮುನ್ನೆಚರಿಕೆಯಾಗಿ ಆರ್ಯಸಮಾಜದಲ್ಲಿ ಅನಾಹುತದ ಗಂಟೆ ಬಾರಿಸಿದರು. ನೆಹರು ಚೌಕಿನಲ್ಲಿ ಹಿಂದು ಮುಸ್ಲಿಮರ ಮುಖಾಮುಖಿ ಸಂಘರ್ಷ ನಡೆಯಿತು. ಇದರಲ್ಲಿ ಒಬ್ಬ ಮುಸ್ಲಿಮವ್ಯಕ್ತಿ ಹತ್ಯೆಗೊಳಗಾದನು. ಪೊಲೀಸರು ಸುಮಾರು ೨೦ ಜನರನ್ನು ಬಂಧಿಸಿದರು. ಶವ ಸಂಸ್ಕಾರ ಮಾಡಿ ಹಿಂದಿರುವಾಗ ಹಿಂದುಗಳ ಮೇಲೆ ಪುನಃ ರಜಾಕಾರರು ಹಲ್ಲೆ ಮಾಡಿದರು. ಆಗ ಮಹಾದೇವಪ್ಪಾ ಎಂಬ ಸ್ವಾತಂತ್ರ ಯೋಧ ಕೊಲೆಯಾದನು. ಆಗ ಪೊಲೀಸರು ಸುಮಾರು ೪೦ ಜನರನ್ನು ಬಂಧಿಸಿದರು. ಕೆಲವು ಜನರಿಗೆ ವಾರೆಂಟ ಜಾರಿ ಮಾಡಲಾಯಿತು. ಕೆಂಪು ಜನರು ರಜಾಕಾರರ ಕೈಗೆ ಸಿಗದೆ ವೇಷ ಬದಲಿಸಿಕೊಂಡು ಪರಾರಿಯಾದರು. ರಾಮಚಂದ್ರರು ಮಾತ್ರ ಮೆರವಣಿಗೆಯಲ್ಲಿ ಭಾಗವಹಿಸಿ ಮುಂದೆ ಆಗುವ ಅನಾಹುತವನ್ನು ತಪ್ಪಿಸಿದರು.

ಇಮ್ರೋಜ್ ಪತ್ರಿಕೆಯ ಸಂಪಾದಕನಾದ ಶೈಬುಲ್ಲಾ ಎಂಬುವವನು ಸ್ವಾತಂತ್ರ್ಯ ಹೋರಾಟಗಾರರ ಪಕ್ಷ ವಹಿಸಿದ ಸುದ್ದಿ ರಜಾಕಾರರ ಕಿವಿಗೆ ಬಿತ್ತು. ಇಂತಹ ದ್ರೋಹಿಯನ್ನು ಹೀಗೆ ಬಿಡಬಾರದೆಂದು ರಜಾಕಾರರು ಅವನನ್ನು ಕೊಂದು ಹಾಕಿದರು. ಆತನ ಹೆಸರಿನ "ಶೈಬುಲ್ಲಾ ಚೌಕ" ಇಂದಗೂ ನಾವು ಚಿಟಗುಪ್ಪದಲ್ಲಿ ಕಾಣುತ್ತೇವೆ.

- **ಬಾಂಬಕಾಂಡ :**

೧೯೪೭ ರಲ್ಲಿ ನಡೆದ ಹೋಳಿ ಹಬ್ಬದ ಘಟನೆ ಮತ್ತು ಭಾಯಿ ಶಾಮಲಾಲರ ಬಲಿದಾನದ ಪ್ರಸಂಗಗಳು ರಾಮಚಂದ್ರರ ಮನದಲ್ಲಿ ಸದಾ ಕೊರೆಯುತ್ತಿದ್ದವು. ಅದರ ಸೇಡನ್ನು ತೀರಿಸಿಕೊಳ್ಳಲು ಯಾವಾಗಲು ಹೊಂಚು ಹಾಕುತ್ತಿದ್ದರು. ಹುಮನಾಬಾದನ ಬಲಿದಾನದ ಪ್ರಸಂಗ ಅವರನ್ನು ಮತ್ತು ಅವರ ಸಂಗಡಿಗರನ್ನು ಬಹಳ ದುಃಖಿತರನ್ನಾಗಿ ಮಾಡಿತು. "ನಮ್ಮ ಮಾರ್ಗದರ್ಶಕರ ಹತ್ಯೆಯು ನಮ್ಮ ಕಣ್ಣೆದುರೆ ಆಯಿತು. ನಾವು ಅಸಹಾಯಕರಾಗಿ ನೋಡುತ್ತಾ ನಿಂತೆವು"[೫] ಎಂಬ ಕೊರಗು ಸದಾ ಅವರನ್ನು ಕಾಡುತ್ತಿತ್ತು. ಅನೇಕ ಆರ್ಯ ಮುಖಂಡರು ಕೂಡಿಕೊಂಡು ನಮ್ಮ ಮುಖಂಡರನ್ನು ಹತ್ಯಗೈದ ದುಷ್ಟ ಮುಸಲ್ಮಾನರನ್ನು ಹೇಗಾದರು ಮಾಡಿ ಕೊಂದುಹಾಕಬೇಕು ಎಂಬ ಯೋಜನೆಯನ್ನು ಹಾಕಿಕೊಂಡರು. ಈ ಯೋಜನೆಯನ್ನು ಕಾರ್ಯರೂಪದಲ್ಲಿ ತರುವುದಕ್ಕಾಗಿ ಶ್ರೀ ದತ್ತುರಾವ ಸೂರ್ಯವಂಶಿ, ಮಾಣಿಕರಾವ ಭಂಡಾರಿ, ಪುಂಡಲಿಕ ಆರ್ಯ, ಶಿವಲಿಂಗಪ್ಪಾ, ಲಕ್ಷ್ಮಣ ಆರ್ಯ ಮತ್ತು ಶ್ರೀ ರಾಮಚಂದ್ರ ಆರ್ಯ ಪ್ರಮುಖರು ಕೂಡಿಕೊಂಡು ರಾತ್ರಿಯ ಹನ್ನೆರಡು ಗಂಟೆಯ ವರೆಗೆ ಬಾಂಬ ತಯಾರಿಸುತ್ತಿದ್ದರು. ಹೀಗೆ ಬಾಂಬ ತಯಾರಿಸಿದ ನಂತರ ಅದನ್ನು ಮೊಹರಂ ಸಮಯದ ಮೆರವಣಿಗೆಯಲ್ಲಿ ಹಾಕುವುದಕ್ಕಾಗಿ ಹೊಂಚು ಹಾಕುತ್ತಿದ್ದರು. ಅದಕ್ಕಾಗಿ ಬಾಂಬ ತಯ್ಯಾರಿಸಿದ ನಂತರ ಪೊಲೀಸರಿಗೆ ಗುರುತಾಗದಂತೆ ಗುಪ್ತ ರೂಪದಿಂದ ಅದನ್ನು ಮೆರವಣಿಗೆ ಹೊರಡುವ ರಸ್ತೆಯಲ್ಲಿ ರಾತ್ರಿ ಎರಡು ಗಂಟೆಗೆ ಒಂದು ಸ್ಥಳದಲ್ಲಿ ನೆಲದಲ್ಲಿ ಬಾಂಬನ್ನು ಹೂಳಿ ಇಡಲಾಯಿತು. ಅದನ್ನು ತೆಳ್ಳನೆಯ ತಂತಿಗಳಿಂದ ಕನೆಕ್ಷನ್ ಕೊಡಲಾಯಿತು. ಬಾಂಬ ಇಟ್ಟಿದ ಸ್ಥಳದಿಂದ ಒಂದು ಫರ್ಲಾಂಗ ದೂರದಲ್ಲಿರುವ ಶ್ರೀ ವೆಂಕಟೇಶ್ವರ ಮಂದಿರದಲ್ಲಿ ಆ ತಂತಿಯ ಕೊನೆ ಬರುವಂತೆ ವ್ಯವಸ್ಥೆ ಮಾಡಲಾಯಿತು. ಮೊಹರಂ ಮೆರಣಿಗೆಯಲ್ಲಿ ಇಡೀ ಬೀದರ ಜಿಲ್ಲೆಯ ರಜಾಕಾರರು ಭಾಗವಹಿಸುತ್ತಿದ್ದರು. ಮರುದಿನ ಮದ್ಯಾಹ್ನ ಪೀರಗಳ ಮೆರವಣಿಗೆ ಹೊರಡುವದಿತ್ತು. ಆ ಸಮಯದಲ್ಲಿ ಆ ಬಾಂಬನ್ನು ಹಾರಿಸುವ ಯೋಜನೆ ಮಾಡಲಾಗಿತ್ತು. ಆದರೆ ಕಾಲದ ಲೀಲೆ ವಿಚಿತ್ರವೇ ಆಗಿತ್ತು. ಯಾವ ತಂತಿಯನ್ನು ಬಾಂಬಿನೊಂದಿಗೆ ಜೋಡಿಸಲಾಗಿತ್ತೋ ಆ ತಂತಿಯು ಒಂದು ಸ್ಥಳದಲ್ಲಿ ಸ್ವಲ್ಪ ಮೇಲೆದ್ದಿತ್ತು. ಸಣ್ಣ ಹುಡುಗರು ಪತಂಗ ಹಾರಿಸುತ್ತಿದ್ದ ವೇಳೆಯಲ್ಲಿ ಒಬ್ಬ ಹುಡುಗನ ಕಾಲಿಗೆ ಆ ತಿಂತಿ ತಾಗಿತು. ಹೀಗಾಗಿ ಆ ತಂತಿ ಎಳೆಯಲ್ಪಟ್ಟಿದ್ದರಿಂದ ಕೂಡಲೆ ಒಂದು ಭಯಂಕರ ಸ್ಫೋಟವಾಯಿತು.

ಮಂದಿರದಲ್ಲಿ ಕುಳಿತಿದ್ದ ಆರ್ಯ ಮುಖಂಡರು ಏನು ಹೊಳೆಯದಂತಹ ಸ್ಥಿತಿಯಲ್ಲಿದ್ದರು. ಸಮಯಕ್ಕಿಂತ ಪೂರ್ವದಲ್ಲಿ ಬಾಂಬ ಹಾರಿದ್ದುದ್ದರಿಂದ ಅವರೆಲ್ಲರು

ಚಿಂತೆಗೊಳಗಾದರು. ಪೊಲೀಸರು ಅವರನ್ನು ಹುಡುಕಲು ಪ್ರಾರಂಭಿಸಿದರು. ಆಗ ರಾತ್ರಿ ಸಮಯದಲ್ಲಿ ರಾಮಚಂದ್ರರು ತಮ್ಮ ಸೈಕಲ್ ಮೇಲೆ ಪುಂಡಲಿಕರಾವ, ದತ್ತುರಾವ, ಶಿವಲಿಂಗಪ್ಪಾ ಮತ್ತು ಭಂಡಾರಿಯವರನ್ನು ಕೂಡಿಸಿಕೊಂಡು ರಾತ್ರಿ ಹನ್ನೆರಡು ಗಂಟೆಗೆ ಧನ್ನೂರಾ ರೈಲ್ವೆ ಸ್ಟೇಷನಗೆ ಬಂದು ತಲುಪಿದರು. ಅಲ್ಲಿ ರೈಲು ಮುಂಜಾನೆ ೫-೦೦ ಗಂಟೆಡಗೆ ಬರುವುದಿತ್ತು. ಅದರಲ್ಲಿ ಬಾಂಬ ಕಾಂಡದ ಎಲ್ಲಾ ಹೀರೋಗಳನ್ನು ಕೂಡಿಸಿ ಉದಗೀರ ತಲುಪುವ ವ್ಯವಸ್ಥೆ ಮಾಡಿದರು. ಈ ಕಡೆ ಹುಮನಾಬಾದನಲ್ಲಿ ಬಾಂಬ ಕಾಂಡದ ಹೀರೋಗಳನ್ನು ಪೊಲೀಸರು ಹುಡುಕಾಡುತ್ತಿದ್ದರು. ಈ ನಾಲ್ಕು ಜನರನ್ನು ಕಳುಹಿಸದ ಮೇಲೆ ರಾಮಚಂದ್ರರು ಅಲ್ಲಿ ಇಲ್ಲಿ ಅಡಗಿಕೊಳ್ಳುತ್ತಾ ಹುಮನಾಬಾದ ಕಡೆಗೆ ಹೊರಟರು. ಬೇನಚಿಂಚೋಳಿ ಗ್ರಾಮಕ್ಕೆ ಬಂದು ತಲುಪಿದ್ದಾಗ ಅಲ್ಲಿ ಇಬ್ಬರು ಮುಸ್ಲಿಂ ಯುವಕರಾದ ಮಸ್ತಾನಸಾಬಾ ನಂದನ ಮತ್ತು ನದೀಮಸಾಬಾ ನಂದನ ಎಂಬುವವರು ರಾಮಚಂದ್ರರನ್ನು ಭೇಟಿಯಾಗಿ, "ನಿಮ್ಮನ್ನು ಹಿಡಿಯುವುದಕ್ಕೆ ಪೊಲೀಸರು ಇಡೀ ಹುಮನಾಬಾದಿನ ಮನೆ ಮನೆಗಳನ್ನು ಶೋಧಿಸುತ್ತಿದ್ದಾರೆ. ಭಾಯಿರಾಮಚಂದ್ರಜೀ ಹುಮನಾಬಾದ ಈಗ ಬಹಳ ಉದ್ರಿಕ್ತವಾಗಿದೆ. ನೀವು ನಮ್ಮ ಹೊಲದಲ್ಲೆ ಅಡಗಿಕೊಂಡಿರಿ. ಹೊಲದಲ್ಲಿ ಜೋಳದ ಫಸಲು ಸಿದ್ಧವಾಗಿದೆ. ಸೀತನಿ ತಿನ್ನುತ್ತ ಇಲ್ಲೇ ಇದ್ದುಬಿಡಿ. ನಾವು ನಿಮ್ಮನ್ನು ಉಳಿಸಲು ಸಂಪೂರ್ಣ ಸಹಾಯ ಮಾಡುತ್ತೇವೆ."[೬] ಎಂದು ಹೇಳಿದರು. ರಾಮಚಂದ್ರರು ಆ ಯುವಕರ ಮಾತಿನಂತೆ ಎರಡು ದಿನ ಅವರ ಹೊಲದಲ್ಲೆ ಉಳಿದರು. ಒಳಗೊಳಗೆ ಅವರು ತಮ್ಮ ಮನಸ್ಸಿನಲ್ಲಿ, "ನಾನು ಹೀಗೆ ಹೊಲದಲ್ಲಿ ಉಳಿದುಕೊಂಡರೆ ಪೊಲೀಸರು ಅನೇಕ ನಿರಪರಾಧಿ ಜನರನ್ನು ತೊಂದರೆ ಕೊಡುವುದು, ಅವರನ್ನು ಬಂಧಿಸುವುದು, ವಿನಾಕಾರಣ ಯಾತನೆಗೆ ಗುರಿಪಡಿಸುವುದು ಮಾಡುತ್ತಾರೆ. ಆದ್ದರಿಂದ ನಾನು ಇಲ್ಲಿ ಅಡಗಿಕೊಂಡಿರುವುದಕ್ಕಿಂತ ಹುಮನಾಬಾದಗೆ ಹೋಗಿ ಬಂಧನಕ್ಕೆ ಒಳಗಾಗುವುದೇ ಲೇಸು"[೭] ಎಂದು ನಿರ್ಧರಿಸಿ, ಕೂಡಲೆ ಅಲ್ಲಿಂದ ಹುಮನಾಬಾದ ಹಾದಿ ಹಿಡಿದರು. ನಂತರ ರಾಮಚಂದ್ರರು ಹುಮನಾಬಾದಗೆ ಬಂದು ತಲುಪಿದ ಕೂಡಲೆ ತಮ್ಮ ಮನೆಯವರನ್ನು ಭೇಟಿ ಮಾಡಿ, ಮನೆಯವರಿಗೆಲ್ಲ ಹೇಳಬೇಕಾದುದ್ದನ್ನು ಹೇಳಿ ಪೊಲೀಸ ಕಚೇರಿಗೆ ಹೊರಟರು. ಪೊಲೀಸ ಮುಖ್ಯಸ್ಥರನ್ನು ಕಂಡು "ಮೊನ್ನೆ ಹುಮನಾಬಾದದಲ್ಲಿ ನಡೆದ ಬಾಂಬ ಸ್ಫೋಟಕ್ಕೆ ನಾನೇ ಕಾರಣಕರ್ತನಾಗಿರುವೆ ಅದಕ್ಕಾಗಿ ನೀವು ನನ್ನನ್ನು ಬಂಧಿಸಿ" ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಿದರು. ಪೊಲೀಸರೆಲ್ಲರು ಇವರ ಮಾತು ಕೇಳಿ ನಿಟ್ಟುಸಿರು ಬಿಡುತ್ತಾ ತಮ್ಮ ಕೆಲಸ ಇಲ್ಲಿಗೆ ಮುಗಿಯಿತೆಂದು ಸಮಾಧಾನ ಪಟ್ಟರು.

ಕೈದಿ ಸಿಕ್ಕಮೇಲೆ ಪೊಲೀಸರು ಸುಮ್ಮನಿರುವುದಕ್ಕೆ ಸಾಧ್ಯವೇ ? ಅವರು ರಾಮಚಂದ್ರರಿಗೆ ಪ್ರಶ್ನೆಗಳ ಸುರಿಮಳೆ ಹಾಕಿದರು. ಬಾಂಬ ಹತ್ಯಾಕಾಂಡಕ್ಕೆ ಕಾರಣರಾರು ? ಆ ಕಾಂಡದಲ್ಲಿ ಯಾರು ಯಾರು ಭಾಗವಹಿಸಿದ್ದಿರಿ ? ತಾವು ಯಾವ ಕಾರಣಕ್ಕಾಗಿ ಬಾಂಬ ಸ್ಫೋಟ ಮಡಬೇಕೆಂದು ನಿರ್ಧರಿಸಿದ್ದಿರಿ ? ಎಂದು ಮುಂತಾದ ಪ್ರಶ್ನೆಗಳನ್ನು ಕೇಳುತ್ತಾ ಕೈಯಿಂದ ಹೊಡೆಯತೊಡಗಿದರು. ಏಟಿನಿಂದ ದೇಹ ಜರ್ಜರಿತವಾಯಿತು ವಿಪರೀತ ನೋವನ್ನು ಅನುಭವಿಸುತ್ತಿದ್ದರು ರಾಮಚಂದ್ರರು ಬಾಯಿಂದ ಪಿಟ್ ಎನ್ನಲಿಲ್ಲ. ಇವರ ತಾಯ್ನಾಡಿನ ಅಭಿಮಾನ ಕಂಡು ಪೊಲೀಸರೆ ದಂಗಾದರು. ಅವರ ಹೊಲದಲ್ಲಿ ಇಷ್ಟೆಲ್ಲಾ ಬಾಂಬುಗಳು ಸಿಕ್ಕಿವೆ ಎಂದು ಹೇಳಿ ಪೊಲೀಸರು ರಾಮಚಂದ್ರರರನ್ನು ಹೈದ್ರಾಬಾದನ ಜೈಲಿಗೆ ಕಳುಹಿಸದರು. ಆಗ ಕೆಲವೊಮ್ಮೆ ಪೊಲೀಸರು "ನೋಡು ಆರ್ಯ ನೀನು ಬಹಳ ಸುದೈವಿ ಇಲ್ಲೇ ಸಮೀಪವಿರುವ ಹೈದ್ರಾಬಾದನ ಜೈಲಿನಲ್ಲಿ ನಿನ್ನನ್ನು ಇಟ್ಟಿರುವುದು ಇದು ನಿನಗೆ ಜೈಲಲ್ಲ, ಸಂರಕ್ಷಣೆಯ ಸ್ಥಳ ಒಂದು ವೇಳೆ ನೀನು ಜೈಲು ಬಿಟ್ಟು ಹೊರಗಡೆ ಇದ್ದರೆ ರಜಾಕಾರರು ನಿನಗೆ ಸುಮ್ಮನೆ ಬಿಡುತ್ತಿರಲಿಲ್ಲ. ಇಷ್ಟೊತ್ತಿಗಾಗಲೆ ಕೊಂದುಹಾಕಿ ನಿನ್ನ ಹೆಣವನ್ನು ನಾಯಿ ನರಿಗಳಿಗೆ ಹಾಕಿ ಬಿಡುತ್ತಿದ್ದರು"[೮] ಎಂದು ಕಠೋರವಾದ ಸತ್ಯವನ್ನು ಹೇಳುತ್ತಿದ್ದರು.

ಹೈದ್ರಾಬಾದ ಕೋರ್ಟ್‌ನಲ್ಲಿ ಕೇಸು ದಾಖಲಾಯಿತು. ಇವರ ಕಡೆಯಿಂದ ಕೇಸ ನಡೆಸಲು ಹೆಸರಾಂತ ವಕೀಲರಾದ ಮಾನ್ಯ ಬಿ. ಕೃಷ್ಣರಾವ ಅವರನ್ನು ನೇಮಿಸಿದರು. ಅವರು ೧೯೫೨ ರಲ್ಲಿ ಹೈದ್ರಾಬಾದನ ಪ್ರಥಮ ಮುಖ್ಯ ಮಂತ್ರಿಯಾದರು. ಅವರು ಹಗಲಿರುಳು ದುಡಿಯುತ್ತಾ ಕೇಸಿನ ಪೈರವಿ ಮಾಡತೊಡಗಿದರು. ತಮಗೆ ಸಹಾಯಕರಾಗಿ ವಿನಾಯಕರಾವ ವಿದ್ಯಾಲಂಕಾರ ಹಾಗೂ ಲಕ್ಷ್ಮಣ ಬಾಪೂಜಿಯವರನ್ನು ತೆಗೆದುಕೊಂಡರು. ಒಟ್ಟಿನಲ್ಲಿ ಎಲ್ಲರೂ ಕೂಡಿ ಕೇಸು ಮುಂದುವರೆಸಿದ್ದರಿಂದ ಅದು ಹೆಚ್ಚಿನ ಸಮಯ ತೆಗೆದುಕೊಳ್ಳದೆ ಬೇಗನೆ ಕೋರ್ಟ್‌ನಲ್ಲಿ ತೀರ್ಮಾನವಾಯಿತು.

- **ಚಂಚಗುಡಾ ಜೈಲ:**

"ಹೋದೆ ಪಿಶಾಚಿ ಎಂದರೆ ಬಂದೆ ಗವಾಕ್ಷಿ' ಎನ್ನುವಂತೆ ಕೇಸಿನಿಂದ ಬಿಡುಗಡೆ ಹೊಂದಿದ ಸಂತೋಷ ಒಂದು ಕಡೆಯಾದರೆ, ಇನ್ನೊಂದು ಸೆಷನ್ ಕೋರ್ಟಿನ ಪ್ರಕಾರ ಚಂಚಗುಡಾ ಜೈಲಿನಲ್ಲಿ ಘೋರ ಶಿಕ್ಷೆ ಉಂಟಾಯಿತು. ಮೊದಲು ರಾಮಚಂದ್ರರನ್ನು ಚಂಚಗುಡಾ ಜೈಲಿನಲ್ಲಿ ಜೈಲಿನಲ್ಲಿ ಇಡಲಾಯಿತು. ಈ ಜೈಲಿನಲ್ಲಿ ಇದ್ದಾಗ ಒಮ್ಮೆ ಇವರನ್ನು ಭೇಟಿಯಾಗಲು ಇವರ ಹೆಂಡತಿ ರತ್ನಮ್ಮಾ ಜೈಲಿಗೆ ಅಳುತ್ತಲೇ ಬಂದರು. ಜೈಲರನು ಎಷ್ಟು ತಿಳಿಸಿ ಹೇಳಿದರು ಅವಳ ದುಃಖ

ಶಮನವಾಗಲಿಲ್ಲ. ಗಂಡನಾದ ರಾಮಚಂದ್ರರನ್ನು ಭೇಟಿಯಾದಾಗ ಅವರು "ನೋಡು ಹೀಗೆ ಅಳುತ್ತಾ ಕುಳಿತರೆ ಎನು ಪ್ರಯೋಜನವಿಲ್ಲ. ನಮ್ಮ ಪಾಲಿಗೆ ಬಂದದ್ದು ನಾವು ಅನುಭವಿಸಲೇ ಬೇಕು. ನಮ್ಮ ಕರ್ಮದಲ್ಲಿ ಏನೇನಿದೆಯೋ ಅದು ಭಗವಂತನಿಗೆ ಗೊತ್ತು. ಅವನನ್ನು ನಾವು ಶೃಧೆಯಿಂದ ಭಜಿಸೋಣ. ನಮ್ಮೆಲ್ಲರ ದುಃಖ ನಿವಾರಣೆ ಮಾಡುವ ಶಕ್ತಿ ಕೇವಲ ಅವನೊಬ್ಬನಿಗೆ ಮಾತ್ರ ಸೇರಿದೆ. ಆದ್ದರಿಂದ ನೀನು ದುಃಖಿಸದೇ ಮನೆಗೆ ಹಿಂತಿರುಗಿ ಹೋಗು, ನನಗೆ ಸುಮಾರು ೩೫ ವರ್ಷ ಜೈಲು ಅನುಭವಿಸಬೇಕಾಗಿದೆ. ಅಷ್ಟು ವರ್ಷ ನಾನು ಮುಗಿಸಿಬರಬೇಕಾದರೆ ಮುದುಕನಾಗಿರುತ್ತೇನೆ. ನನಗೆ ದೇಶ ಸೇವೆ ಮಾಡುವ ಉತ್ಕಟ ಬಯಕೆ ಇದೆ. ನಿನ್ನ ಆಸೆಗಳನ್ನು ನಾನು ಎಷ್ಟರ ಮಟ್ಟಿಗೆ ಪೂರೈಸುತ್ತೇನೋ ನನಗೆ ಗೊತ್ತಿಲ್ಲ. ನೀನು ಹೇಗೆ ಮಾಡುತ್ತಿಯಾ ಯೋಚಿಸಿ ನೋಡು. ನಿರ್ಧಾರ ನಿನಗೆ ಬಿಟ್ಟಿದ್ದು. ಒಂದು ವೇಳೆ ನನ್ನ ಪ್ರತೀಕ್ಷೆಯಲ್ಲಿಯೇ ಇರಬೇಕೆಂದು ಬಯಸಿದರೆ ನೀನು ಮಕ್ಕಳ ಆಸೆ ತ್ಯೇಜಿಸಬೇಕಾಗುತ್ತದೆ. ಇಷ್ಟೆಲ್ಲಾ ನನಗೋಸ್ಕರ ಯಾಕೆ ಕಷ್ಟ ಪಡುತ್ತಿಯಾ ? ಸುಮ್ಮನ್ನೆ ನೀನು ಇನ್ನೊಂದು ಮದುವೆಯಾಗುವದೇ ಒಳ್ಳೆಯದು" ಎಂದು ಹೇಳಿ ಸಮಯ ಮುಗಿಯುವುದರೊಳಗೆ ಜೈಲು ಸೇರಿದರು. ಇವರ ಕಠೋರವಾದ ಮಾತನ್ನು ಕೇಳಿ ಅಲ್ಲಿಯೇ ಸಮೀಪದಲ್ಲಿದ್ದ ಅಬ್ದುಲ್ ಅಜೀಜ ಜೈಲರನು ಮುಂದೆ ಬಂದು ಆ ತಾಯಿಗೆ ಸಮಾಧಾನ ಹೇಳುತ್ತಾ ರಾಮಚಂದ್ರರಿಗೆ ಹೀಗೆ ಹೇಳಿದನು "ಆರ್ಯ ನೀವು ಮನುಷ್ಯನೋ ಮೃಗವೋ? ಏನು ಅರಿಯದ ಆ ಮುಗ್ಧ ಹೆಣ್ಣು ಮಗಳ ಜೊತೆಗೆ ಹೀಗೆ ವರ್ತಿಸುವುದೇ ? ಗಂಡನನ್ನೇ ನಂಬಿ ಬಂದಿರುವ ಆ ಹೆಣ್ಣು ಮಗಳಿಗೆ ಇನ್ನಾರು ಗತಿ ಹೀಗೆ ವರ್ತಿಸುವುದ ಉಚಿತವಲ್ಲ"[೧೦] ಎಂದು ಖಂಡತುಂಡವಾಗಿ ಹೇಳಿದನು.

- **ಕಾಲಾಪಾನಿ ಶಿಕ್ಷೆ :**

ಸೆಷನ್ ಕೋರ್ಟಿನ ಶಿಕ್ಷೆಯ ಪ್ರಕಾರ ರಾಮಚಂದ್ರರಿಗೆ ಕೆಲವು ತಿಂಗಳುಗಳ ಕಾಲ ಚಂಚಗುಡಾ ಜೈಲಿನಲ್ಲಿ ಇಡಲಾಗಿತ್ತು. ಅದಾದಮೇಲೆ ಕಾಲಾಪಾನಿ ಶಿಕ್ಷೆ ಕೊಡಲಾಯಿತು. ಈ ಶಿಕ್ಷೆ ಅನುಭವಿಸಲು ಅವರನ್ನು ಅಂಡಮಾನ ಮತ್ತು ನಿಕೋಬಾರಗೆ ಕರೆದೊಯ್ದರು. ಈ ಕಾಲಾಪಾನಿ ಶಿಕ್ಷೆ ಎಂದರೆ ಕಪ್ಪು ನೀರಿನ ಶಿಕ್ಷೆ ಎಂದರ್ಥ. ಕಪ್ಪು ನೀರಿನಲ್ಲಿ ಕೈದಿಗಳನ್ನು ಮುಳುಗಿಸಿ ಭಯ ಪಡುವಂತೆ ಮಾಡುತ್ತಿದ್ದರು. ಇಲ್ಲಿಯ ಶಿಕ್ಷೆ ಬಹಳ ವಿಚಿತ್ರವಾದದ್ದು. ಇಲ್ಲಿ ಯಾರನ್ನು ಯಾರು ಭೇಟಿಯಾಗುವಂತಿಲ್ಲ. ಭೇಟಿಯಾಗಲು ಅವಕಾಶ ಕೂಡ ಕಲ್ಪಿಸುವುದಿಲ್ಲ. ಸೂರ್ಯಕಿರಣಗಳು ಬರಲು ಭಯ ಪಡುವಂತಹ ಒಂದು ಸನ್ನಿವೇಶ ಇಲ್ಲಿಯದು. ಇಲ್ಲಿಯ ಶಿಕ್ಷೆ ಎಲ್ಲಾ ಶಿಕ್ಷೆಗಿಂತಲೂ ಭಯಾನಕವು ಭೀಕರವೂ ಹೌದು. ಇಂತಹ

ಘನಘೋರವಾದ ಶಿಕ್ಷೆಯನ್ನು ರಾಮಚಂದ್ರರು ಹೇಗೆ ಅನುಭವಿಸಿರಬಹುದು ಎಂಬ ಪ್ರಶ್ನೆ ನಮ್ಮಲ್ಲಿ ಮೂಡದೆ ಇರದು. ದೇಶಕ್ಕಾಗಿ, ತನ್ನ ನಾಡಿಗಾಗಿ ಅವರು ತಮ್ಮ ಹೆಂಡತಿ ಮಕ್ಕಳನ್ನು ಕೂಡ ತ್ಯಾಗ ಮಾಡಲು ಸಿದ್ಧರಾಗಿದ್ದರು. ವಿದೇಶಿಯರು ಬಂದು ನಮ್ಮ ಭಾರತಾಂಬೆಯ ಪಾದಗಳಿಗೆ ಬೇಡಿಹಾಕಿ ಬಂಧಿಸಿದ್ದಾರೆ. ಅದನ್ನು ಬಿಡಿಸುವವರೆಗೂ ನನಗೆ ಸಮಾಧಾನವಿಲ್ಲವೆಂದು ಅವರು ಹೇಳುತ್ತಿದ್ದರು.

ಉತ್ತರ ಭಾರತದವರಿಗೆ ಒಂದು ಭೂತ ಬೆನ್ನು ಹತ್ತಿದ್ದರೆ ಹೈದ್ರಾಬಾದ ಕರ್ನಾಟಕ ಜನರಿಗೆ ಎರಡು ಭೂತಗಳು ಬೆನ್ನುಹತ್ತಿದವು. "ಹಿಂದೆ ಹೋದರೆ ಕೆರೆ ಮುಂದೆ ಭಾವಿ" ಎನ್ನುವಂತೆ ಹಿಂದೆಯೂ ವೈರಿಗಳು ಮುಂದೆಯೂ ವೈರಿಗಳು ಬೆನ್ನು ಹತ್ತಿ ಭಾರತೀಯರ ನೆಮ್ಮದಿ ಹಾಳು ಮಾಡುತ್ತಿದ್ದರು. ಇದನ್ನು ಮನಗಂಡ ಅನೇಕ ಸ್ವಾತಂತ್ರ ಹೋರಾಟಗಾರರು, ದೇಶ ಭಕ್ತರು, ಸಮಾಜ ಸುಧಾರಕರು ತಮ್ಮ ಪ್ರಾಣಾರ್ಪಣೆ ಮಾಡಿದರು.

ಹೀಗೆ ರಾಮಚಂದ್ರ ವೀರಪ್ಪನವರು ಕಾಲಾಪನಿ ಶಿಕ್ಷೆಯನ್ನು ಅನುಭವಿಸಿ ಮುಂದೆ ೧೯೪೮ ಸೆಪ್ಟೆಂಬರ್ ೧೮ ರಂದು ಹೈದ್ರಾಬಾದ ಕರ್ನಾಟಕ ಸ್ವಾತಂತ್ರ ಗೊಂಡಾಗ ಜೈಲಿನಿಂದ ಬಿಡುಗಡೆಯಾದರು.

- **ಹುತಾತ್ಮ ಧರ್ಮಪ್ರಕಾಶರಿಗೆ ಅಂತಿಮ ನಮನ:-**

ಬಸವಕಲ್ಯಾಣ ತಾಲ್ಲೂಕಿನ ಜನಮನದಲ್ಲಿ ಅಚ್ಚಳಿಯದ ಹೆಸರು ಧರ್ಮ ಪ್ರಕಾಶರದು. ನಾಗಪ್ಪಾ ಎಂಬ ಮೂಲ ಹೆಸರು ಪಡೆದ ಇವರು ನೇಕಾರ ವೃತ್ತಿಯನ್ನು ಅನುಸರಿಸಿ ಕಿರಿಯ ವಯಸ್ಸಿನಲ್ಲಿಯೇ ಹೋರಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡವರು. ಭಾಯಿ ಬನ್ಸಿಲಾಲ್‌ಜೀ, ಭಾಯಿ ಶಾಮಲಾಲ್‌ಜೀ, ವಿನಾಯಕ ವಿದ್ಯಾಲಂಕಾರ ಮುಂತಾದವರ ಜೊತೆಗೆ ಆರ್ಯಸಮಾಜದ ಕಾರ್ಯನಿರ್ವಹಿಸುತ್ತಿದ್ದರು.

ಅಲ್ಲಲ್ಲಿ ಯುವಕರನ್ನು ಕಟ್ಟಿಕೊಂಡು ಅವರಿಗೆ ವ್ಯಾಯಾಮ ಮಾಡಿಸುತ್ತಾ ಲಾಠಿ, ಭರ್ಚಿ, ಚಾಕು, ಚೂರಿ, ತಲವಾರು ಇತ್ಯಾದಿಗಳನ್ನು ತಿರುಗಿಸಿವುದು ಅವುಗಳನ್ನು ಉಪಯೋಗಿಸುವ ರೀತಿ-ನೀತಿಗಳ ಬಗ್ಗೆ ತರಬೇತಿ ನೀಡುತ್ತಿದ್ದರು. ಈ ರೀತಿ ಆರ್ಯಸಮಾಜದ ೨೦೦ ಯುವಕರನ್ನು ಪ್ರಚೋದಿಸುವ ಹಾಗೂ ಪ್ರೇರೇಪಿಸುವ ಕೆಲಸ ಕಂಡು ರಜಾಕಾರರು ಈತನ ವಿರುದ್ಧ ಹಲ್ಲು ಮಸೆಯುತ್ತಿದ್ದರು. ಹೇಗಾದರು ಮಾಡಿ ಇವನನ್ನು ಹತ್ಯೆ ಮಾಡಬೇಕೆಂದು ಹೊಂಚು ಹಾಕುತ್ತಿದ್ದರು. ಒಂದು ದಿನ ರಾತ್ರಿ ಆರ್ಯ ಸಮಾಜದ ಯುವಕರಿಗೆ ಉತ್ಸಾಹದಿಂದ ಪ್ರೋತ್ಸಾಹಿಸಿ ತರಬೇತಿ ನೀಡಿ ಮನೆಗೆ ಮರಳುತ್ತಿರುವಾಗ ಕಾದು ಕುಳಿತ ನೂರಾರು ಗುಂಡಾಗಳು ಈತನ ಮೇಲೆ ಒಮ್ಮಿಂದೊಮ್ಮೆಲೆ ಆಕ್ರಮಣ ಮಾಡಿದರು. ನಾಗಪ್ಪಾ ನಡು

ರಾತ್ರಿಯಲ್ಲಿ ಅವರೆಲ್ಲರ ವಿರುದ್ಧ ಧೈರ್ಯದಿಂದ ಹೋರಾಡಿದರು. ಎರಡುನೂರು ಮುನ್ನೂರು ಗುಂಡಾ ಜನರ ಮಧ್ಯೆ ಒಬ್ಬನೆ ಹೇಗೆ ಉಳಿಯಲು ಸಾಧ್ಯ! ಆದರೂ ವೀರಾವೇಶದಿಂದ ಹೋರಾಡಿ ಹತ್ತು ಜನರಿಗೆ ಗಂಭೀರವಾಗಿ ಗಾಯಗೊಳಿಸಿದರು. ೧೯೩೨ ರಂದು ನಾಗಪ್ಪನವರು ಧರ್ಮಕ್ಕಾಗಿ ಹೋರಾಡಿ ಧರ್ಮ ಪ್ರಕಾಶರಾಗಿ ತಮ್ಮ ಕೊನೆಯುಸಿರೆಳೆದು ಹುತಾತ್ಮರಾದರು. ಅಂದಿನಿಂದ ಅವರಿಗೆ ಧರ್ಮ ಪ್ರಕಾಶರೆಂಬ ನಾಮ ಅಭಿಮಾನವಾಯಿತು.

ಈ ಧರ್ಮ ಪ್ರಕಾಶರ ಹತ್ಯೆಗೈದ ಸುದ್ದಿ ಮಿಂಚಿನಂತೆ ಎಲ್ಲೆಡೆ ಹರಡಿತು. ಎಲ್ಲಾ ಆರ್ಯ ಸಮಾಜದ ಮುಖಂಡರು ಸ್ಥಳಕ್ಕೆ ಧಾವಿಸಿ ಮೃತ ದೇಹವನ್ನು ಆರ್ಯ ಸಮಾಜಕ್ಕೆ ತರಲಾಯಿತು. ಅಸಂಖ್ಯಾತ ಅಭಿಮಾನಿಗಳು ಶವಯಾತ್ರೆಯಲ್ಲಿ ಪಾಲ್ಗೊಂಡರು. ಆರ್ಯ ಸಮಾಜದ ಪದ್ದತಿಯಂತೆ ಪಾರ್ಥಿವ ಶರೀರವನ್ನು ಅಗ್ನಿಗೆ ಅರ್ಪಿಸಲಾಯಿತು. ಆ ಸಂದರ್ಭದಲ್ಲಿ ಮೋಹನಸಿಂಗ, ಪಂಡಿತ ಗೋಪಾಲದೇವ ಶಾಸ್ತ್ರಿ, ನರೇಂದ್ರಜೀ, ಶಿವಚಂದ್ರಜೀ ಮತ್ತು ರಾಮಚಂದ್ರರು ದುಃಖತಪ್ತರಾದರು ಅಭಿಮಾನಿಗಳಿಗೆ ಸಮಾಧಾನ ಹೇಳುತ್ತಾ ಧರ್ಮದ ಉಪದೇಶಮಾಡಿ ಅಂತಿಮ ವಿದಾಯ ಹೇಳಿದರು. ಇವರ ಹೆಸರಿನಲ್ಲಿ ರಮಾನಂದ ಲಾಡರ್ ನೇತೃತ್ವದಲ್ಲಿ ಇಂದಿಗೂ ಪ್ರಾಥಮಿಕ ಶಾಲೆ ನಡೆಯುತ್ತಿದೆ. ಪ್ರತಿವರ್ಷ ಅವರನ್ನು ಸ್ಮರಿಸಲು ಉತ್ಸವ ಹಮ್ಮಿಕೊಳ್ಳಲಾಗಿದೆ. ಈ ಎಲ್ಲಾ ಕಾರ್ಯಗಳಿಗೆ ಆರ್ಯ ಸಮಾಜದ ಮುಖಂಡರು ಮತ್ತು ರಾಮಚಂದ್ರರು ಬಲಗೈಯಾಗಿ ನಿಂತು ಸಹಾಯ ಮಾಡಿದ್ದನ್ನು ಯಾರು ಮರೆಯುವಂತಿಲ್ಲ.

ಅಡಿ ಟಿಪ್ಪಣಿಗಳು :

೧) ಮಾಯಾದೇವಿ. ಜಿ. ಮಾಲಿಪಾಟೀಲ ; ಸೋಲರಿಯದ ಸರದಾರ ಸರಳ ಸಜ್ಜನಿಕೆಯ ಸಾಕಾರ ರಾಮಚಂದ್ರ ವೀರಪ್ಪ, ಪುಟ ೧೭

೨) –ಅದೇ– ಪುಟ ೧೭

೩) –ಅದೇ– ಪುಟ ೨೧

೪) ಬಂಡೆಪ್ಪ. ಎಸ್. ಖುಬಾ; ಧರಿನಾಡಿನ ಗಂಡುಗಲಿ ರಾಮ, ಪುಟ ೩೭

೫) –ಅದೇ– ಪುಟ ೩೯

೬) –ಅದೇ– ಪುಟ ೪೧

೭) –ಅದೇ– ಪುಟ ೪೨

೮) ಮಾಯಾದೇವಿ. ಜಿ. ಮಾಲಿಪಾಟೀಲ ; ಸೋಲರಿಯದ ಸರದಾರ ಸರಳ ಸಜ್ಜನಿಕೆಯ ಸಾಕಾರ ರಾಮಚಂದ್ರ ವೀರಪ್ಪ, ಪುಟ ೪೮

೯) –ಅದೇ– ಪುಟ ೪೯–೫೦

೧೦) –ಅದೇ– ಪುಟ ೫೦

೧೧) ಬಂಡೆಪ್ಪ. ಎಸ್. ಖುಬಾ; ಧರಿನಾಡಿನ ಗಂಡುಗಲಿ ರಾಮ, ಪುಟ ೩೫

ಅಧ್ಯಾಯ-೬
ಪೊಲೀಸ ಕಾರ್ಯಾಚರಣೆ

೧೯೪೭ ರ ಉತ್ತರಾರ್ಧ ಮತ್ತು ೧೯೪೮ ರ ಆರಂಭದ ಕಾಲದಲ್ಲಿ ಸರದಾರ ವಲ್ಲಭಾಯಿ ಪಟೇಲ ದೇಶದ ಉದ್ದಗಲಕ್ಕೂ ಹರಡಿದ್ದ, ಮಹಾರಾಜರುಗಳ ಆಳ್ವಿಕೆಯಲ್ಲಿದ್ದ ಸಂಸ್ಥಾನಗಳನ್ನು ಕ್ರಮವಾಗಿ ಭಾರತದ ಅಧಿಪತ್ಯಕ್ಕೆ ಸೇರ್ಪಡೆಗೊಳಿಸಿದುದು ಸುವಿಧಿತ. ವಿಶೇಷ ಸಮಸ್ಯೆಗಳನ್ನೊಡ್ಡಿ ಹೊರಗುಳಿದ್ದವು ೩ ಪ್ರದೇಶಗಳು : ಕಾಶ್ಮೀರ, ಜುನಾಗಢ, ಹೈದ್ರಾಬಾದ್. ಕಾಶ್ಮೀರ ವ್ಯವಹಾರವನ್ನು ಜವಾಹರಲಾಲ ನೆಹರು ತಾವೇವಹಿಸಿಕೊಂಡು ಅದನ್ನು ವಿಲೀನ ಮಾಡಿಕೊಂಡಿದ್ದು ಒಂದು ದುರಂತ ಪ್ರಕರಣ. ಸೌರಾಷ್ಟ್ರದಲ್ಲಿದ್ದ ಜುನಾಗಡದ ದಿವಾನ ಮುಸ್ಲಿಂ ಲೀಗ ಶಹಾನವಾಜ ಭುಟ್ಟೊ ಜುನಾಗಢ ಪಾಕಿಸ್ತಾನಕ್ಕೆ ಸೇರಲು ಇಚ್ಚಿಸುತ್ತದೆ ಎಂದು ಪಾಕಿಸ್ತಾನಕ್ಕೆ ಪತ್ರ ಬರೆದ. ಅದರ ಅತಾರ್ಕಿಕತೆ, ಹಾಗೂ ಅದು ಹೈದ್ರಾಬಾದಿನ ನಿಜಾಮ ಪ್ರತ್ಯೇಕತಾಪ್ರವರ್ತಿಗೆ ಕುಮ್ಮಕ್ಕು ನೀಡಿತೆಂಬ ಸಂಭವ. ಈ ಎರಡು ಕಾರಣಗಳಿಂದ ಪಟೇಲ ೧೯೪೭ ರ ಅಕ್ಟೋಬರ್ ನವೆಂಬರ ತಿಂಗಳಲ್ಲಿ ಜುನಾಗಡ ಬಾಗಿಲಿಗೆ ಸೇನೆಯನ್ನು ಕಳುಹಿಸಿದರು. ಆದರೆ ಸೇನೆಯ ಅಗತ್ಯವೇ ಬೀಳಲಿಲ್ಲ. ಹಿಂದಿನ ದಿನ ಭುಟ್ಟೊ ಕರಾಚಿಗೆ ಪಲಾಯನ ಮಾಡಿದನು. ನಂತರ ೧೯೪೮ ರ ಫೆಬ್ರುವರಿ ೨೦ ರಂದು ವಿದ್ಯುಕ್ತವಾಗಿ ನಡೆದ ಜನಾಭಿಪ್ರಾಯ ಸಂಗ್ರಹದಲ್ಲಿ ಅಲ್ಲಿಯ ಜನತೆ ಅತ್ಯಧಿಕ ಬಹುಮತದಿಂದ ಭಾರತದೊಡನೆ ವಿಲೀನವನ್ನು ಅನುಮೋದಿಸಿತು.

ಹೈದ್ರಾಬಾದ ಇಡೀ ದೇಶದಲ್ಲಿಯೇ ಅತಿ ದೊಡ್ಡ ಸಂಸ್ಥಾನವಾಗಿತ್ತು. ೮೨ ಸಾವಿರ ಚದುರ ಮೈಲಿಯಷ್ಟು ವಿಸ್ತಾರ, ಶೇ ೮೫ ರಷ್ಟು ಹಿಂದುಗಳಿದ್ದ ಅಲ್ಲಿಯ ಒಟ್ಟು ಜನಸಂಖ್ಯೆ ೧ ಕೋಟಿ ೬೦ ಲಕ್ಷದಷ್ಟಿತ್ತು. ಉಳಿದೆಲ್ಲಾ ಸಂಸ್ಥಾನಗಳ ಸೇರ್ಪಡೆಯಾದ ಮೇಲೆ ಹೈದ್ರಾಬಾದಗೆ ಗಮನಕೊಡಲು ಪಟೇಲ ನಿಶ್ಚಯಿಸಿದರು. ಇದಕ್ಕೆ ಹಲವು ಕಾರಣಗಳಿದ್ದವು. ನೆಹರು ಅವರಿಗೆ ಕಾಶ್ಮೀರದ ಮೋಹವಿದ್ದಂತೆ ಮೌಂಟಬ್ಯಾಟನ ರಿಗೆ ಹೈದ್ರಾಬಾದಿನ ಬಗ್ಗೆ ವ್ಯಾಮೋಹವಿತ್ತು. "ಹಿಂದೆ ಇಂಗ್ಲೆಂಡಿನ ಸಾಮ್ರಾಟ ಮಿತ್ರನೆಂದು ಗಣಿಸಿದ್ದ ನಿಜಾಮನ ಆಸಕ್ತಿಯನ್ನು ಕಾಯ್ದು ಕೊಳ್ಳಲು ನಾನು ಶ್ರಮಿಸಿದೆ, ಅನಿವಾರ್ಯವಾಗಿ ಹೈದ್ರಾಬಾದ ಸಂಸ್ಥಾನಕ್ಕೂ ಭಾರತಕ್ಕೂ ನಡುವೆ ಸಂದಾನ ವಾಗಬೇಕಾದಲ್ಲಿ ಅದರ ರುವಾರಿಯೆಂಬ ಕೀರ್ತಿ ನನಗೆ ಸಲ್ಲಲ್ಲಿ-ಎಂಬ ಆಕಾಂಕ್ಷೆ ಮೌಂಟಬ್ಯಾಟನ ನನದು."[೧] ನಿಜಾಮನು ಸೌಮ್ಯ ಮಾರ್ಗಕ್ಕೆ ಒಗ್ಗುವ ಸಂಭವವಿಲ್ಲವೆಂದು ಗ್ರಹಿಸಿದ್ದರೂ ಪಟೇಲ್ ಮೌಂಟಬ್ಯಾಟನನ ಸಂತುಷ್ಟಿಗಾಗಿ ಹೈದ್ರಾಬಾದ ಸರ್ಕಾರದೊಡನೆ ಒಂದು ತಾತ್ಕಾಲಿಕ 'ಯತಾಸ್ಥಿತಿ

ಅಧ್ಯಾಯ-೬

ಪೊಲೀಸ ಕಾರ್ಯಾಚರಣೆ

೧೯೪೭ ರ ಉತ್ತರಾರ್ಧ ಮತ್ತು ೧೯೪೮ ರ ಆರಂಭದ ಕಾಲದಲ್ಲಿ ಸರದಾರ ವಲ್ಲಭಾಯಿ ಪಟೇಲ ದೇಶದ ಉದ್ದಗಲಕ್ಕೂ ಹರಡಿದ್ದ, ಮಹಾರಾಜರುಗಳ ಆಳ್ವಿಕೆಯಲ್ಲಿದ್ದ ಸಂಸ್ಥಾನಗಳನ್ನು ಕ್ರಮವಾಗಿ ಭಾರತದ ಅಧಿಪತ್ಯಕ್ಕೆ ಸೇರ್ಪಡೆಗೊಳಿಸಿದುದು ಸುವಿಧಿತ. ವಿಶೇಷ ಸಮಸ್ಯೆಗಳನ್ನೊಡ್ಡಿ ಹೊರಗುಳಿದ್ದವು ೩ ಪ್ರದೇಶಗಳು : ಕಾಶ್ಮೀರ, ಜುನಾಗಢ, ಹೈದ್ರಾಬಾದ್. ಕಾಶ್ಮೀರ ವ್ಯವಹಾರವನ್ನು ಜವಾಹರಲಾಲ ನೆಹರು ತಾವೇವಹಿಸಿಕೊಂಡು ಅದನ್ನು ವಿಲೀನ ಮಾಡಿಕೊಂಡಿದ್ದು ಒಂದು ದುರಂತ ಪ್ರಕರಣ. ಸೌರಾಷ್ಟ್ರದಲ್ಲಿದ್ದ ಜುನಾಗಡದ ದಿವಾನ ಮುಸ್ಲಿಂ ಲೀಗ ಶಹಾನವಾಜ ಭುಟ್ಟೊ ಜುನಾಗಢ ಪಾಕಿಸ್ತಾನಕ್ಕೆ ಸೇರಲು ಇಚ್ಛಿಸುತ್ತದೆ ಎಂದು ಪಾಕಿಸ್ತಾನಕ್ಕೆ ಪತ್ರ ಬರೆದ. ಅದರ ಅತಾರ್ಕಿಕತೆ, ಹಾಗೂ ಅದು ಹೈದ್ರಾಬಾದಿನ ನಿಜಾಮ ಪ್ರತ್ಯೇಕತಾಪ್ರವರ್ತಿಗೆ ಕುಮ್ಮಕ್ಕು ನೀಡಿತೆಂಬ ಸಂಭವ. ಈ ಎರಡು ಕಾರಣಗಳಿಂದ ಪಟೇಲ ೧೯೪೭ ರ ಅಕ್ಟೋಬರ್ ನವೆಂಬರ ತಿಂಗಳಲ್ಲಿ ಜುನಾಗಡ ಬಾಗಿಲಿಗೆ ಸೇನೆಯನ್ನು ಕಳುಹಿಸಿದರು. ಆದರೆ ಸೇನೆಯ ಅಗತ್ಯವೇ ಬೀಳಲಿಲ್ಲ. ಹಿಂದಿನ ದಿನ ಭುಟ್ಟೊ ಕರಾಚಿಗೆ ಪಲಾಯನ ಮಾಡಿದನು. ನಂತರ ೧೯೪೮ ರ ಫೆಬ್ರುವರಿ ೨೦ ರಂದು ವಿದ್ಯುಕ್ತವಾಗಿ ನಡೆದ ಜನಾಭಿಪ್ರಾಯ ಸಂಗ್ರಹದಲ್ಲಿ ಅಲ್ಲಿಯ ಜನತೆ ಅತ್ಯಧಿಕ ಬಹುಮತದಿಂದ ಭಾರತದೊಡನೆ ವಿಲೀನವನ್ನು ಅನುಮೋದಿಸಿತು.

ಹೈದ್ರಾಬಾದ ಇಡೀ ದೇಶದಲ್ಲಿಯೇ ಅತಿ ದೊಡ್ಡ ಸಂಸ್ಥಾನವಾಗಿತ್ತು. ೮೨ ಸಾವಿರ ಚದುರ ಮೈಲಿಯಷ್ಟು ವಿಸ್ತಾರ, ಶೇ ೮೫ ರಷ್ಟು ಹಿಂದುಗಳಿದ್ದ ಅಲ್ಲಿಯ ಒಟ್ಟು ಜನಸಂಖ್ಯೆ ೧ ಕೋಟಿ ೬೦ ಲಕ್ಷದಷ್ಟಿತ್ತು. ಉಳಿದೆಲ್ಲಾ ಸಂಸ್ಥಾನಗಳ ಸೇರ್ಪಡೆಯಾದ ಮೇಲೆ ಹೈದ್ರಾಬಾದಗೆ ಗಮನಕೊಡಲು ಪಟೇಲ ನಿಶ್ಚಯಿಸಿದರು. ಇದಕ್ಕೆ ಹಲವು ಕಾರಣಗಳಿದ್ದವು. ನೆಹರು ಅವರಿಗೆ ಕಾಶ್ಮೀರದ ಮೋಹವಿದ್ದಂತೆ ಮೌಂಟಬ್ಯಾಟನ ರಿಗೆ ಹೈದ್ರಾಬಾದಿನ ಬಗ್ಗೆ ವ್ಯಾಮೋಹವಿತ್ತು. "ಹಿಂದೆ ಇಂಗ್ಲೆಂಡಿನ ಸಾಮ್ರಾಟ ಮಿತ್ರನೆಂದು ಗಣಿಸಿದ್ದ ನಿಜಾಮನ ಆಸಕ್ತಿಯನ್ನು ಕಾಯ್ದು ಕೊಳ್ಳಲು ನಾನು ಶ್ರಮಿಸಿದೆ, ಅನಿವಾರ್ಯವಾಗಿ ಹೈದ್ರಾಬಾದ ಸಂಸ್ಥಾನಕ್ಕೂ ಭಾರತಕ್ಕೂ ನಡುವೆ ಸಂದಾನ ವಾಗಬೇಕಾದಲ್ಲಿ ಅದರ ರುವಾರಿಯೆಂಬ ಕೀರ್ತಿ ನನಗೆ ಸಲ್ಲಲ್ಲಿ- ಎಂಬ ಆಕಾಂಕ್ಷೆ ಮೌಂಟಬ್ಯಾಟನ ನನದು."[೧] ನಿಜಾಮನು ಸೌಮ್ಯ ಮಾರ್ಗಕ್ಕೆ ಒಗ್ಗುವ ಸಂಭವವಿಲ್ಲವೆಂದು ಗ್ರಹಿಸಿದ್ದರೂ ಪಟೇಲ್ ಮೌಂಟಬ್ಯಾಟನನ ಸಂತುಷ್ಟಿಗಾಗಿ ಹೈದ್ರಾಬಾದ ಸರ್ಕಾರದೊಡನೆ ಒಂದು ತಾತ್ಕಾಲಿಕ 'ಯತಾಸ್ಥಿತಿ

ಒಪ್ಪಂದಕ್ಕೆ ಒಪ್ಪಿದನು. (೨೬-೧೧-೧೯೪೭) ಪಾಕಿಸ್ತಾನಕ್ಕೆ ಸೇರುವುದಿಲ್ಲವೆಂದು ನಿಜಾಮನು ಆಶ್ವಾಸನೆ ಕೊಟ್ಟಮೇಲೆ ಹಿಂದಿದ್ದ ಆಡಳಿತ ವ್ಯವಸ್ಥೆಗಳ ಮುಂದುವರಿಕೆ ಆ ಒಪ್ಪಂದದ ಮುಖ್ಯ ಭಾಗವಾಗಿತ್ತು. ಆ ಒಪ್ಪಂದದಂತೆಯೇ ಭಾರತ ಸರ್ಕಾರದ ಏಜೆಂಟ್ ಜನರಲ್ ಆಗಿ ಕೆ.ಎಮ್. ಮುನ್ಶಿಅವರನ್ನು ಪಟೇಲ ನಿಯುಕ್ತಿ ಮಾಡಿ ಹೈದ್ರಾಬಾದಗೆ ಕಳುಹಿಸಿದರು.

ನಿಜಾಮನ ಸ್ವಾತಂತ್ರ ಆಕಾಂಕ್ಷೆಗೆ ನೀರು ಗೊಬ್ಬರ ಒದಗಿಸುತ್ತಿದ್ದವನು ರಜಾಕಾರರ ನಾಯಕನು ಮುಸ್ಲಿಂ ಅಧಿಪತ್ಯಕ್ಕಾಗಿ ಸೆಣಸುತ್ತಿದ್ದ ಇತ್ತೇಹಾದ-ಉಲ್-ಮುಸಿಲ್ಮೀನ್ ಸಂಘಟನೆಯ ಪ್ರಮುಖನು ಆಗಿದ್ದ ಖಾಸಿಮ ರಜ್ವಿ. ೧೯೪೭ ರ ನವೆಂಬರ್‌ನಲ್ಲಿ ರಜ್ವಿ ದೆಹೆಲಿಗೆ ಹೋಗಿ ಪಟೇಲರನ್ನು ಭೇಟಿ ಆಗಿ "ಕಟ್ಟಕಡೆಯ ಮುಸ್ಲಿಂ ನಿರುವವರೆಗೆ ನಾವು ಭಾರತ ಒಕ್ಕೂಟದ ವಿರುದ್ಧ ಯುದ್ಧ ಮಾಡುತ್ತೇವೆ"[೨] ಎಂದಾಗ ಪಟೇಲ ಹೇಳಿದರು "ನೀವು ಆತ್ಮಹತ್ಯೆ ಮಾಡಿಕೊಳ್ಳಲು ನಿಶ್ಚಯಿಸಿದ್ದಲ್ಲಿ ನಾನು ಅದನ್ನು ಹೇಗೆ ನಿರಾಕರಿಸಲಿ ?"[೩] ಭಾರತದ ವಿರುದ್ಧ ಯುದ್ಧ ನಡೆಸಲು ಪಾಕಿಸ್ತಾನದ ನೆರವಿಗೆ ನಿಜಾಮನು ರೂ: ೨೦ ಕೋಟಿ ಸಾಲ ನೀಡಿದನು. ನಿಜಾಮ ಸರ್ಕಾರದ ಪ್ರತಿನಿಧಿ ಲಯೀಕ್ ಅಲಿಗೆ ೧೯೪೮ ರ ಏಪ್ರೀಲ್ ೧೫ ರ ಭೇಟಿಯಲ್ಲಿ ಪಟೇಲ್ ಸ್ಪಷ್ಟಗೊಳಿಸಿದರು. "ಇಷ್ಟು ಧೀರ್ಘಕಾಲ ರಕ್ತ ಹರಿಸಿ ಶ್ರಮಿಸಿ ನಾವು ರಚಿಸಿರುವ ಒಕ್ಕೂಟದ ನಟ್ಟ-ನಡುವೆ ಅದಕ್ಕೆ ಸೇರದ ಪ್ರತ್ಯೇಕ ಘಟಕವೊಂದು ಇರಲು ನಾವು ಅವಕಾಶ ಕೊಡಲಾರೆವು."[೪]

ಯಥಾಸ್ಥಿತಿ ಒಪ್ಪಂದದ ಕರಾರುಗಳನ್ನು ನಿಜಾಮ ಸರ್ಕಾರ ನಿರಂತರ ಉಲ್ಲಂಘಿಸುತ್ತಲೇಹೋಯಿತು. ಭಾರತ ಸರ್ಕಾರ ಆಪೇಕ್ಷಿಸಿದಲ್ಲಿ ಅದರ ನಿರ್ದೇಶನದಂತೆ ರಕ್ಷಣೆ, ವಿದೇಶಾಂಗ ವ್ಯವಹಾರ, ಸಂಪರ್ಕ ಈ ಅಂಶಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಬಯಸಿದ ಕಾನೂನುಗಳನ್ನು ನಿಜಾಮ ಸರ್ಕಾರ ಜಾರಿ ಮಾಡಬೇಕು ಎಂಬ ಒಪ್ಪಂದಕ್ಕೆ ಪಟೇಲರ ಅರೆ ಮನಸ್ಸಿನ ಅನುಮೋದನೆಯನ್ನು ಮೌಂಟ್ ಬ್ಯಾಟನ್ ೧೯೪೮ ರ ಜೂನ ೧೫ ರಂದು ಪಡೆದುಕೊಂಡ. ಆದರೆ ಈ ತಾತ್ಕಾಲಿಕ ಕ್ರಮವನ್ನು ನಿಜಾಮ ಸರ್ಕಾರ ತಿರಸ್ಕರಿಸಿತು. ಇದನ್ನು ಪಟೇಲ ನಿರಿಕ್ಷಿಸಿಯೇ ಇದ್ದರು. ಹೈದ್ರಾಬಾದನಲ್ಲಿ ಅನಿವಾರ್ಯವಾದಲ್ಲಿ ಮಿಲಿಟರಿ ಕಾರ್ಯಾಚರಣೆ ನಡೆಸಲು ಮೇ ತಿಂಗಳ ಮಧ್ಯ ಭಾಗದಲ್ಲಿಯೇ ಸಚಿವ ಸಂಪುಟದ ಅಂಗೀಕಾರವನ್ನು ಪಟೇಲ್ ಪಡೆದುಕೊಂಡಿದ್ದರು.

ಜೂನ್ ೨೧ ರಂದು ಮೌಂಟಬ್ಯಾಟನ ಭಾರತದಿಂದ ನಿರ್ಗಮಿಸಿದನು. ಆಗಿನಿಂದಲೇ ಹೈದ್ರಾಬಾದ ಆಚರಣೆಯ ಅಂತಿಮ ಘಟ್ಟ ಆರಂಭವಾಯಿತೆ - ನ್ನಬಹುದು. ಅನಧಿಕೃತ ರೀತಿಯಲ್ಲಿ ನಡೆದಿದ್ದ ಸರಕುಗಳ ದಿಗ್ಭಂಧನ ಈಗ ಭಾರತ

ಸರ್ಕಾರದ ಘೋಷಿತ ನೀತಿಯಾಯಿತು. ಏತನ್ಮಧ್ಯೆ ಹೈದ್ರಾಬಾದನ ಜನಜೀವನ ಪೂರ್ತಿ ಅಸ್ತವ್ಯಸ್ತವಾಗಿತ್ತು. ನಡುರಾತ್ರಿಯಲ್ಲಿ ಪಾಕಿಸ್ತಾನಿ ವಿಮಾನಗಳು ಬಂದು ಬೀದರ, ವಾರಂಗಲ ಮುಂತಾದೆಡೆ ಇಳಿದು ರಜಾಕಾರ ಪಡೆಗಳಿಗೆ ಯುದ್ಧ ಸಾಮಗ್ರಿಗಳನ್ನು ನೀಡಿ ವಾಪಸಾಗುತ್ತಿದ್ದವು. ರಜಾಕಾರರು ಕಮ್ಯುನಿಷ್ಟರ ನಡುವೆ ದುಷ್ಟಕೂಟ ಏರ್ಪಟ್ಟು, ನಾಗರಿಕರ ಮೇಲಣ ಹಿಂಸಾತಾಂಡವ ಮುಗಿಲು ಮುಟ್ಟಿತು. ನಿಜಾಮನು ವಿಶ್ವಸಂಸ್ಥೆಗೆ ದೂರು ನೀಡಿದನು. ಅಮೇರಿಕಾದ ಅಧ್ಯಕ್ಷರ ಮಧ್ಯ ಪ್ರವೇಶವನ್ನು ಬಯಸಿದನು. ಆದರೆ ಅಮೇರಿಕ ನಿರಾಕರಿಸಿತು. ಎದೆಲ್ಲಾ ನಡೆದಿದ್ದಾಗಲೂ ಜವಾಹರಲಾಲ ನೆಹರು ತಾವು ಮೌಂಟಬ್ಯಾಟನ ನಿಗೆ ಮಾತು ಕೊಟ್ಟಿದಂತೆ ಸೇನಾಚರಣೆಗೆ ಅನುಮತಿ ತಡೆಹಿಡಿದು ವಿಳಂಬನೀತಿ ಅನುಸರಿಸತೊಡಗಿದರು. ಆದರೆ ನೆಹರು ದೌರ್ಬಲ್ಯಗಳು ಆ ವೇಳೆಗೆ ರಹಸ್ಯವಾಗೇನು ಉಳಿದಿರಲಿಲ್ಲ. ಹೀಗೆ ಇಡೀ ಸಚಿವ ಸಂಪುಟವು ಗವರ್ನರ ಜನರಲ್ ಸಿ. ರಾಜಗೋಪಾಲಾಚಾರಿಯವರು ಪಟೇಲರನ್ನು ಬೆಂಬಲಿಸಿದರು. ಸೆಪ್ಟೆಂಬರ್ ೦೮ ರ ಸಂಪುಟ ಸಭೆಯಲ್ಲಿಯೂ ನೆಹರು ಸೇನಾಚರಣೆಯನ್ನು ವಿರೋಧಿಸಿದರು.

ಸೆಪ್ಟೆಂಬರ್ ೧೩ ರಂದು ಸೇನಾಚರಣೆಯನ್ನು ಆರಂಭಿಸಲು ಸಂಪುಟದ ರಕ್ಷಣಾ ವ್ಯವಹಾರ ಸಮಿತಿ ನಿಶ್ಚಯಿಸಿದರು. ಆ ಹಂತದಲ್ಲಿಯೂ 'ರಾಜಾಜಿಯವರು ನಿಜಾಮರ ಮನವೊಲಿಸಿ'[೫೫] ಎಂಬ ನೆಪವೊಡ್ಡಿ ನೆಹರು ಪ್ರತಿಬಂಧಕ ಒಡ್ಡಿದರು. ಆದರೆ ಈ ಕಂಟಕಗಳನ್ನೆಲ್ಲ ಪಟೇಲ್ ಚಾಣಾಕ್ಷತೆಯಿಂದ ಪರಿಹರಿಸಿಕೊಂಡರು.

ಏತನ್ಮಧ್ಯ ಪರಿಸ್ಥಿತಿ ದಿನೇ ದಿನೇ ಗಂಭೀರವಾಗುತ್ತಾ ನಡೆಯಿತು. ಯಥಾಸ್ಥಿತಿ ಒಪ್ಪಂದದ ಉಲ್ಲಂಘನೆ ಹಾಗೂ ಗಡಿ ಭಾಗದಲ್ಲಿ ದಾಳಿಗಳೂ ಎರಡು ಪಕ್ಷಗಳಿಂದ ನಡೆಯುತ್ತಿದ್ದವು. ಸ್ವಾತಂತ್ರ ಯೋಧರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಗಡಿ ಚಳುವಳಿಯನ್ನು ತೀವ್ರಗೊಳಿಸಿದರು. ಹೈದ್ರಾಬಾದ ಸಂಸ್ಥಾನದ ರಾಜಕೀಯ ವಿವಾದವನ್ನು ಪರಿಹರಿಸಲು ಭಾರತ ಸರ್ಕಾರವು ತಳೆದ ಔದಾಸೀನ್ಯ ಮನೋಭಾವದಿಂದ ಬೇಸತ್ತು ಗಡಿ ಶಿಬಿರಗಳಲ್ಲಿ ಸ್ವರಾಜ್ಯಕ್ಕಾಗಿ ಹೋರಾಡುತ್ತಿದ್ದ ಸ್ವಾತಂತ್ರ ಯೋಧರು ರಜಾಕಾರರನ್ನು ಪ್ರಚೋದಿಸಿ ಹಿಂದು ಮಹಿಳೆಯರ ಮೇಲಿನ ದೌರ್ಜನ್ಯವನ್ನು ತೀವ್ರ ಗೊಳಿಸುವಂತೆ ಮಾಡಿದರು ಎಂಬ ಅಂಶ ನಮ್ಮ ಈ ಅಧ್ಯಯನದ ಸಂದರ್ಭದಲ್ಲಿ ತಿಳಿದುಬಂತು. ಹೈದ್ರಾಬಾದ ರಾಜ್ಯದಲ್ಲಿದ್ದ ಅರಾಜಕತೆಯನ್ನು ಭಾರತ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ಇಂತಹ ದುರದೃಷ್ಟಕರ ಕ್ರಮವು ಅಗತ್ಯವಾಗಿತ್ತು. ಕೇಂದ್ರ ಸರ್ಕಾರವು ನಿಜಾಮ ಸಾಂಮ್ರಾಜ್ಯವನ್ನು ಭಾರತ ಒಕ್ಕೂಟದೊಳಗೆ ವಿಲೀನಗೊಳಿಸಲು ಪೊಲೀಸ

ಕಾರ್ಯಾಚರಣೆ ಪ್ರಾರಂಭಿಸಲು ಬೇಕಾದ ರಾಜಕೀಯ ಪರಿಸ್ಥಿತಿಯನ್ನು ಸೃಷ್ಟಿಸಲು ಪ್ರಯತ್ನಿಸಲಾಯಿತು.

ಇದೇ ಸಂದರ್ಭದಲ್ಲಿ ೦೯-೦೯-೧೯೪೮ ರಂದು ಪ್ರಧಾನ ಮಂತ್ರಿ ನೆಹರು ಕಾಮನವೆಲ್ತ್ ಅಧಿವೇಶನದಲ್ಲಿ ಪಾಲ್ಗೊಳ್ಳಲು ಲಂಡನಗೆ ಪ್ರಯಾಣ ಬೆಳೆಸಿದರು. ಈ ಕಡೆ ಅಪರಾಧಿಯನ್ನು ಶಿಕ್ಷಿಸಲು ಶಸ್ತ್ರಾಸ್ತ್ರಗಳನ್ನು ಬಳಸಲು ಸರದಾರ ಪಟೇಲರು ನಿರ್ಧರಿಸಿದರು. ನೆಹರುರವರ ಔದಾಸೀನ್ಯ ಹಾಗೂ ಅನಿಶ್ಚಿತ ಮನೋಭಾವದ ಅರಿವಿದ್ದು ಸಹ ಸರದಾರ ವಲ್ಲಭಾಯಿ ಪಟೇಲರು ಹೈದ್ರಾಬಾದ ಸಂಸ್ಥಾನದಲ್ಲಿದ್ದ ಗಂಭೀರ ಪರಿಸ್ಥಿತಿಯನ್ನು ಪರಿಗಣಿಸಿ ಅನಿವಾರ್ಯವಾಗಿ ೧೩-೦೯-೧೯೪೮ ರಂದು ಪೊಲೀಸ ಕಾರ್ಯಾಚರಣೆಗೆ ಆಜ್ಞೆ ನೀಡಿದರು. ಮೇಜರ ಜನರಲ್ ಜೆ.ಎನ್. ಚೌಧರಿ ಹಾಗೂ ದಕ್ಷಿಣ ವಿಭಾಗದ ಸೇನಾ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಮಹಾರಾಜಾ ಶ್ರೀ ರಾಜೇಂದ್ರ ಸಿನ್ಹಾಜಿಯವರುಗಳು ಭಾರತದ ಪಡೆಗಳ ನೇತೃತ್ವ ವಹಿಸಿದ್ದರು.

ಹೀಗೆ 'ಆಪರೇಷನ್ ಪೋಲೊ' ೧೯೪೮ ಸೆಪ್ಟೆಂಬರ್ ೧೩ ರ ಬೆಳಗಿನ ಜಾವ ಆರಂಭವಾಯಿತು. ಹೈದ್ರಾಬಾದ ಸಂಸ್ಥಾನವನ್ನು ಭಾರತೀಯ ಪಡೆಗಳು ೧೨ ದಿಕ್ಕಿನಿಂದ ದಾಳಿ ನಡೆಸಿದವು. ಇವುಗಳಲ್ಲಿ ಔರಂಗಾಬಾದ ಗಡಿಯ ಮನಮಾಡ (ರೈಲ್ವೆ ನಿಲ್ದಾಣ) ಕಡೆಯಿಂದ, ಸೊಲ್ಲಾಪುರದ ನಳದುರ್ಗ ಹಾಗೂ ನಂಜ ಕಡೆಯಿಂದ, ತೆಲಗಾಂಣದ ಸೂರ್ಯಪೇಟೆ ಕಡೆಯಿಂದ, ಮಹಾರಾಷ್ಟ್ರ ನಾಗಪೂರ ಕಡೆಯಿಂದ, ಮದರಾಸು ಪ್ರಾಂತ್ಯದ ಹೊಸಪೇಟೆ ಮುನಿರಾಬಾದ ಕಡೆಯಿಂದ ಹಾಗೂ ಬೊಂಬಾಯಿ ಪ್ರಾಂತದ ಗದಗ ಕಡೆಯಿಂದ ನಡೆಸಿದ ದಾಳಿಗಳು ಅತ್ಯಂತ ತೀವ್ರವಾಗಿದ್ದವು ಮತ್ತು ಪರಿಣಾಮಕಾರಿಯಾಗಿದ್ದವು. ಮುನಿರಾಬಾದನಲ್ಲಿ ನಿಜಾಮನ ಪಡೆ ಭಾರತೀಯ ಪಡೆಗಳ ನಡುವೆ ೧೪ ಮತ್ತು ೧೫ ನೇ ಸೆಪ್ಟೆಂಬರ್ ೧೯೪೮ ರಂದು ಭೀಕರ ಕದನ ನಡೆಯಿತು. ರಜಾಕಾರರು 'ಛೋಟಾ ಪಾಕಿಸ್ತಾನ' ಎಂಬ ಹೆಸರಿನಿಂದ ಅಲ್ಲಿ ಬೃಹತ್ ಪ್ರಮಾಣದಲ್ಲಿ ಮದ್ದು ಗುಂಡು ಶೇಖರಿಸಿಟ್ಟಿದ್ದರು. ಅಲ್ಲಿ ರಜಾಕಾರರ ಒಂದು ತುಕುಡಿಯೇ ಇತ್ತು. ೧೬ ಸೆಪ್ಟೆಂಬರ್ ೧೯೪೮ ರಂದು ಆ ಮದ್ದಿನ ಉಗ್ರಾಣವನ್ನು ಗುರ್ಖಾ ರೆಜಿಮೆಂಟ್ ಸ್ಫೋಟಿಸಿತು. ನಿಜಾಮನ ಪಡೆದ ಸೈನಿಕರು ಜೀವ ಉಳಿಸಿಕೊಳ್ಳಲು ದಿಕ್ಕು ಪಾಲಾಗಿ ಓಡಿದರು. ೧೭ ನೇ ಸೆಪ್ಟೆಂಬರ್ ೧೯೪೮ ರಂದು ಲಿಯಾಕ ಅಲಿ ಸಚಿವ ಸಂಪುಟವು ತನ್ನ ರಾಜೀನಾಮೆ ನೀಡಿತು. ಎಲ್ಲಾ ರಾಷ್ಟ್ರೀಯ ನಾಯಕರುಗಳನ್ನು ಬಿಡುಗಡೆ ಮಾಡಲಾಯಿತು. ಹೈದ್ರಾಬಾದ ಪಡೆಗಳ ದಂಡನಾಯಕ ಮೇಜರ ಜನರಲ್ ಎಲ್. ಎಡ್ರೋಸರವರು ೧೮ ನೇ ಸೆಪ್ಟೆಂಬರ್ ೧೯೪೮ ರಂದು ಸಂಜೆ ೫ ಗಂಟೆಯಲ್ಲಿ ಭಾರತೀಯ ಪಡೆಗಳಿಗೆ

ಶರಣಾದರು. ಹೈದ್ರಾಬಾದ ಸಂಸ್ಥಾನವನ್ನು ಭಾರತ ಒಕ್ಕೂಟದೊಂದಿಗೆ ವಿಲೀನಗೊಳಿಸುವ ಒಡಂಬಡಿಕೆಗೆ ನಿಜಾಮನು ಸಹಿಹಾಕಿದನು. ಭಾರತೀಯ ಪಡೆಗಳು ಮಿಂಚಿನ ವೇಗದಲ್ಲಿ ದಾಳಿ ನಡೆಸಿ ಗುಲಾಮಗಿರಿಯಲ್ಲಿದ್ದ ಜನತೆಯನ್ನು ವಿಮೋಚನೆ ಗೊಳಿಸಿತು. ಸೆಪ್ಟೆಂಬರ್ ೧೯. ೧೯೪೮ ರಂದು ಖಾಸಿಂ ರಜ್ವಿಯನ್ನು ಬಂಧಿಸಲಾಯಿತು. ಆದರೆ ೭ ವರ್ಷಗಳ ಕಾರಾಗ್ರಹ ವಾಸದ ನಂತರ ಅವನು ಸರ್ಕಾರದ ಕಣ್ಣು ತಪ್ಪಿಸಿ ಪಾಕಿಸ್ತಾನಕ್ಕೆ ಓಡಿ ಹೋದನು. ೨೩ ನೇ ಸೆಪ್ಟೆಂಬರ್ ೧೯೪೮ ರಂದು ವಿಶ್ವ ಸಂಸ್ಥೆಗೆ ತಂತಿ ಸಂದೇಶ ನೀಡಿ ನಿಜಾಮನು ಹೈದ್ರಾಬಾದ ಮೊಕದ್ದಮೆಯನ್ನು ವಾಪಸ್ಸು ಪಡೆದು ವಿಚ್ಛಿದ್ರಕಾರಿ ಬೆಳವಣಿಗೆಗೆ ತೆರೆ ಎಳೆದನು. ಇದಾದ ತರುವಾಯ ಭಾರತ ಸರ್ಕಾರವು ಮೇಜರ ಜನರಲ್ ಜೆ.ಎನ್. ಚೌಧರಿಯವರನ್ನು ಹೊಸ ಹೈದ್ರಾಬಾದ ರಾಜ್ಯದ ಮಿಲಿಟರಿ ಗವರ್ನರಆಗಿ ನೇಮಿಸಲಾಯಿತು. ರಾಜ್ಯದಲ್ಲಿ ಕಾನೂನು ಹಾಗೂ ಸುವ್ಯವಸ್ಥೆಯನ್ನು ಸ್ಥಾಪಿಸಿ ಜವಾಬ್ದಾರಿ ಸರ್ಕಾರದ ರಚನೆಗೆ ಕ್ರಮ ಕೈಗೊಳ್ಳುವಂತೆ ಮಾಡಲಾಯಿತು. ಪೊಲೀಸ ಕಾರ್ಯಾಚರಣೆಗೆ ಆಜ್ಞೆ ಮಾಡಿ ಹೈದ್ರಾಬಾದ ಸಂಸ್ಥಾನವನ್ನು ವಿಮೋಚನೆಗೊಳಿಸಿದ ಸರದಾರ ಪಟೇಲರು ಇದನ್ನೆಲ್ಲಾ ನೋಡಲು ಬದುಕಲಿಲ್ಲ. ಭಾರತದ ಈ ಭಾಗದ ಜನತೆಯು ಇಂದಿಗೂ ಅವರನ್ನು ಭಾರತ ಒಕ್ಕೂಟದ ನಿರ್ಮಾತೃ ಎಂದು ಹಾಗೂ ಭಾರತದ ಅಖಂಡತೆಯ ರಕ್ಷಕನೆಂದು ಅವರನ್ನು ಗೌರವ ಹಾಗೂ ಪೂಜ್ಯ ಭಾವದಿಂದ ಇಂದಿಗೂ ಸ್ಮರಿಸುತ್ತಾರೆ.

ಅಡಿ ಟಿಪ್ಪಣಿಗಳು :

೧) ಗೋಪಾಲರಾವ ಹೆಜೀಬ್ ; ಹೈದ್ರಾಬಾದ ಮುಕ್ತಿ ಸಂಘರ್ಷ : ಬೆಂಗಳೂರು ೨೦೦೧ ಪುಟ ೧

೨) –ಅದೇ– ಪುಟ ೨

೩) –ಅದೇ– ಪುಟ ೨

೪) –ಅದೇ– ಪುಟ ೨

೫) –ಅದೇ– ಪುಟ ೩

ಅಧ್ಯಾಯ-೭

ಕರ್ನಾಟಕ ಏಕೀಕರಣ

೧. ಪೀಠಿಕೆ

೨. ದೇಶ ಭಕ್ತಿಗೀತೆಗಳ ಸ್ಫೂರ್ತಿ

೩. ಹೈದ್ರಾಬಾದ ಪ್ರದೇಶ ಕರ್ನಾಟಕ ಸಂಘ

೪. ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ ಹಾಗೂ ಕೆ.ಪಿ.ಸಿ.ಸಿ. ಸಭೆ

೫. ದಾವಣಗೆರೆಯಲ್ಲಿನ ಕೆ.ಪಿ.ಸಿ.ಸಿ. ಸಭೆ

೬. ರೈತ ಪರಿಷತ್ತು ಹಾಗೂ ಹೆಚ್.ಪಿ.ಕೆ. ಸಿ ಯ ಚಟುವಟಿಕೆಗಳು

೭. ಪೊಟ್ಟಿ ಶ್ರೀರಾಮೂಲು ರವರ ಅಮರಣಾಂತ ಉಪವಾಸ

೮. ನಾನಲ್‌ನಗರದ ಎ.ಪಿ.ಸಿ.ಸಿ. ನಿರ್ಣಯದ ವಿರುದ್ಧ ಪ್ರತಿಭಟನೆ

೯. ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಸಮಿತಿ.

೧೦. ಫಜಲ ಅಲಿ ಆಯೋಗ

೧೧. ಏಕೀಕರಣ ಧುರೀಣರ ಭೇಟಿ

೧೨. ಸಮುದಾಯವಾರು ಮನವಿ ಪತ್ರಗಳು

೧೩. ನವ ಮೈಸೂರಿನ ಉದಯ

೧೪. ರಾಜ್ಯಕ್ಕೆ ಮರುನಾಮಕರಣ

೧. ಪೀಠಿಕೆ :

ಕರ್ನಾಟಕ ಎಂಬುದು ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಗಳನ್ನು ಒಳಗೊಂಡಿರುವ ಅತ್ಯಂತ ಮಹತ್ವದ ಹಾಗೂ ವಿಶಾಲ ವ್ಯಾಪ್ತಿಯ ಪರಿಕಲ್ಪನೆಯಾಗಿದೆ. ಕರ್ನಾಟಕ ಎಂಬ ಶಬ್ದವು ಮಹಾ ಭಾರತದ ಸಭಾಪರ್ವ ಹಾಗೂ ಭೀಷ್ಮ ಪರ್ವಗಳಲ್ಲಿ ಕಂಡು ಬರುತ್ತದೆ. ಕದಂಬ ರಾಜ ಮನೆತನಕ್ಕೆ (ಕ್ರಿ.ಶ. ೪೫೦) ಸೇರಿದ ಒಂದು ತಾಮ್ರ ಪತ್ರದಲ್ಲಿ ಈ ನಾಡನ್ನು 'ಸಮಗ್ರ ಕರ್ನಾಟಕ ದೇಶ' ಎಂದು ವರ್ಣಿಸಲಾಗಿದೆ. ನೃಪತುಂಗನ ಕವಿರಾಜ ಮಾರ್ಗದಲ್ಲಿ 'ಕಿಸುವೊಳಲು' ಕೊಪ್ಪಣನಗರ, ಪುಲಿಗೇರಿ ಹಾಗೂ ಒಕ್ಕುಂದ ಎಂಬ ಹೆಸರುಗಳು ಬಂದಿವೆ. ಅಂದ ಮೇಲೆ ಇವೆಲ್ಲವು ಕರ್ನಾಟಕದ ಭಾಗಗಳಾಗಿವೆ. ಕರ್ನಾಟಕ ನಾಡು ಕಾವೇರಿಯಿಂದ ಗೋದಾವರಿಯ ವರೆಗೆ ಹಬ್ಬಿತು ಎನ್ನಲಾಗಿದೆ. ಇದಕ್ಕೆ ಸಂಬಂಧಿಸಿದ ಪಧ್ಯ ಹೀಗಿದೆ.

"ಕಾವೇರಿಯಿಂದ ಮಾಗೋ
ದಾವರಿಯವರ ಮಿರ್ದ ನಾಡದಾ ಕನ್ನಡದೊಳ್।
ಭಾವಿಸಿದ ಜನಪದಂ ವಸು
ಧಾವಲಯ ವಿಲೀನ ವಿಷಯ ವಿಶೇಷಂ"[1]

ನೃಪತುಂಗ ಕ್ರಿ.ಶ. (೮೧೪-೮೭೮)

ಇಂದಿನ ಕರ್ನಾಟಕ ರಾಜ್ಯವು ಅಂದು ಐದು ಆಡಳಿತ ವಿಭಾಗಗಳಲ್ಲಿ ಹಂಚಿಹೋಗಿತ್ತು ಮತ್ತು ೧೪ ಕ್ಕೂ ಮಿಕ್ಕ ದೇಶೀಯ ಸಂಸ್ಥಾನಗಳು ಅಲ್ಲಿದ್ದವು. ಈ ಐದು ಆಡಳಿತ ವಿಭಾಗಳೆಂದರೆ ಮದರಾಸು ಪ್ರಾಂತ, ಮೈಸೂರು ಪ್ರಾಂತ, ಬೊಂಬಾಯಿ ಪ್ರಾಂತ, ನಿಜಾಮ ಸಂಸ್ಥಾನ ಹಾಗೂ ಕೊಡಗು, ಹೀಗೆ ಕನ್ನಡ ನಾಡು ಹರಿದು ಹಂಚಿ ಹೋಗಿ ಕನ್ನಡಿಗರು ಅಲ್ಪಸಂಖ್ಯಾತರಾಗಿದ್ದರು. ಅದೊಂದು ಹರಿದ ಮನೆಯಾಗಿತ್ತು. ಕನ್ನಡ ಭಾಷೆ ಹಾಗೂ ಸಂಸ್ಕೃತಿ ಬೆಳವಣಿಗೆಗೆ ಸೌಹಾರ್ದಯುತ ವಾತಾವರಣೆ ಅಲ್ಲಿರಲಿಲ್ಲ. ಹೈದ್ರಾಬಾದ ಸಂಸ್ಥಾನದ ವಿಭಾಗವಾಗಿದ ಬೀದರ, ಗುಲ್ಬರ್ಗಾ ಹಾಗೂ ರಾಯಚೂರು ಜಿಲ್ಲೆಗಳು ರಾಜ್ಯದ ಆಡಳಿತ ಭಾಷೆಯಾಗಿದ್ದ ಉರ್ದುವಿನ ಪ್ರಭಾವದಿಂದ ನರಳುತ್ತಿದ್ದವು. ವಿಜಯನಗರ, ಹೊಯ್ಸಳ, ರಾಷ್ಟ್ರಕೂಟ, ಚಾಲುಕ್ಯ ಅರಸರು ಮನೆತನದಿಂದ ಹರಿದುಬಂದ ಕನ್ನಡ ಸಂಸ್ಕೃತಿಯ ಪಾವಿತ್ರ್ಯವನ್ನು ನಿಜಾಮ ಹಾಗೂ ರಜಾಕಾರರ ಕೋಮು ಮತಾಂಧತೆಯ ನೀತಿಯು ಹಾಳು ಮಾಡಿತು. ಕನ್ನಡ ಭಾಷೆ ಬೆಳೆಯಬೇಕು. ಅದು ಆಡಳಿತ ಹಾಗೂ ಶಿಕ್ಷಣದಲ್ಲಿ ಮಹತ್ವ ಸ್ಥಾನ ಪಡೆದುಕೊಳ್ಳಬೇಕೆಂಬುದು ಕನ್ನಡಿಗರ ಅಭಿಲಾಷೆಯಾಗಿತ್ತು. ಈ ಬಗೆಯ ಸನ್ನಿವೇಶದ ಜಾಗೃತಿಯು ಕನ್ನಡಿಗರಲ್ಲಿ ಒಗ್ಗಟ್ಟನ್ನು ಹಾಗೂ ರಾಜ್ಯದ ಬೇಡಿಕೆಯನ್ನು ಒತ್ತಾಯಿಸುವ ಮನೋಭಾವವನ್ನು ಬೆಳೆಸಿತು.

೧೮೮೦ ರಲ್ಲಿ ಡೆಪ್ಯೂಟಿ ಚನ್ನಬಸಪ್ಪನವರು ಬೊಂಬಾಯಿ ಕರ್ನಾಟಕದಲ್ಲಿ ಜನರನ್ನು ಸಂಘಟಿಸುವ ಆರಂಭದ ಪ್ರಯತ್ನ ಮಾಡಿದರು. ಆ ಭಾಗದ ಶಾಲೆಗಳಲ್ಲಿ ಕನ್ನಡವನ್ನು ಭೋದಿಸವಂತೆ ಒತ್ತಾಯಿಸಿ ಹೋರಾಟ ಮಾಡಿದರು. ಕರ್ನಾಟಕದ ವೈಭವದ ಪರಂಪರೆಯ ಪುನರದರ್ಶನವು ಪಶ್ಚಿಮಾತ್ಯ ವಿದ್ವಾಸರಾದ ಫ್ಲೀಟ್, ರೈಸ್, ಕಿಟೆಲ್, ಮುಂತಾದವರ ಆಚಾರ್ಯ ಕೃತಿಗಳಿಂದ ಸಾಧ್ಯವಾಯಿತು. ಸಾಂಸ್ಕೃತಿಕ ಸಂಸ್ಥೆಗಳಾಗಿದ್ದ ಧಾರವಾಡದ 'ಕರ್ನಾಟಕ ವಿದ್ಯಾವರ್ಧಕ ಸಂಘ' (೧೮೯೦) ಮತ್ತು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು (೧೯೧೫) ಗಳ ಕಾರ್ಯಗಳು ಹಾಗೂ ಮೈಸೂರು ವಿಶ್ವವಿದ್ಯಾಲಯವು ಕನ್ನಡಕ್ಕೆ ನೀಡಿದ ಪ್ರೋತ್ಸಾಹದಿಂದ ಅಖಂಡ ಕರ್ನಾಟಕ ರಚನೆಯ ಬೇಡಿಕೆಯು ಹೆಚ್ಚು ಜನ ಮನ್ನಣೆ ಗಳಿಸುವಂತಾಯಿತು.

೧೯೧೫ ಮೇ ೦೩, ೦೪ ಮತ್ತು ೦೫ ರಂದು ಬೆಂಗಳೂರಿನಲ್ಲಿ ನಡೆದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡಿಗರಿಗಾಗಿ ಪ್ರತ್ಯೇಕ ರಾಜ್ಯ ರಚಿಸುವಂತೆ ಒತ್ತಾಯಿಸಿ ನಿರ್ಣಯ ಅಂಗೀಕರಿಸಲಾಯಿತು.

ಮೈಸೂರಿನ ಹಿಂದಿನ ದಿವಾನರಾಗಿದ್ದ ವಿ.ಪಿ. ಮಾಧವರಾವರ ಅಧ್ಯಕ್ಷತೆಯಲ್ಲಿ ೧೯೨೦ ರಲ್ಲಿ ಧಾರವಾಡದಲ್ಲಿ ನಡೆದ ಪ್ರಥಮ ರಾಜಕೀಯ ಸಮಾವೇಶದಲ್ಲಿ ಕನ್ನಡಿಗರಿಗಾಗಿ ಪ್ರತ್ಯೇಕ ಪ್ರಾಂತ ರಚನೆಯನ್ನು ಒತ್ತಾಯಿಸಲಾಯಿತು. ಈ ಸಮಾವೇಶದಲ್ಲಿ ಅಂಗೀಕರಿಸಿದ ನಿರ್ಣಯಕ್ಕೆ ಅನುಗುಣವಾಗಿ ಕನ್ನಡ ಭಾಷೆಯ ಕಟ್ಟಾ ಅಭಿಯಾನಿಯಾಗಿದ್ದ ಕಡಪ ರಾಘವೇಂದ್ರರಾವರವರು ಹೈದ್ರಾಬಾದ ಕರ್ನಾಟಕ ಪ್ರದೇಶವು ಸೇರಿದಂತೆ ಇಡೀ ಪ್ರಾಂತದಲ್ಲೆಲ್ಲಾ ಸಂಚರಿಸಿದರು. ಅದೇ ವರ್ಷ ನಾಗಪೂರದಲ್ಲಿ ನಡೆದ ಎ.ಐ.ಸಿ.ಸಿ. ಅಧಿವೇಶನಕ್ಕೆ ೮೦೦ ಪ್ರತಿನಿಧಿಗಳ ತಂಡವನ್ನು ಕರೆದೊಯ್ದು ಭಾಷಾವಾರು ಪ್ರಾಂತ ರಚನೆಯನ್ನು ಒತ್ತಾಯಿಸಿದರು. ಈ ಅಧಿವೇಶನಕ್ಕೆ ಹುಮನಾಬಾದನ ತಾಲ್ಲೂಕಿನಿಂದಲ್ಲೂ ಕೆಲವು ಗಣ್ಯರು ಭಾವಹಿಸಿದರು. ಈ ಅಧಿವೇಶನದಲ್ಲಿ ಗಾಂಧೀಜಿಯವರ ಮಾರ್ಗದರ್ಶನದಂತೆ ದೇಶದ ಪ್ರಾಂತಿಯ ಸಂಸ್ಕೃತಿಯನ್ನು ಸಂವರ್ಧಿಸುವ ಸಲುವಾಗಿ ಹಾಗೂ ಸ್ವಾತಂತ್ರ ಚಳುವಳಿಯನ್ನು ತೀವ್ರಗೊಳಿಸುವ ಸಲುವಾಗಿ ಭಾಷಾವಾರು ಪ್ರಾಂತ ರಚನೆಯನ್ನು ತಾತ್ವಿಕವಾಗಿ ಕಾಂಗ್ರೇಸು ಒಪ್ಪಿಕೊಂಡಿತು. ಈ ನಿರ್ಣಯದ ಉದ್ದೇಶದ ಪ್ರಕಾರ ಕಾಂಗ್ರೆಸ ಸಮಿತಿಯನ್ನು ಪುನಃ ರಚಿಸಲಾಯಿತು. ಇಡೀ ದೇಶವನ್ನು ೨೧ ಭಾಷಾವಾರು ಪ್ರಾಂತಗಳಾಗಿ ವಿಂಗಡಿಸಲಾಯಿತು. ಅದರಂತೆ ಕರ್ನಾಟಕ ಪ್ರಾಂತ ಕಾಂಗ್ರೇಸ ಸಮಿತಿಯು (ಕೆ.ಪಿ.ಸಿ.ಸಿ.) ಅಸ್ತಿತ್ವಕ್ಕೆ ಬಂದಿತು. ಕರ್ನಾಟಕ ಏಕೀಕರಣ ಚಳುವಳಿಯ ಚರಿತ್ರೆಯಲ್ಲಿ ಇದೊಂದು ಮಹತ್ವದ ಮೈಲಿಗಲ್ಲಾಯಿತು.

೨) ದೇಶಭಕ್ತಿಗೀತೆಗಳಿಂದ ಸ್ಪೂರ್ತಿ.

ಅಖಂಡ ಕರ್ನಾಟಕದ ಕನಸನ್ನು ನನಸು ಮಾಡಲು ಹಾಗೂ ಕನ್ನಡಿಗರಿಗೆ ಸ್ಪೂರ್ತಿ ನೀಡಲು ಕೆಲಸ ಮಾಡಿದ ವಿವಿಧ ಪ್ರಾಂತಗಳಿಗೆ ಹಾಗೂ ದೇಶಿಯ ಸಂಸ್ಥಾನಗಳಿಗೆ ಸೇರಿದ ಪ್ರಮುಖ ಬರಹಗಾರರೆಂದರೆ ಬಿ.ಎಂ. ಶ್ರೀಕಂಠಯ್ಯ, ಬಿ. ಶಿವಮೂರ್ತಿಶಾಸ್ತ್ರಿ, ಕೆ.ವಿ. ಪುಟ್ಟಪ್ಪ. ದ.ರಾ. ಬೇಂದ್ರೆ, ಗೋವಿಂದ ಪೈ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಜೆ.ಪಿ. ರಾಜರತ್ನಂ, ಜಯದೇವಿತಾಯಿ ಲಿಗಾಡೆ, ಶಾಂತರಸ ಮುಂತಾದವರು. ಅಂದು ಕೇಳಿಬಂದ ಪ್ರಮುಖ ದೇಶ ಭಕ್ತಿಗೀತೆಗಳೆಂದರೆ[೨]

ಅ) ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು
ಬದುಕು ಬಲಹೀನ ನಿಧಿಯ ಸದಭಿಮಾನದ ಗೂಡು

ಹುಯಿಲಗೋಳ ನಾರಾಯಣರಾಯರು

ಆ) ಓತಾಯಿ ಕನ್ನಡದ ಹಿರಿತಾಯಿ.

ಇ) ಮೂಡುತಿದೆ ಐಕ್ಯೆಕ ಕರ್ನಾಟಕದ ಕನಸು
ನೋಡುತಿದೆ ನಿಡುಬಯಸಿ ನಿಖಿಲ ಕನ್ನಡ ಮನಸು

ಕೆ.ವಿ. ಪುಟ್ಟಪ್ಪ

ಈ) ಅಖಂಡ ಕರ್ನಾಟಕವೇ ನನ್ನ ಮನೆ
ಕನ್ನಡ ಕುಲುಮೆ ನನ್ನ ಕುಲ
ಕನ್ನಡ ಏಳ್ಗೆ ನನ್ನ ಏಳ್ಗೆ

ಜಯದೇವಿತಾಯಿ ಲಿಗಾಡೆ

ಅಖಂಡ ಕರ್ನಾಟಕಕ್ಕಾಗಿ ಹೋರಾಡುವಂತೆ ಜನರಿಗೆ ಜಾಗೃತಿ ಮೂಡಿಸುವಂತಹ ಕವನ ರಚಿಸುವಲ್ಲಿ ಸಾಹಿತಿ, ಕವಿಗಳು, ಒಂದೂ ಅವಕಾಶ ಕಳೆದುಕೊಳ್ಳಲಿಲ್ಲ. ಈ ದೇಶ ಭಕ್ತಿಗೀತೆಗಳಿಂದ ಸ್ಫೂರ್ತಿ ಪಡೆದ ಹೈದ್ರಾಬಾದ ಕರ್ನಾಟಕ ಪ್ರದೇಶದ ಸಾಹಿತಿಗಳಾದ ಡಿ.ಕೆ.ಭೀಮಸೇನರಾವ, ಕೀರ್ತನ ಕೇಸರಿ ಜಯರಾಮಚಾರ, ಬೆಟ್ಟದೂರು ಚನ್ನಬಸಪ್ಪಾ, ಶಾಂತರಸ, ಮಹಾಗಾಂವ ಶರಣಯ್ಯಾ ಸ್ವಾಮಿ ಮತ್ತು ಪಂಚಾಕ್ಷರಿ ಹಿರೇಮಠ ಮುಂತಾದವರು ನಿಜಾಮ ಕರ್ನಾಟಕ ಪ್ರಾಂತದಲ್ಲೆಲ್ಲಾ ಬಿರುಗಾಳಿಯಂತೆ ಸಂಚರಿಸಿ ವಿಶಾಲ ಕರ್ನಾಟಕ ರಚಿಸಲು ವಿಲೀನದ ಪರವಾಗಿ ಸಾರ್ವಜನಿಕರ ಅಭಿಪ್ರಾಯವನ್ನು ರೂಪಿಸಲು ತೊಡಗಿದರು.

ಘ) ಹೈದ್ರಾಬಾದ ಪ್ರದೇಶ ಕರ್ನಾಟಕ ಸಂಘ

ಹೈದ್ರಾಬಾದ ಕರ್ನಾಟಕ ಪ್ರದೇಶದ ಜನತೆಯ ಸಮಸ್ಯೆಗಳು ಭಾರತ ಒಕ್ಕೂಟದೊಳಗೆ ಹೈದ್ರಾಬಾದನ ವಿಲೀನದಿಂದ ಪೂರ್ತಿ ಪರಿಹಾರವಾಗಲಿಲ್ಲ. ವಿಲೀನದಿಂದ ಹೈದ್ರಾಬಾದ ಕರ್ನಾಟಕ ಪ್ರದೇಶದಿಂದ ಕನ್ನಡಿಗರಿಗೆ ಸಮಾಧಾನವಾಗಲಿಲ್ಲ. ಮುಸ್ಲಿಂ ಸರ್ವಾಧಿಕಾರದಿಂದ ಬಿಡುಗಡೆ ಪಡೆಯುವುದಕ್ಕಿಂತ ಹೊಸ ಕರ್ನಾಟಕ ಪ್ರಾಂತದಲ್ಲಿ

ಪ್ರತಿಷ್ಠಿತ ಸ್ಥಾನ ಪಡೆಯುವುದೇ ಈ ಭಾಗದ ಕನ್ನಡಿಗರ ಸಮಸ್ಯೆಯಾಗಿತ್ತು. ಕರ್ನಾಟಕದ ಉಳಿದ ಭಾಗದಲ್ಲಿದ್ದ ತಮ್ಮ ರಕ್ತ ಸಂಬಂಧಿಗಳ ಜೊತೆ ವಿಲೀನಗೊಳ್ಳದೇ ಹಾಗೂ ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳದೇ ಅವರು ಶಾಂತಿಯನ್ನು ಕಾಣುವಂತಿರಲಿಲ್ಲ. ಹೈದ್ರಾಬಾದ ಸಂಸ್ಥಾನದ ಕನ್ನಡಿಗರ ಸಾಮಾಜೀಕ, ಆರ್ಥಿಕ ಹಾಗೂ ರಾಜಕೀಯ ಸಂಸ್ಥೆಯಾಗಿದ್ದ ನಿಜಾಮ ಕರ್ನಾಟಕ ಪರಿಷತ್ತು ರಾಯಚೂರು, ಬೀದರ ಹಾಗೂ ಗುಲಬರ್ಗಾ ಜಿಲ್ಲೆಗಳಲ್ಲಿ ತಮ್ಮ ಸಾಂಸ್ಕೃತಿಕ ವಿಶಿಷ್ಟತೆಯನ್ನು ಕಳೆದುಕೊಳ್ಳುತ್ತಿದ್ದ ಕನ್ನಡಿಗರಲ್ಲಿ ಸ್ಫೂರ್ತಿ ತುಂಬಿ ಅಖಂಡ ಕರ್ನಾಟಕ ರಚನೆಗೆ ಹೃತ್ಪೂರ್ವಕ ಬೆಂಬಲ ನೀಡುವಂತೆ ಮಾಡುವಲ್ಲಿ ಶ್ರಮಿಸುತ್ತಿತ್ತು.

ಈ ಪರಿಷತ್‌ನ ಸಮ್ಮೇಳನಗಳು ೧೯೩೭ ರಲ್ಲಿ ಹೈದ್ರಾಬಾದ, ೧೯೪೦ ರಲ್ಲಿ ಬೀದರ ಮತ್ತು ೧೯೪೨ ರಲ್ಲಿ ಶೋರಾಪೂರ, ಯಾದಗಿರಿ ಮತ್ತು ರಾಯಚೂರುಗಳಲ್ಲಿ ಕ್ರಮವಾಗಿ ಪಿ. ಕಿಶನರಾವ, ಜನಾರ್ದನರಾವ, ದೇಸಾಯಿ, ಅಣ್ಣಾರಾವ ಗಣಮುಖಿ ಹಾಗೂ ಹನುಮಂತರಾವ ಕಕ್ಕೇರಿಯವರುಗಳ ಅಧ್ಯಕ್ಷತೆಗಳಲ್ಲಿ ಜರುಗಿದವು. ಈ ಸಭೆಗೆ ಹುಮನಾಬಾದನ ರಾಮಚಂದ್ರ ವೀರಪ್ಪಾ ಮತ್ತು ಆರ್.ವಿ. ಬಿಡಪನವರು ಭಾಗವಹಿಸಿದರು. ನಿಜಾಮ ಕರ್ನಾಟಕ ಪರಿಷತ್‌ನ ಚಟುವಟಿಕೆಗಳು ಕನ್ನಡಿಗರನ್ನೆಲ್ಲಾ ಒಂದೇ ವೇದಿಕೆಯಡಿಯಲ್ಲಿ ತಂದಿತು. ಇದು ಕನ್ನಡಿಗರಲ್ಲಿ ಏಕತೆ ಭಾವನೆಯನ್ನು ಹಾಗೂ ಆತ್ಮ ವಿಶ್ವಾಸವನ್ನು ಮೂಡಿಸಿತು. ಪೋಲೀಸ ಕಾರ್ಯಾಚರಣೆಗೆ ಮುನ್ನ ಹಿಂದುಗಳ ಮೇಲೆ ರಜಾಕಾರರು ಮಾಡಿದ ಅತ್ಯಾಚಾರಗಳು ಎಷ್ಟು ಕ್ರೂರವಾಗಿದ್ದವೆಂದರೆ ಭಾಷಾವಾರು ಪ್ರಾಂತ ರಚನೆಯ ಚಳುವಳಿಗೆ ಹಿಂದುಗಳೆಲ್ಲಾ ಬೆಂಬಲ ನೀಡುವಂತೆ ಕಣ್ತೆರೆಸಿದವು.

೪) ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ ಹಾಗೂ ಕೆ.ಪಿ.ಸಿ.ಸಿ. ಸಭೆ :

ಹೈದ್ರಾಬಾದ ಸಂಸ್ಥಾನವನ್ನು ಭಾರತ ಒಕ್ಕೂಟದೊಂದಿಗೆ ವಿಲೀನಗೊಳಿಸಿದ ಸೆಪ್ಟೆಂಬರ್ ೧೯೪೮ ರ ನಂತರ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಕಾರ್ಯಕರ್ತರ ಶ್ರಮದಿಂದಾಗಿ ಭಾಷಾವಾರು ಪ್ರಾಂತ ರಚನೆಯನ್ನು ಒತ್ತಾಯಿಸುವ ಚಳುವಳಿ ತೀವ್ರಗೊಂಡಿತು. ಗುಲಬರ್ಗಾದಲ್ಲಿ ೧೯೪೯ ಮಾರ್ಚ ೫,೬ ಹಾಗೂ ೭ ರಂದು ೩೨ ನೇ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವು ಶ್ರೀ ಶರಣಬಸವೇಶ್ವರ ದೇವಾಲಯದ ಆವರಣದಲ್ಲಿ ಉತ್ತಂಗಿ ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಹೈದ್ರಾಬಾದ-ಕರ್ನಾಟಕದ ಕನ್ನಡಿಗರ ಹಿತಾಸಕ್ತಿಗಳನ್ನು ಅವರ ಗತ ವೈಭವವನ್ನು ಕಾಯ್ದುಕೊಳ್ಳುವಲ್ಲಿ ಹಾಗೂ ಭಾಷೆಯ ಬೆಳವಣಿಗೆ ದೃಷ್ಟಿಯಿಂದ ಇದೊಂದು ಮೈಲಿಗಲ್ಲಾಗಿದೆ.

ಅತ್ಯಂತ ಸ್ಫೂರ್ತಿ ಹಾಗೂ ಭಾವುಕ ವಾತಾವರಣದಲ್ಲಿ ನಡೆದ ಈ ಸಮ್ಮೇಳನದಲ್ಲಿ ಪೂಜ್ಯ ದೊಡ್ಡಪ್ಪ ಅಪ್ಪ, ಸ್ವಾಮಿ ರಮಾನಂದ ತೀರ್ಥ, ಎಸ್. ನಿಜಲಿಂಗಪ್ಪ, ಆರ್.ವಿ. ಬಿಡಪ್ಪ, ರಾಮಚಂದ್ರ ವೀರಪ್ಪ, ಜಯದೇವಿ ಲಿಗಾಡೆ, ಚನ್ನಬಸವ ಪಟ್ಟದೇವರು,ಚಂದ್ರಶೇಖರ ಮುಂತಾದ ಸಾಹಿತಿಗಳು, ಕವಿಗಳು, ಸಾಮಾಜಿಕ ರಾಜಕೀಯ ಕಾರ್ಯಕರ್ತರು ಭಾಗವಹಿಸಿದರು. ಸ್ವಾಮಿ ರಮಾನಂದ ತೀರ್ಥರವರ ಮಾರ್ಗದರ್ಶನದಂತೆ ರಾಜಕೀಯ ಕಾರ್ಯಕರ್ತರಾದ ಚಂದ್ರಶೇಖರ ಪಾಟೀಲ, ಸರದಾರ ಶರಣಗೌಡ ಇನಾಮದಾರ, ಮಹಾದೇವಪ್ಪಾ ರಾಂಪುರೆ, ಹುಮನಾಬಾದನ ಆರ್.ವಿ. ಬಿಡಪ, ರಾಮಚಂದ್ರ ವೀರಪ್ಪ ಮುಂತಾದವರು ಹೈದ್ರಾಬಾದ ಕರ್ನಾಟಕ ಪ್ರದೇಶವನ್ನೆಲ್ಲಾ ಸಂಚರಿಸಿ ಅತ್ಯಂತ ಉತ್ಸಾಹದಿಂದ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಹಾಗೂ ದೇಣಿಗೆಯನ್ನು ಸಂಗ್ರಹಿಸಿದರು. ಸಮ್ಮೇಳನದ ಸಂದೇಶವನ್ನು ಜನರಿಗೆ ತಲುಪಿಸಲು ಇವರೆಲ್ಲರು ಸಮ್ಮೇಳನದಲ್ಲಿ ಕ್ರಿಯಾಶೀಲರಾಗಿ ಕೆಲಸ ಮಾಡಿದರು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಉತ್ತಂಗಿ ಚನ್ನಪ್ಪನವರು ಹೀಗೆ ನುಡಿದರು.

"ಈ ಸಮ್ಮೇಳನದಲ್ಲಿ ಹೈದ್ರಾಬಾದ ಕರ್ನಾಟಕದ ಜನತೆಯು ೧೯೪೭-೪೮ ರ ಸಾಲೀನಲ್ಲಿ ರಜಾಕಾರರ ವಿರುದ್ಧ ನಡೆಸಿದ ಹೋರಾಟದಲ್ಲಿ ಕರ್ನಾಟಕದ ಉಳಿದ ಭಾಗದ ಜನತೆ ನೀಡಿದ ಸಹಕಾರವನ್ನು ಅತ್ಯಂತ ಗೌರವದಿಂದ ಸ್ಮರಿಸುತ್ತದೆ. ಈ ಅಂಶವೇ ಹೈದ್ರಾಬಾದ ಕರ್ನಾಟಕ ಹಾಗೂ ಉಳಿದ ಕರ್ನಾಟಕದ ಭಾಗದ ಜನತೆಯ ನಡುವೆ ಪ್ರೀತಿ ವಿಶ್ವಾಸವನ್ನು ಬೆಳೆಸಿತು. ಈ ಬೆಳವಣಿಗೆಯು ಮುಂದೆ ಅಪಾರ ಶ್ರಮದಿಂದ ಹಾಗೂ ಧೃಢನಿಶ್ಚಯದಿಂದ ರಾಜ್ಯದ ಏಕೀಕರಣಕ್ಕೆ ನಡೆಸಿದ ಚಳುವಳಿಗೆ ನಾಂದಿಯಾಯಿತು."[೩]

ಸಮ್ಮೇಳನದ ನಿರ್ಣಯಗಳು:

- ಹೈದ್ರಾಬಾದ ಸಂಸ್ಥಾನದ ಪದಚ್ಯುತ ನಿಜಾಮ ಮೀರ ಉಸ್ಮಾನ ಅಲಿಖಾನನನ್ನು ರಾಜ ಪ್ರಮುಖನನ್ನಾಗಿಯಾಗಲಿ, ಅಥವಾ ಯಾವುದಾದರು ರಾಜ್ಯ ಗೌರ್ವನರ್ ಆಗಿ ನೇಮಿಸುವ ಸರಕಾರದ ಕ್ರಮವನ್ನು ವಿರೋಧಿಸುವಂತೆ ಸಮ್ಮೇಳನ ನಿರ್ಣಯ ಅಂಗೀಕರಿಸಿರು. ನಿಜಾಮನ ಕ್ರೂರ ದಬ್ಬಾಳಿಕೆಯ ವಿರುದ್ಧ ಹೋರಾಡಿ ಸ್ವಾತಂತ್ರ ಹೋರಾಟಗಾರರು ತಮ್ಮ ಪ್ರಾಣವನ್ನೇ ಬಲಿದಾನ ಕೊಟ್ಟಿದ್ದಾರೆ. ಇಂತಹ ವ್ಯಕ್ತಿಗಳನ್ನು ರಾಜ ಪ್ರಮುಖರನ್ನಾಗಿ ನೇಮಿಸಿದರೆ ಜನರ ಭಾವನೆಗೆ ಧಕ್ಕೆ ಉಂಟಾಗುತ್ತದೆ ಎಂದು ಈ ಸಮ್ಮೇಳನ ಭಾವಿಸುತ್ತದೆ ಎಂದು ನಿರ್ಣಯ ಅಂಗೀಕರಿಸಲಾಯಿತು.

- ಕನ್ನಡ ಶಾಲೆಗಳನ್ನು ತೆರೆಯುವಂತೆ ಸಮ್ಮೇಳನವು ಸರಕಾರವನ್ನು ಒತ್ತಾಯಿಸಿತು.
- ಹೈದ್ರಾಬಾದ ಸಂಸ್ಥಾನವನ್ನು ವಿಭಜಿಸಿ ಕನ್ನಡ ಮಾತನಾಡುವ ಪ್ರದೇಶವನ್ನು ಕರ್ನಾಟಕದಲ್ಲಿ ವಿಲೀನಗೊಳಿಸಬೇಕೆಂದು ಸಮ್ಮೇಳನವು ಒತ್ತಾಯಿಸಿತು.

೫) ದಾವಣಗೆರೆಯಲ್ಲಿನ ಕೆ.ಪಿ.ಸಿ.ಸಿ. ಸಭೆ

ಈ ಎಲ್ಲಾ ಬೆಳವಣಿಗೆಯ ಹಿನ್ನಲೆಯಲ್ಲಿ ಹಾಗೂ ಕರ್ನಾಟಕದ ಈ ಭಾಗದ ಜನತೆಯ ಉತ್ಸಾಹ ಹಾಗೂ ಕಟ್ಟಾ ಅಭಿಮಾನವನ್ನು ಮನಗಂಡು ಅಂದು ಕೆ.ಪಿ.ಸಿ.ಸಿ. ಯ ಹಾಗೂ ಕರ್ನಾಟಕ ಏಕೀಕರಣ ಮಹಾ ಸಮಿತಿಯ ಅಧ್ಯಕ್ಷರಾಗಿದ್ದ ಎಸ್. ನಿಜಲಿಂಗಪ್ಪ ರವರು ನವೆಂಬರ್ ೧೯೪೯ ರಲ್ಲಿ ದಾವಣಗೆರೆಯಲ್ಲಿ ಕೆ.ಪಿ.ಸಿ.ಸಿ. ಸಭೆಯನ್ನು ಕರೆದರು. ಕರ್ನಾಟಕದ ಎಲ್ಲಾ ಭಾಗದಿಂದ ಮೈಸೂರು ಹಾಗೂ ಹೈದ್ರಾಬಾದ ಸಂಸ್ಥಾನವನ್ನು ಸೇರಿಸಿಕೊಂಡು ಜನತೆಯು ಆ ಸಭೆಯಲ್ಲಿ ಭಾಗವಹಿಸಿತು. ಆ ಸಭೆಯಲ್ಲಿ ಕೆಳಕಂಡ ನಿರ್ಣಯವನ್ನು ಕೈಗೊಳ್ಳಲಾಯಿತು.

"ಮೈಸೂರು ಮಹಾರಾಜರನ್ನು ಸಂವಿಧಾನಾತ್ಮಕ ಮುಖ್ಯಸ್ಥರನ್ನಾಗಿ ಮಾಡಿ ಮೈಸೂರು ಪ್ರದೇಶದೊಳಗೆ ಹೈದ್ರಾಬಾದ ಕರ್ನಾಟಕ ಪ್ರದೇಶವನ್ನು ವಿಲೀನಗೊಳಿಸಿ ಅಖಂಡ ಕರ್ನಾಟಕ ರಚಿಸಬೇಕೆಂದು ಈ ಸಮ್ಮೇಳನ ಒತ್ತಾಯಿಸುತ್ತದೆ."[೪]

೬) ರೈತ ಪರಿಷತ್ತು ಹಾಗೂ ಹೆಚ್.ಪಿ.ಕೆ.ಸಿ. ಯ ಚಟುವಟಿಕೆಗಳು:

ದಾವಣಗೆರೆಯಲ್ಲಿ ನಡೆದ ಕೆ.ಪಿ.ಸಿ.ಸಿ. ಸಭೆಯ ನಿರ್ಣಯದಿಂದ ಉತ್ಸಾಹಿತರಾಗಿ ೧೯೪೯ ರಲ್ಲಿ ಮುನಿರಾಬಾದನಲ್ಲಿ ಬೈಲ್‌ಹೊಂಗಲದ ತಾಳೂರು ರಾಯನಗೌಡ ಪಾಟೀಲರ ಅಧ್ಯಕ್ಷತೆಯಲ್ಲಿ ನಡೆದ ಕೊಪ್ಪಳನಾಡಿನ ಪ್ರಥಮ ರೈತ ಪರಿಷತ್ತಿನ ಸಭೆಯಲ್ಲಿ ವಿಶಾಲ ಕರ್ನಾಟಕದೊಳಗೆ ಹೈದ್ರಾಬಾದ ಕರ್ನಾಟಕವನ್ನು ವಿಲೀನ ಗೊಳಿಸುವ ಕ್ರಮಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿತು. ಇಲ್ಲಿ ನೆನಪಿಸಿಕೊಳ್ಳಬೇಕಾದ ಇನ್ನೊಂದು ಘಟನೆ ಎಂದರೆ ಶಿರೂರು ವೀರಭದ್ರಪ್ಪನವರ ಅಧ್ಯಕ್ಷತೆಯಲ್ಲಿ ೧೨-೧೨-೧೯೪೮ ರಂದು ಕುದುರೆ ಮೋತಿಯಲ್ಲಿ ನಡೆದ ಯಲಬುರ್ಗಾ ತಾಲ್ಲೂಕು ರೈತ ಪರಿಷತ್‌ನ ಪ್ರಥಮ ಸಮ್ಮೇಳನದಲ್ಲೂ ಹೈದ್ರಾಬಾದ ಸಂಸ್ಥಾನವನ್ನು ವಿಭಜಿಸಿ ಭಾಷಾವಾರು ಪ್ರಾಂತಗಳನ್ನು ರಚಿಸಲು ಅನುವು ಮಾಡಿಕೊಡಬೇಕೆಂದು ನಿರ್ಣಯ ಅಂಗೀಕರಿಸಲಾಯಿತು.

ಈ ಮಧ್ಯೆ ಜನಾರ್ಧನ ದೇಸಾಯಿಯವರು ನವೆಂಬರ ೧೯೫೦ ರಂದು ಗುಲಬರ್ಗಾ ಜಿಲ್ಲೆಯ ತಾಡೂರಿನಲ್ಲಿ ಹೈದ್ರಾಬಾದ ಪ್ರದೇಶ ಕರ್ನಾಟಕ ಕಾಂಗ್ರೆಸ ಸಮಿತಿಯ ಸಭೆ ಕರೆದು ಕನ್ನಡ ಮಾತನಾಡುವವರಿಗಾಗಿ ಪ್ರತ್ಯೇಕ ಪ್ರಾಂತ ರಚನೆಗಾಗಿ ಚಳುವಳಿ ಪ್ರಾರಂಭಿಸಲು ನಿರ್ಧರಿಸಲಾಯಿತು. ಈ ಉದ್ದೇಶಕ್ಕಾಗಿ ಹೆಚ್.ಪಿ.ಕೆ.ಸಿ.ಯು ಒಂದು ಕ್ರಿಯಾ ಸಮಿತಿಯನ್ನು ರಚಿಸಿ ರಾಯಚೂರು ಜಿಲ್ಲೆಯ ಶಿವಮೂರ್ತಿ ಸ್ವಾಮಿ ಅಳವಂಡಿ, ಗುಲಬರ್ಗಾ ಜಿಲ್ಲೆಯ ಸರದಾರ ಶರಣಗೌಡ ಇನಾಮದಾರ ಹಾಗೂ ಬೀದರ ಜಿಲ್ಲೆಯಿಂದ ಚಿಟಗುಪ್ಪದ ಆರ್.ವಿ. ಬಿಡಪ ರವರುಗಳನ್ನು ಸದಸ್ಯರನ್ನಾಗಿ ನೇಮಿಸಿತು. ಈ ಕ್ರಿಯಾ ಸಮಿತಿಯು ಇಡೀ ಹೈದ್ರಾಬಾದ ಕರ್ನಾಟಕ ಪ್ರದೇಶವನ್ನೆಲ್ಲಾ ಸಂಚರಿಸಿ ತಾಲ್ಲೂಕು ಮಟ್ಟದಲ್ಲಿ ಕರ್ನಾಟಕ ಏಕೀಕರಣ ಸಮಿತಿಗಳನ್ನು ರಚಿಸಿ ಏಕೀಕರಣಕ್ಕೆ ಜನರ ಬೆಂಬಲ ಸಿಗುವಂತೆ ಮಾಡಿದರು.

೭) ಪೊಟ್ಟಿ ಶ್ರೀರಾಮೂಲು ರವರ ಅಮರಣಾಂತ ಉಪವಾಸ :

೧೯೫೨ ರ ಪ್ರಥಮ ಮಹಾಚುನಾವಣೆ ನಂತರ ಕಾಂಗ್ರೆಸ ಬ್ರಹತ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಮೇಲೆ ಭಾಷಾವಾರು ಪ್ರಾಂತಗಳನ್ನು ರಚಿಸುವ ದಿಶೆಯಲ್ಲಿ ಏನೇನು ಕ್ರಮ ತೆಗೆದುಕೊಳ್ಳಲಿಲ್ಲ. ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಆರಿಸಿ ಬಂದಿದ್ದ ಶಿವಮೂರ್ತಿ ಸ್ವಾಮಿ ಅಳವಂಡಿಯವರು ೧೯೫೨ ರಲ್ಲಿ ಪಶ್ಚಿಮ ಬಂಗಾಳ ಹಾಗೂ ಪಂಜಾಬಗಳಲ್ಲಿ ನಡೆದ ಅಖಿಲಭಾರತ ಭಾಷಾವಾರು ಸಮ್ಮೇಳನ ಕಾರ್ಯದರ್ಶಿಗಳಾಗಿದ್ದರು. ದೇಶದ ಅಖಂಡತೆಯನ್ನು ಹಾಗೂ ಪ್ರಜಾಪ್ರಭುತ್ವವನ್ನು ರಕ್ಷಿಸುವ ಸಲುವಾಗಿ ತಡಮಾಡದೇ ಭಾಷಾವಾರು ಪ್ರಾಂತಗಳನ್ನು ರಚಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಜವಾಹರಲಾಲ ನೆಹರುರವರನ್ನು ಒತ್ತಾಯಿಸಿ ಲೋಕಸಭೆಯಲ್ಲಿ ಈ ಕುರಿತು ಒಂದು ಖಾಸಗಿ ನಿರ್ಣಯವನ್ನು ಮಂಡಿಸಿದರು. ಕಾಂಗ್ರೇಸ್ ಪಕ್ಷವು ತನ್ನ ಸದಸ್ಯರಿಗೆ ಕಟ್ಟಾಜ್ಞೆ ವಿಧಿಸಿದ್ದರಿಂದ ನಿರ್ಣಯವು ಲೋಕಸಭೆಯಲ್ಲಿ ಬಿದ್ದುಹೋಯಿತು. ಈ ಘಟನೆಯ ನಂತರ ಕೆ.ಪಿ.ಸಿ.ಸಿ. ಯ ಅಧ್ಯಕ್ಷ ಎಸ್. ನಿಜಲಿಂಗಪ್ಪ ಹಾಗೂ ಕರ್ನಾಟಕ ಏಕೀಕರಣ ಮಹಾಸಭಾದ ಅಧ್ಯಕ್ಷ ಹೊಸಮನಿ ಸಿದ್ದಪ್ಪನವರು ಮೈಸೂರು, ಮದ್ರಾಸು, ಬೊಂಬಾಯಿ ಹಾಗೂ ಹೈದ್ರಾಬಾದ ರಾಜ್ಯಗಳ ವಿಧಾನಸಭಾ ಸದಸ್ಯರಿಗೆ ಹಾಗೂ ಲೋಕಸಭಾ ಸದಸ್ಯರುಗಳಿಗೆ ರಾಜೀನಾಮೆ ನೀಡಿ ಭಾಷಾವಾರು ಪ್ರಾಂತ ರಚನೆಯ ನೀತಿಯನ್ನು ಸರಕಾರ ಅನುಸರಿಸುವಂತೆ ಒತ್ತಡ ತರಬೇಕೆಂದು ಕರೆ ನೀಡಿದರು.

ಏತನ್ಮಧ್ಯೆ ಪ್ರತ್ಯೇಕ ಆಂಧ್ರ ರಾಜ್ಯವನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿ ೧೯ ನೇ ಅಕ್ಟೋಬರ್ ೧೯೫೨ ರಂದು ಪೊಟ್ಟಿ ಶ್ರೀರಾಮಲು ರವರು ಅಮರಣಾಂತ ಉಪವಾಸ ಪ್ರಾರಂಭಿಸಿದರು. ಅವರು ೫೮ ದಿನಗಳ ಉಪವಾಸ ಮುಷ್ಕರದ ನಂತರ ೧೫ ನೇ ಡಿಸೆಂಬರ್ ೧೯೫೨ ರಂದು ಅಸುನೀಗಿದರು. ಇದಾದನಂತರ ಆಂಧ್ರಾದ್ಯಂತ ಘರ್ಷಣೆಗಳು ಉಂಟಾಗಿ ಸರಕಾರದ ಆಸ್ತಿ ಪಾಸ್ತಿಗೆ ಹಾನಿ ಉಂಟಾಯಿತು. ಇದಾದಮೇಲೆ ೧೯ ನೇ ಡಿಸೆಂಬರ್ ೧೯೫೨ ರಂದು ಪ್ರಧಾನ ಮಂತ್ರಿ ನೆಹರುವರು ಸಂಸತ್ತಿನಲ್ಲಿ ಆಂಧ್ರರಾಜ್ಯ ಸ್ಥಾಪನೆಯ ಸರಕಾರದ ನಿರ್ಧಾರವನ್ನು ಪ್ರಕಟಿಸಿದರು. ಈ ಘೋಷಣೆಯು ಕನ್ನಡಿಗರಲ್ಲಿ ಹೊಸ ಆಸೆ ಮೂಡಿಸಿತು.

೮) ನಾನಲ್‌ನಗರದ ವಿ.ಪಿ.ಸಿ.ಸಿ. ನಿರ್ಣಯದ ವಿರುದ್ಧ ಪ್ರತಿಭಟನೆ :

ಇಲ್ಲಿ ನಾವು ಗಮನಿಸಬೇಕಾದ ಸಂಗತಿಯೆಂದರೆ ೧೨ ನೇ ಸೆಪ್ಟೆಂಬರ್ ೧೯೫೩ ರಂದು ಹೈದ್ರಾಬಾದನ ನಾನಲ್ ನಗರದಲ್ಲಿ ನಡೆದ ವಿ.ಪಿ.ಸಿ.ಸಿ. ಅಧಿವೇಶನದಲ್ಲಿ 'ಸಧ್ಯಕ್ಕೆ ಆಂಧ್ರ ರಾಜ್ಯವನ್ನು ಬಿಟ್ಟು ಬೇರೆ ಯಾವ ಭಾಷಾವಾರು ಪ್ರಾಂತಗಳನ್ನು ರಚಿಸುವುದಿಲ್ಲ'[೫] ಎಂಬ ನಿರ್ಣಯವನ್ನು ಅಂಗೀಕರಿಸಲಾಯಿತು. ನಾನಲ್ ನಗರದ ನಿರ್ಣಯದ ಬಗ್ಗೆ ಕರ್ನಾಟಕದಲ್ಲಿ ವ್ಯಾಪಕ ಅಸಮಾಧಾನ ವ್ಯಕ್ತವಾಯಿತು. ನಾನಲ್ ನಗರದ ನಿರ್ಣಯವನ್ನು ಪ್ರತಿಭಟಿಸಲು ೧೯೫೩ ರಲ್ಲಿ ದಾವಣಗೆರೆಯಲ್ಲಿ ಸರ್ವಪಕ್ಷಗಳ ಒಂದು ಸಭೆಯನ್ನು ಸೇರಿಸಲಾಯಿತು. ಈ ಸಮಾವೇಶದಲ್ಲಿ ಶಿವಮೂರ್ತಿ ಸ್ವಾಮಿ ಅಳವಂಡಿಯವರನ್ನು ಅಖಂಡ ಕರ್ನಾಟಕ ಕರ್ನಾಟಕ ರಾಜ್ಯ ನಿರ್ಮಾಣ ಸಮಿತಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ನಾನಲ ನಗರದ ನಿರ್ಣಯವನ್ನು ತಿರಸ್ಕರಿಸುವಂತೆ ಸಮಿತಿಯು ಸರಕಾರವನ್ನು ಒತ್ತಾಯಿಸಿತು. ಭಾಷಾವಾರು ಪ್ರಾಂತಗಳ ರಚನೆಗೆ ಗಡಿ ಆಯೋಗವನ್ನು ರಚಿಸುವಂತೆ ಕರೆ ನೀಡಿತು.

ಹೈದ್ರಾಬಾದ ಕರ್ನಾಟಕದ ವಿಧಾನಸಭಾ ಸದಸ್ಯ ಹಾಗೂ ಲೋಕಸಭಾ ಸದಸ್ಯರುಗಳಾಗಿದ್ದ ಸ್ವಾಮಿ ರಮಾನಂದ ತೀರ್ಥ, ಜಗನ್ನಾಥರಾವ ಚಂದ್ರಿಕಿ, ಅಣ್ಣಾರಾವ ಗಣಮುಖಿ, ವೀರೇಂದ್ರ ಪಾಟೀಲ್, ಚಂದ್ರಶೇಖರ ಪಾಟೀಲ್ ಮುಂತಾದವರು ನಾನಲ್ ನಗರದ ನಿರ್ಣಯಕ್ಕೆ ತಮ್ಮ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದರು. ಹೀಗೆ ಕರ್ನಾಟಕದಲ್ಲಿ ಏಕೀಕರಣ ಚಳುವಳಿಯು ತೀವ್ರತೆ ಗಳಿಸಿಕೊಂಡಿತು.

೯) ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಸಮಿತಿ :

೧೯೫೩ ಆಗಸ್ಟನಲ್ಲಿ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಸಮಿತಿಯು ಕರ್ನಾಟಕ ಏಕೀಕರಣ ಚಳುವಳಿಯನ್ನು ಚುರುಕು ಗೊಳಿಸಿತು. ಕೆ.ಪಿ.ಸಿ.ಸಿ.ಯ ಅಧ್ಯಕ್ಷ ಎಸ್. ನಿಜಲಿಂಗಪ್ಪ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಸಮಿತಿಯ ಅಧ್ಯಕ್ಷ ಶಿವಮೂರ್ತಿಸ್ವಾಮಿ ಅಳವಂಡಿ, ಹೆಚ್.ಪಿ.ಸಿ.ಸಿ.ಯ ಧುರೀಣರಾದ ಸ್ವಾಮಿ ರಮಾನಂದ ತೀರ್ಥ, ಗುಲಬರ್ಗಾದ ಲೋಕಸಭಾ ಸದಸ್ಯರು ಮೊದಲಾದವರು ೧೪ ನೇ ಸೆಪ್ಟೆಂಬರ್ ೧೯೫೩ ರಂದು ನೆಹರುರವರನ್ನು ಭೇಟಿ ಮಾಡಿ ಕರ್ನಾಟದಲ್ಲಿನ ಗಂಭೀರ ಪರಿಸ್ಥಿತಿಯನ್ನು ವಿವರಿಸಿದರು. ಅಂದು ನಡೆದ ಉಪಚುನಾವಣೆಯಲ್ಲಿ ಕಾಂಗ್ರೇಸ್ ಅಭ್ಯರ್ಥಿಗಳು ಅಖಿಲ ಕರ್ನಾಟಕ ಏಕೀಕರಣದ ಸದಸ್ಯರ ಎದುರು ಸೋತುದರ ಕಾರಣಗಳನ್ನು ವಿವರಿಸಿದರು. ಗಡಿ ಆಯೋಗದ ನೇಮಕವನ್ನು ವಿಳಂಬ ಮಾಡಿದರೆ ಕಾಂಗ್ರೆಸ ಪಕ್ಷ ರಾಜ್ಯದಲ್ಲಿ ಅಳಿಸಿ ಹೋಗುತ್ತದೆ ಎಂದು ವಾದಿಸಿದರು. ಏಕೀಕರಣ ಸಮಿತಿಯ ಅಭ್ಯರ್ಥಿಗಳಾದ ಸಿದ್ದಪ್ಪಾ ಕಂಬಳಿ ಹಾಗೂ ಪೂಜಾರವರು ರೋಣ ಮತ್ತು ಹುಬ್ಬಳ್ಳಿಗಳಲ್ಲಿ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೇಸ ಅಭ್ಯರ್ಥಿಗಳನ್ನು ಸೋಲಿಸಿ ಆಯ್ಕೆಗೊಂಡರು. ರೋಣ ಕ್ಷೇತ್ರದಲ್ಲಿ ಬೊಂಬಾಯಿ ಕರ್ನಾಟಕದ ಖ್ಯಾತ ಕಾಂಗ್ರೇಸ್ ಕಾರ್ಯಕರ್ತರಾಗಿದ್ದ ಅಂದಾನಪ್ಪಾ ದೊಡ್ಡ ಮೇಟಿಯವರ ಸೋಲು ರಾಜ್ಯ ಕಾಂಗ್ರೇಸ್ ಧುರೀಣರಿಗೆ ಆಘಾತ ಉಂಟುಮಾಡಿತು.

ಕರ್ನಾಟಕದಲ್ಲಿ ದಿನೇ ದಿನೇ ಭಾಷಾವಾರು ಪ್ರಾಂತ ರಚನೆಯ ಚಳುವಳಿಯು ತೀವ್ರಗೊಳ್ಳುತ್ತ ನಡೆಯಿತು. ಬೃಹತ್ ಮೆರವಣಿಗೆಗಳನ್ನು ಸಂಘಟಿಸಲಾಯಿತು. ಕರ್ನಾಟಕದಾದ್ಯಂತ ಸುಮಾರ ೬೦೦೦ ಸತ್ಯಾಗ್ರಹಿಗಳನ್ನು, ಶಾಸಕ ಹಾಗೂ ಸಂಸದರುಗಳನ್ನು ಒಳಗೊಂಡಂತೆ ಬಂಧಿಸಲಾಯಿತು. ಚಳುವಳಿಯ ತೀವ್ರತೆಯು ಪರಾಕಾಷ್ಟೇಗೇರಿತು. ಹೈದ್ರಾಬಾದ ಕರ್ನಾಟಕದ ರಾಜಕೀಯ ಧುರೀಣರು ತಮ್ಮ ಪಕ್ಷ ಭೇದ ಮರೆತು ವಿಧ್ಯಾರ್ಥಿಗಳಿಗೆ, ಯುವಕ ಸಂಘಗಳಿಗೆ ಹಾಗೂ ಗ್ರಾಮ ಸಭಾದ ಸದಸ್ಯರುಗಳಿಗೆ ಸ್ಪೂರ್ತಿ ನೀಡಿ ಅಖಂಡ ಕರ್ನಾಟಕ ರಚನೆಗೆ ಕ್ರಮ ತೆಗೆದುಕೊಳ್ಳುತವಂತೆ ಕೇಂದ್ರ ಸರಕಾರದ ಗಮನ ಸೆಳೆಯಲು ಅನಿರ್ದಿಷ್ಟಕಾಲ ಮುಷ್ಕರ ನಡೆಸುವಂತೆ ಮಾಡಿದರು. ಅನೇಕ ಸ್ಥಳಗಳಲ್ಲಿ ಮುಂದಾಳುಗಳು ಉಪವಾಸ ಮುಷ್ಕರ ಕೈಗೊಂಡರು. ವಿಶಾಲ ಕರ್ನಾಟಕ ರಚನೆಯನ್ನು ಒತ್ತಾಯಿಸುತ್ತಾ ಏಕೀಕರಣ ವಿರೋಧಿಗಳನ್ನು ನಿರ್ಲಕ್ಷಿಸಿದರು. ಯಲ್ಬುರ್ಗಾ ತಾಲ್ಲೂಕಿನ ರೈತ ಪರಿಷತ್ ಹಾಗೂ ಹಾಗೂ ರಾಯಚೂರು ಜಿಲ್ಲೆಯ ಕಾಂಗ್ರೇಸ್ ಕಾರ್ಯಕರ್ತರು ರಾಜ್ಯ ರಚನೆಯನ್ನು ಒತ್ತಾಯಿಸಿ ಹಂಪಿಯಲ್ಲಿ ಸತ್ಯಾಗ್ರಹ

ನಡೆಸಿದರು. ಕೆ.ಪಿ.ಸಿ.ಸಿ. ಯ ಕಾರ್ಯಕಾರಿ ಮಂಡಳಿ ಸದಸ್ಯ ರಾಜೀನಾಮೆ ನೀಡುವಂತೆ ಒತ್ತಾಯಿಸಿದರು. ಅಂದಿನ ಘೋಷಣೆ ಎಂದರೆ "ರಾಜೀನಾಮೆ ರಾಜೀನಾಮೆ, ನಿರ್ಣಯಗಳು ಬೇಕಾಗಿಲ್ಲ"[೧] ಹುಬ್ಬಳಿ ಹಾಗೂ ಹಂಪೆಯಲ್ಲಿ ಬ್ರಹತ ಜನಸಂದಣಿಯನ್ನು ಚದುರಿಸಲು ಪೊಲೀಸರು ಮಧ್ಯ ಪ್ರವೇಶಿಸಿ ಪ್ರಹಾರ ಹಾಗೂ ಗುಂಡು ಹಾರಿಸುವ ಕ್ರಮ ತೆಗೆದುಕೊಳ್ಳಬೇಕಾಯಿತು.

೧೦) ಫಜಲ ಅಲಿ ಆಯೋಗ :

ಸನ್ನಿವೇಶದ ಗಂಭಿರತೆಯನ್ನು ಮನಗಂಡು ಗ್ರಹ ಸಚಿವಾಲಯವು ೨೯-೧೨-೧೯೫೩ ರಂದು ಒಂದು ಪ್ರಕಟಣೆ ಹೊರಡಿಸಿ ಇಂದು ಫಜಲ ಅಲಿ ಆಯೋಗವೆಂದು ಪ್ರಸಿದ್ಧವಾಗಿರುವ ರಾಜ್ಯ ಪುನರ ವಿಂಗಡಣಾ ಆಯೋಗವನ್ನು ನೇಮಿಸಿತು. ಫಜಲ ಅಲಿಯವರು ಅಧ್ಯಕ್ಷರಾಗಿದ್ದ ಆ ಆಯೋಗವು ಭಾಷಾವಾರು ಆಧಾರದ ಮೇಲೆ ರಾಜ್ಯ ಪುನರವಿಂಗಡಣೆಯ ಕುರಿತು ವರದಿ ಸಲ್ಲಿಸಬೇಕಾಗಿತ್ತು. ಕೆ.ಎಂ. ಪಣಿಕ್ಕರ ಹಾಗೂ ಎಚ್.ಎನ್. ಕುಂಜ್ರು ಅವರುಗಳು ಆಯೋಗದ ಸದಸ್ಯರಾಗಿದ್ದರು.

ಕೇಂದ್ರ ಸರಕಾರವು ಆಯೋಗ ನೇಮಿಸಲು ತೆಗೆದುಕೊಂಡ ತೀರ್ಮಾನದಿಂದ ಕರ್ನಾಟಕದಾದ್ಯಂತ ಗೆಲುವಿನ ಭಾವನೆ ಮೂಡಿತು. ಭಾಷಾವಾರು ಪ್ರಾಂತ ರಚನೆ ಕುರಿತಂತೆ ತಮ್ಮ ಅಭಿಪ್ರಾಯಗಳನ್ನು ಫಜಲಅಲಿ ಆಯೋಗದ ಮುಂದಿಡಲು ಜನರು ಉತ್ಸುಕರಾಗಿದ್ದರು. ಏಕೆಂದರೆ ಅವರುಗಳು ಕೆಳಕಂಡ ಸತ್ಯವನ್ನು ಧೃಢವಾಗಿ ನಂಬಿದ್ದರು.

"ಪ್ರಜಾಪ್ರಭುತ್ವಕ್ಕೆ ಅವಶ್ಯಕವಾದ ಸಾಮಾಜಿಕ ಏಕತೆಯನ್ನು ಭಾಷಾವಾರು ಪ್ರಾಂತಗಳು ಒದಗಿಸುತ್ತವೆ ವಿದೇಶಿ ಭಾಷೆಯನ್ನು ಮೆಚ್ಚಿಕೊಂಡು ಯಾವ ಪ್ರಜಾ ಪ್ರಭುತ್ವವು ಬಾಳಲಾರದು"[೭]

ಭಾಷಾವಾರು ತತ್ವವು ರಾಜ್ಯ ಪುನರವಿಂಡಣೆಗೆ ಮೂಲ ಆಧಾರವಾಗಿದ್ದರೂ ಸಹ ಆಯೋಗಕ್ಕೆ ಇತರೆ ಅಂಶಗಳಾದ ದೇಶದ ಅಖಂಡತೆ ಹಾಗೂ ಭದ್ರತೆ ಮತ್ತು ಆಡಳಿತಾತ್ಮಕ ಅಂಶಗಳಿಗೂ ಸಮಾನ ಮಹತ್ವ ನೀಡಬೇಕೆಂದು ಸೂಚನೆ ನೀಡಲಾಗಿತ್ತು. ಪ್ರದೇಶಗಳ ಪುನರಹಂಚಿಕೆ ಕಾರ್ಯದಲ್ಲಿ ಹಳ್ಳಿಯನ್ನು ಮೂಲಮಾನವಾಗಿ, ತಾಲ್ಲೂಕನ್ನು ಮೂಲಮಾನವಾಗಿ ಹಾಗೂ ಕಂದಾಯ ವಲಯವನ್ನು ಮೂಲಮಾನವಾಗಿ ಆಯೋಗವು ವಿವಿಧ ತತ್ವಗಳನ್ನು ಪರಿಶೀಲಿಸಿತು. ಇದರ ಪ್ರಕಾರ ಯಾವ ಪ್ರದೇಶದಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಒಂದು ಭಾಷೆಯನ್ನಾಡುತ್ತಾರೋ ಆ ಪ್ರದೇಶವನ್ನು ಆ ಭಾಷೆಯಾಡುವ ಪ್ರದೇಶದ ಜೊತೆಗೆ ವಿಲೀನಗೊಳಿಸಬೇಕಾಗಿತ್ತು. ಗಡಿಗಳ ಮರು ಹಂಚಿಕೆಯಲ್ಲಿ ಕಂದಾಯ ವಲಯದ

ಮೂಲಮಾನವನ್ನು ಆಯೋಗವು ಬಳಸಿತು. ಕಂದಾಯವಲಯದ ಮೂಲಮಾನ ನಿಯಮದ ಪ್ರಕಾರ ಬೆಳಗಾವಿಯನ್ನು ಕರ್ನಾಟಕಕ್ಕೆ ನೀಡಲಾಯಿತು. ತಾಲ್ಲೂಕು ಮೂಲಮಾನ ನಿಯಮದ ಪ್ರಕಾರ ಅಂದರೆ ಬಹುಸಂಖ್ಯಾತ ಜನರು ಕನ್ನಡೇತರರಾದ್ದುದರಿಂದ ಆಲಂಪುರ, ಗೋದ್ವಾಲ್, ಆಲೂರು, ಅದೋನಿ, ತಾಡೂರು, ಸೊಲ್ಲಾಪುರ, ರಾಯದುರ್ಗ, ಕಲ್ಯಾಣದುರ್ಗ ಹಾಗೂ ಕಾಸರಗೋಡುಗಳನ್ನು ಕನ್ನಡಿಗರು ಕಳೆದುಕೊಳ್ಳಬೇಕಾಯಿತು. ಸಾಮಾನ್ಯವಾಗಿ ರಾಜ್ಯಮಟ್ಟದಲ್ಲಿ ಮರುಹಂಚಿಕೆಗೆ ತಾಲೂಕಾ ಮೂಲಮಾನ ನಿಯಮವನ್ನು ಅನುಸರಿಸಲಾಯಿತು. ಇದರ ಪ್ರಕಾರ ಒಂದು ಜಿಲ್ಲೆಯ ತಾಲೂಕಿನಲ್ಲಿ ಬಹು ಸಂಖ್ಯಾತರ ಭಾಷೆ ಕನ್ನಡವಾಗಿದ್ದು, ಆ ತಾಲ್ಲೂಕು ಕನ್ನಡೇತರ ಭಾಷೆಗಳಾದ ತೆಲುಗು ಅಥವಾ ಮರಾಠಿ ಪ್ರದೇಶಗಳಿಗೆ ಅಂಟಿಕೊಂಡಿದ್ದರೂ ಸಹ ಅದನ್ನು ಕರ್ನಾಟಕಕ್ಕೆ ಸೇರಸಲಾಯಿತು. ಹೀಗೆ ಸೇರಿಸಿದ ತಾಲ್ಲೂಕುಗಳಲ್ಲಿನ ಕೆಲವು ಕಂದಯ ವಲಯಗಳಲ್ಲಿ ನೆರೆಯ ಪ್ರದೇಶಗಳ ಭಾಷೆಯನ್ನಾಡುವ ಜನರೇ ಪ್ರಧಾನವಾಗಿದ್ದರೂ ಸಹ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಿಲ್ಲ.

ಬಿಕ್ಕಟ್ಟು :

ಕೆಲವು ರಾಜಕೀಯ ಧುರೀಣರು ಮುಖ್ಯವಾಗಿ ಮೈಸೂರು ಪ್ರದೇಶದವರು ಸಂಯುಕ್ತ ಕರ್ನಾಟಕ ರಚನೆ ವಿರುದ್ಧ ಪ್ರಚಾರ ನಡೆಸುತ್ತಿದ್ದರು. 'ಮೈಸೂರು ಮೈಸೂರಿನವರಿಗೆ' ಎಂಬುದು ಅವರ ಘೋಷಣೆಯಾಗಿತ್ತು. ಅದರ ಜೊತೆಗೆ ಹೈದ್ರಾಬಾದ ಕರ್ನಾಟಕವನ್ನು ವಿಶಾಲ ಕರ್ನಾಟಕದೊಳಗೆ ವಿಲೀನಗೊಳಿಸುವುದರಲ್ಲಿ ಕೇವಲ ವೀರಶೈವ ಸಮುದಾಯದ ನಾಯಕರು ಮಾತ್ರ ಆಸಕ್ತರಾಗಿದ್ದರೆ ಎಂಬ ಅಪಪ್ರಚಾರ ನಡೆಯಿತು. ಕೆಲವು ಎರಡು ಕರ್ನಾಟಕ ತತ್ವವನ್ನು ಪ್ರತಿಪಾದಿಸುವವರೆಗೂ ಹೋದರು. ಅದೊಂದು ದುರದೃಷ್ಟಕರ ಬೆಳೆವಣಿಗೆಯಾಗಿತ್ತು. ಸಾಂಸ್ಕೃತಿಕ ಒಂದಾಗುವಿಕೆ ದೊಡ್ಡ ಕಂಟಕವಾಗಿದ್ದ ಈ ಬೆಳವಣಿಗೆಯಿಂದ ಕನ್ನಡಿಗರ ಮನಸ್ಸಿಗೆ ನೋವಾಯಿತು. ಏಕೀಕರಣವು ಫಲಿಸಿದರೆ ರಾಜ್ಯ ರಾಜಕೀಯದಲ್ಲಿ ಕೇವಲ ಲಿಂಗಾಯತರೆ ಪ್ರಧಾನವಾಗಿ ಬಿಡುತ್ತಾರೆ ಎಂಬ ಭಾವನೆ ಮೈಸೂರು ಪ್ರದೇಶದ ರೆಡ್ಡಿ ಹಾಗೂ ಒಕ್ಕಲಿಗ ಜನಾಂಗದಲ್ಲಿ ಉಂಟಾಯಿತು. ಶಕ್ತ ರಾಜಕೀಯದಿಂದ ಮೂಡಿದ ಕುಹಕ ದೃಷ್ಟಿಕೋನ ಹಾಗೂ ಕೋಪ ಮಂಡೂಕತನ ಇದಾಗಿತ್ತು. ಈ ಮಧ್ಯ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಸಮಿತಿ, ಕೆ.ಪಿ.ಸಿ.ಸಿ. ಹಾಗೂ ಕನ್ನಡ ಸಾಹಿತ್ಯ ಪರಿಷತ್ತುಗಳು ಒಂದು ಹೇಳಿಕೆ ನೀಡಿ ಎಲ್ಲಾ ಭಾಗದ ಕನ್ನಡಿಗರು ಜಾತಿಭೇದ ಮರೆತು ಏಕೀಕರಣ ವಿರೋಧಿ ಭಾವನೆಯನ್ನು ತೊರೆಯಬೇಕೆಂದು ಕರೆ ನೀಡಿತು.

ಈ ಕಠಿಣ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತರಾಯರು ಭಾಷಾವಾರು ಪ್ರಾಂತ ರಚನೆಯನ್ನು ಪ್ರತಿಪಾದಿಸುತ್ತಾ ಒಂದು ಹೇಳಿಕೆ ನೀಡಿದರು. "ಕನ್ನಡದ ಎಲ್ಲಾ ಪ್ರದೇಶಗಳನ್ನು ಅಂದರೆ ಕೊಡಗು, ಹೈದ್ರಾಬಾದ, ಮದರಾಸು ಹಾಗೂ ಬೊಂಬಾಯಿ ಪ್ರಾಂತಗಳಲ್ಲಿನ ಕನ್ನಡ ಮಾತನಾಡುವ ಪ್ರದೇಶಗಳೆಲ್ಲವನ್ನು ಮೈಸೂರು ರಾಜ್ಯದೊಂದಿಗೆ ಸೇರಿಸಿ ಕರ್ನಾಟಕವನ್ನು ರಚಿಸಬಹುದು"[೮.] ಈ ಸ್ಪಷ್ಟ ಹೇಳಿಕೆಯು ಕೆಲವು ವರ್ಗದ ಮನಸ್ಸಿನಲ್ಲಿದ್ದ 'ಮೈಸೂರಿನವರು ಕರ್ನಾಟಕ ಏಕೀಕರಣದ ಪರವಾಗಿಲ್ಲ' ಎಂಬ ಅನುಮಾನವನ್ನು ತೊಡೆದುಹಾಕಿತು. ಒಂದು ಕಾಲಕ್ಕೆ ಸ್ವತಂತ್ರ ಅಸ್ತಿತ್ವವನ್ನು ಪ್ರತಿಪಾದಿಸುತ್ತಿದೆ ಎಂದು ವರದಿಯಾಗಿದ್ದ ಸಣ್ಣ ದೇಶಿ ಸಂಸ್ಥಾನ ಸಂಡೂರು ಕೂಡ ಏಕೀಕರಣಕ್ಕೆ ಬೆಂಬಲ ಘೋಷಿಸಿತು. ಮುಖ್ಯ ಮಂತ್ರಿಗಳಾಗಿದ್ದ ಹನುಮಂತಯ್ಯನವರು ರಾಜ್ಯ ಶಾಸನ ಸಭೆಯಲ್ಲಿ ಏಕ ಅಖಂಡ ಕರ್ನಾಟಕ ರಚನೆಯನ್ನು ಬೆಂಬಲಿಸಿ ಅಂಗೀಕಾರವಾಗುವಂತೆ ನೋಡಿಕೊಂಡರು.

೧೧) ಏಕೀಕರಣ ಧುರೀಣರ ಭೇಟಿ :

ಹೈದ್ರಾಬಾದ ಕರ್ನಾಟಕದ ಜನತೆಯ ಶಾಸಕರುಗಳಾದ ಜನಾರ್ಧನರಾವ ದೇಸಾಯಿ, ಆರ್.ವಿ. ಬಿಡಪ, ಅಳವಂಡಿ ಶಿವಮೂರ್ತಿಸ್ವಾಮಿ ಮುಂತಾದವರು ಏಕೀಕರಣ ಸಮಿತಿಯ ಸದಸ್ಯರುಗಳಾದ ಎಸ್. ನಿಜಲಿಂಗಪ್ಪ , ಕೆ. ಹನುಮಂತಯ್ಯಾ, ಹೊಸಮನಿಸಿದ್ದಪ್ಪಾ ದೊಡ್ಡಮೇಟಿ, ಮತ್ತು ಜಯದೇವಿತಾಯಿ ಲಿಗಾಡಯವರ ಜೊತೆಗೂಡಿ ಹೈದ್ರಾಬಾದ ಕರ್ನಾಟಕ ಪ್ರದೇಶದಾದ್ಯಂತ ಬಿರುಗಾಳಿಯಂತೆ ಸಂಚರಿಸಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಿ ಫಜಲ ಅಲಿ ಆಯೊಗದ ಮುಂದೆ ಮಂಡಿಸಲು ಮನವಿ ಪತ್ರಗಳನ್ನು ಸಂಗ್ರಹಿಸಿದರು. ಸಾಮೂಹಿಕ ಸಹಿ ಅಭಿಯಾನವನ್ನು ಯಶಸ್ವಿಯಾಗಿ ಕೈಗೊಳ್ಳಲಾಯಿತು. ಸರ್ವಾಂಗಿಣ ಪ್ರಗತಿ ಹಾಗೂ ಅಭಿವೃದ್ಧಿಗಾಗಿ, ಏಕತೆಗಾಗಿ, ಭದ್ರತೆಗಾಗಿ ಹಾಗೂ ಹೈದ್ರಾಬಾದ ಕರ್ನಾಟಕವನ್ನು ಅಖಂಡ ಕರ್ನಾಟಕದಲ್ಲಿ ವಿಲೀನಗೊಳಿಸುವ ಸಲುವಾಗಿ ಮೂಲೆ-ಮೂಲೆಗಳಿಂದ ಗ್ರಾಮಗಳಲ್ಲಿ ಜನರು ಉತ್ಸಾಹದಿಂದ ಬೆಂಬಲ ಸೂಚಿಸಿದರು. ನಿಜಾಮನ ಕಾಲದಲ್ಲಿ ತೀವ್ರವಾಗಿ ಅಲಕ್ಷಕ್ಕೆ ಗುರಿಯಾಗಿದ್ದರಿಂದ ಈ ಪ್ರದೇಶವು ಹಿಂದುಳಿದೆ ಎಂಬ ಅರಿವು ಜನತೆಯಲ್ಲಿ ಮೂಡಿತು. ಈ ಪ್ರದೇಶದ ಹಿತಾಸಕ್ತಿ ಹಾಗೂ ಆಕಾಂಕ್ಷೆಗಳ ರಕ್ಷಣೆಯು ಅಖಂಡ ಕರ್ನಾಟಕದೊಳಗೆ ಈ ಪ್ರದೇಶದ ವಿಲೀನದಲ್ಲಿ ಅಡಗಿದೆ ಎಂಬ ಅರಿವು ಜನತೆಯಲ್ಲಿ ಮೂಡಿತ್ತು.

ಇದೆಲ್ಲಕ್ಕಿಂತ ಹೆಚ್ಚಾಗಿ ಕರ್ನಾಟಕದ ಈ ಭಾಗದಲ್ಲಿ ಕನ್ನಡ ಭಾಷೆಯು ಕೇವಲ ಒಂದು ಮೌಖಿಕ ಭಾಷೆಯ ಸ್ಥಾನಕ್ಕೆ ತಳ್ಳಲ್ಪಟ್ಟಿತ್ತು. ಉರ್ದು ಹಾಗೂ ಮರಾಠಿಗಳ

ಪ್ರಭಾವದಿಂದ ಕರ್ನಾಟಕ ಸಂಸ್ಕೃತಿಗೆ ತೀವ್ರ ಧಕ್ಕೆ ಉಂಟಾಗಿತ್ತು. ಈ ಪ್ರದೇಶದ ಭಾಷೆಯು ಹಾಗೂ ಸಂಸ್ಕೃತಿಯ ಸರ್ವಾಂಗೀಣ ಪ್ರಗತಿಗಾಗಿ ಸ್ವತಂತ್ರ ಕನ್ನಡ ರಾಜ್ಯ ನಿರ್ಮಾಣವಾಗಬೇಕು ಎಂಬ ಹೈದ್ರಾಬಾದ ಕರ್ನಾಟಕ ಪ್ರದೇಶದ ಜನತೆಯ ಅಭಿಲಾಷೆಯನ್ನು ಹೈದ್ರಾಬಾದನ ಶಾಹಿ ಮಂಜಿಲನಲ್ಲಿ ಕಾರ್ಯನಿರವಾಗಿದ್ದ ಫಜಲ ಅಲಿ ಆಯೋಗದ ಮುಂದೆ ಮಂಡಿಸಿದರು.

೧೨) ಸಮುದಾಯವಾರು ಮನವಿ ಪತ್ರಗಳು :

ಏಪ್ರೀಲ್ ೦೮, ೧೯೫೪ ರಿಂದ ಅಕ್ಟೋಬರ್ ೧೦, ೧೯೫೫ ರ ವರೆಗೆ ಫಜಲ ಅಲಿ ಆಯೋಗವು ೧೦೪ ಸ್ಥಳಗಳಿಗೆ ಭೇಟಿ ನೀಡಿ, ೩೮ ಸಾವಿರ ಮೈಲಿಗಳು ಪ್ರಯಾಣ ಮಾಡಿ ಸಾರ್ವಜನಿಕರ ಮನವಿ ಪತ್ರಗಳು ಸೇರಿದಂತೆ ೧೫೨೨೫೦ ದಸ್ತಾವೇಜುಗಳನ್ನು ಸ್ವೀಕರಿಸಿತು.

ಹೈದ್ರಾಬಾದ ಕರ್ನಾಟಕ ಪ್ರದೇಶವನ್ನು ಕರ್ನಾಟಕ ರಾಜ್ಯದಲ್ಲಿ ವಿಲೀನಗೊಳಿಸುವುದರಲ್ಲಿ ಕೇವಲ ವೀರಶೈವ ಸಮುದಾಯ ಮಾತ್ರ ಆಸಕ್ತವಾಗಿದೆ ಎಂಬ ಭಾವನೆ ಸಮಾಜದ ಕೆಲವು ವರ್ಗದಲ್ಲಿ ಉಂಟಾಗಿತ್ತು. ಈ ಭಾವನೆಯನ್ನು ತೊಡೆದು ಹಾಕುವ ಸಲುವಾಗಿ ಪ್ರತಿಯೊಂದು ಸಮುದಾಯದ ಮುಂದಾಳುಗಳ ಕೈಯಿಂದ ಸಮುದಾಯವಾರು ಮನವಿ ಪತ್ರಗಳನ್ನು ಆಯೋಗಕ್ಕೆ ಸಲ್ಲಿಸುವ ವ್ಯವಸ್ಥೆ ಮಾಡಲಾಯಿತು. ಉದಾಹರಣೆಗೆ ಗುಲಬರ್ಗಾ ಜಿಲ್ಲೆಯಲ್ಲಿ ಮಹಮದ್ ಅಲಿ ಮುಸ್ಲಿಮರ ಪ್ರತಿನಿಧಿಯಾಗಿ, ಹುಮನಾಬಾದನ ರಾಮಚಂದ್ರ ವೀರಪ್ಪ ಮತ್ತು ಶಿವರಾಯಮೋಗ ಹರಿಜನರ ಪ್ರತಿನಿಧಿಗಳಾಗಿ, ತೇಜಸಿಂಗ ರಾಠೋಡ ಲಂಬಾಣಿ ಹಿತಾಸಕ್ತಿಯ ಪ್ರತಿನಿಧಿಯಾಗಿ, ಮಲ್ಲೇಶಪ್ಪ ಬೆಸ್ತ ಸಮಾಜದ ಪ್ರತಿನಿಧಿಯಾಗಿ, ಕೊಲ್ಲೂರು ಮಲ್ಲಪ್ಪ ಕುರುಬ ಸಮಾಜದ ಪ್ರತಿನಿಧಿಯಾಗಿ, ಜಗನ್ನಾಥರಾವ ಚಂದ್ರಕಿಯವರು ಬ್ರಾಹ್ಮಣ ಸಮಾಜದ ಪ್ರತಿನಿಧಿಯಾಗಿ, ಚಂದ್ರಶೇಖರ ಪಾಟೀಲ್, ಗಂಗಾಧರ ನಮೋಶಿ, ಚಿಟಗುಪ್ಪದ ಆರ್.ವಿ. ಬಿಡಪ, ಸರದಾರ ಶರಣಗೌಡ ಇನಾಮದಾರವರು ವೀರಶೈವ ಸಮುದಾಯದ ಪ್ರತಿನಿಧಿಗಳಾಗಿ ಹೈದ್ರಾಬಾದನಲ್ಲಿ ೧೯೫೪ ರ ಮೇ ತಿಂಗಳ ಕೊನೆಯ ವಾರದಲ್ಲಿ ಮನವಿ ಪತ್ರಗಳನ್ನು ಸಲ್ಲಿಸಿದರು.

ರಾಜ್ಯ ಪುನರವಿಂಗಡಣೆ ಕುರಿತು ವರದಿಯಲ್ಲಿ ಫಜಲ ಅಲಿ ಆಯೋಗವು ಕೇಂದ್ರ ಸರಕಾರಕ್ಕೆ ಅನುಷ್ಠಾನಗೊಳಿಸಲಿಕ್ಕಾಗಿ ೩೦ ನೇ ಸೆಪ್ಟೆಂಬರ್ ೧೯೫೫ ರಂದು ಸಲ್ಲಿಸಿತು. ಆಯೋಗವು ಸಲ್ಲಿಸಿದ ವಿರದಿಯನ್ನು ಕರ್ನಾಟಕದ ಜನತೆಯು ಸ್ವೀಕರಿಸಲಿಲ್ಲ. ಏಕೆಂದರೆ ಆಯೋಗದ ಸಲಹೆಯಲ್ಲಿ ಪ್ರಧಾನವಾಗಿ ಕನ್ನಡವನ್ನೇ ಮಾತನಾಡುವ ಪ್ರದೇಶಗಳಾದ ಸೊಲ್ಲಾಪೂರ ಹಾಗೂ ಕಾಸರಗೊಡುಗಳನ್ನು ಕರ್ನಾಟಕದಿಂದ ಕಿತ್ತುಕೊಂಡಿತ್ತಲ್ಲದೇ, ಅದರ ಇನ್ನೊಂದು ವಿಚಿತ್ರ ಸಲಹೆಯಂದರೆ

ಬಳ್ಳಾರಿ ಜಿಲ್ಲೆಯ ಶಿರಗುಪ್ಪ, ಬಳ್ಳಾರಿ ಹಾಗೂ ತುಂಗಭದ್ರಾ ಆಣೆಕಟ್ಟು ಸೇರಿದಂತೆ ಹೊಸಪೇಟೆ ತಾಲ್ಲೂಕುಗಳನ್ನು ಕರ್ನಾಟಕದಿಂದ ಪ್ರತ್ಯೇಕಿಸುವುದಾಗಿತ್ತು.

ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದ ಆಯೋಗದ ಸಲಹೆಯು ಕರ್ನಾಟಕದ್ಯಂತ ಹಾಗೂ ಪಾರ್ಲಿಮೆಂಟಿನಲ್ಲಿ ಹಾಹಾಕಾರವನ್ನು ಸೃಷ್ಟಿಸಿತು. ಬಳ್ಳಾರಿಗೆ ಸಂಬಂಧಿಸಿದಂತೆ ನ್ಯಾಯಕ್ಕಾಗಿ ಕರ್ನಾಟಕವು ಹೋರಾಟ ನಡೆಸಬೇಕಾಯಿತು. ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಸಮಿತಿಯು ಬಳ್ಳಾರಿಯ ಪ್ರತ್ಯೇಕವನ್ನು ವಿರೋಧಿಸಲು ಅಕ್ಟೋಬರ್ ೧೯೫೫ ರಿಂದ ಜನವರಿ ೧೯೫೬ ರ ವರೆಗೆ ಹಂಪಿಯಲ್ಲಿ ಸತ್ಯಾಗ್ರಹವನ್ನು ಪ್ರಾರಂಭಿಸಿತು. ಬಳ್ಳಾರಿಯನ್ನು ತಮ್ಮ ರಾಜ್ಯಗಳಲ್ಲಿ ಉಳಿಸಿಕೊಳ್ಳಬೇಕೆಂದು ಆಂಧ್ರಪರವಾದ ಹಾಗೂ ಕರ್ನಾಟಕದ ಪರವಾದ ಚಳುವಳಿಗಾರರು ತಮ್ಮ ಬಲ ಪ್ರದರ್ಶನಕ್ಕಾಗಿ ಏರ್ಪಡಿಸಿದ ಬೃಹತ ಮೆರವಣಿಗೆಯಿಂದಾಗಿ ಕಾನೂನು ಸುವ್ಯವಸ್ಥೆಯ ಸಮಸ್ಯೆ ಉಂಟಾಯಿತು. ಈ ಚಳುವಳಿಲ್ಲಿ ತೊಡಗಿದ ಸಾವಿರಾರು ಮಂದಿಯ ಬದುಕು ಸಾವಿನ ಪ್ರಶ್ನೆಯಾಗಿದ್ದು, ಇದನ್ನು ಭಾತರ ಸರಕಾರದ ತೀರ್ಮಾನವು ನಿರ್ಧರಿಸಬೇಕಾಗಿತ್ತು. ಕರ್ನಾಟಕದ ಎಲ್ಲಾ ಎಂ.ಪಿ.ಗಳು ಎಸ್. ನಿಜಲಿಂಗಪ್ಪ, ಅಳವಂಡಿ ಶಿವಮೂರ್ತಿ ಸ್ವಾಮಿ ಹಾಗೂ ಸ್ವಾಮಿ ರಮಾನಂದ ತೀರ್ಥರ ನೇತೃತ್ವದಲ್ಲಿ ಭಾಷೆ, ಭೌಗೋಳ ಹಾಗೂ ಆರ್ಥಿಕತೆ ಆಧಾರದ ಮೇಲೆ ಬಳ್ಳಾರಿಯನ್ನು ಕರ್ನಾಟಕದಲ್ಲಿ ವಿಲೀನಗೊಳಿಸಬೇಕೆಂದು ಪ್ರಬಲವಾಗಿ ವಾದಿಸಿದರು. ೧೯೫೩ ರಲ್ಲಿ ಬಳ್ಳಾರಿಯನ್ನು ಮದರಾಸು ಪ್ರಾಂತದಿಂದ ಮೈಸೂರು ಪ್ರಾಂತಕ್ಕೆ ವರ್ಗಾಯಿಸಬೇಕೆಂದು ೩೫ ಅಂಶಗಳ ಲಕ್ಷ್ಮಿ ಶಂಕರ ಮಿಶ್ರಾರವರ ವರದಿಯನ್ನು ಪ್ರಧಾನ ಮಂತ್ರಿ ನೆಹರುರವರ ಗಮನಕ್ಕೆ ತರಲಾಯಿತು. "ಈಗ ಬಳ್ಳಾರಿಯನ್ನು ಮೈಸೂರು ರಾಜ್ಯದಿಂದ ಬೇರ್ಪಡಿಸುವ ಪ್ರಶ್ನೆ ಉದ್ಭವಿಸುವದೇ ಇಲ್ಲ" ಎಂದರು. ಬಳ್ಳಾರಿ ಪ್ರದೇಶ ಆಂಧ್ರಕ್ಕೆ ಸೇರಬೇಕೆಂದು ಅಂದಿನ ಶಾಸಕ ಮಂಡೂರು ಗಂಗಪ್ಪನವರು ವಾದಿಸಿದರು. ಇವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಉಪ ಚುನಾವಣೆಯಲ್ಲಿ ಮತ್ತೆ ಆಂಧ್ರಿಗರ ಪರವಾಗಿ ಅಭ್ಯರ್ಥಿಯಾಗಿ ಚುನಾವಣೆಗೆ ನಿಂತರು. ಕನ್ನಡಿಗರ ಅಭ್ಯರ್ಥಿಯಾಗಿ ಹೆಚ್. ಸಣ್ಣಬಸವನಗೌಡರು ಸ್ಪರ್ಧಿಸಿದರು. ಈ ಉಪ ಚುನಾವಣೆಯಲ್ಲಿ ಹೆಚ್. ಸಣ್ಣ ಬಸವಣಗೌಡರು, ಮಂಡೂರು ಗಂಗಪ್ಪನವರ ಎದುರು ೧೭೯೧ ಮತಗಳ ಅಂತರದಿಂದ ಗೆಲುವು ಸಾಧಿಸಿದರು. ಜನತೆ ಬಳ್ಳಾರಿಯನ್ನು ಕರ್ನಾಟಕದಲ್ಲಿ ವಿಲೀನ ಗೊಳಿಸುವ ಪರವಾಗಿದ್ದಾರೆ ಎನ್ನುವ ಅಂಶವನ್ನು ಅರಿತ ಪಂಡಿತ ನೆಹರು ಸರಕಾರ ಸೂಕ್ತ ತಿದ್ದುಪಡಿಯನ್ನು ಸಂಸತ್ತಿನಲ್ಲಿ ಮಂಡಿಸಿತು. ಹೀಗೆ ಪಾರ್ಲಿಮೆಂಟಿನ ಒಂದು ಸೂಕ್ತ ನಿರ್ಧಾರದಿಂದ ಕರ್ನಾಟದಲ್ಲಿ ಸಾಮಾನ್ಯ ಸನ್ನಿವೇಶ ಸ್ಥಾಪನೆ ಗೊಂಡಿತು. ಬಳ್ಳಾರಿ ಕರ್ನಾಟದಲ್ಲಿ ಉಳಿಯಿತು.

೧೩) ನವ ಮೈಸೂರಿನ ಉದಯ :

ಅಮೃತಸರದಲ್ಲಿ ೧೦-೦೨-೧೯೫೬ ರಲ್ಲಿ ಸೇರಿದ್ದ ಎ.ಐ.ಸಿ.ಸಿ. ಅಧಿವೇಶನವು ಭಾಷಾವಾರು ರಾಜ್ಯಗಳ ಸ್ಥಾಪನೆಗೆ ರಾಜ್ಯ ಪುನರವಿಂಗಡನೆ ಆಯೋಗದ ವರದಿಯಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಿತು. ರಾಜ್ಯ ಪುನರವಿಂಗಡಣೆ ಮಸೂದೆಯನ್ನು ಆಯಾ ರಾಜ್ಯಗಳಿಗೆ ತಮ್ಮ ಅಭಿಪ್ರಾಯ ಸೂಚಿಸಲು ಕಳುಹಿಸಿಕೊಡಲಾಯಿತು. ಇದಕ್ಕೆ ಮುಂಚೆಯೇ ಕಾಂಗ್ರೆಸ ಹೈಕಮಾಂಡ ಯಾವುದೇ ತಿದ್ದುಪಡಿಗಳಿಲ್ಲದೆ ವಿಧಾನ ಸಭೆಯಲ್ಲಿ ಮಸೂದೆಯನ್ನು ಕಾಂಗ್ರೇಸ್ ಪಕ್ಷವು ಅನುಮೋದಿಸಬೇಕೆಂದು ಕಟ್ಟಾಜ್ಞೆ ವಿಧಿಸಲಾಗಿತ್ತು. ಆದರೆ ರಾಜ್ಯ ಪುನರವಿಂಗಡನಾ ಮಸೂದೆಯನ್ನು ಅದಿರುವ ಸ್ವರೂಪದಲ್ಲಿ ಒಪ್ಪಿಕೊಳ್ಳಬೇಕೆಂಬ ಕಾಂಗ್ರೇಸ್ ಕ್ರಮವನ್ನು ಒಂದೇ ಧ್ವನಿಯಲ್ಲಿ ವಿರೋಧಿಸಲಾಯಿತು. ಕುತೂಹಲದ ಸಂಗತಿಯಂದರೆ ಪಾರ್ಲಿಮೆಂಟಿನಲ್ಲಿ ವಿರೋಧ ಪಕ್ಷಗಳು

- ಬಳ್ಳಾರಿಯನ್ನು ಒಳಗೊಂಡತೆ ಸಂಯುಕ್ತ ಕರ್ನಾಟಕ
- ಬೊಂಬಾಯಿಯನ್ನು ಒಳಗೊಂಡಂತೆ ಸಂಯುಕ್ತ ಮಹಾರಾಷ್ಟ್ರ ಹಾಗೂ
- ತೆಲಗಾಂಣವನ್ನು ಒಳಗೊಂಡಂತೆ ವಿಶಾಲ ಆಂದ್ರ ರಾಜ್ಯಗಳ ರಚನೆಗೆ ಬೇಕಾದ ೨/೩ ರಷ್ಟು ಬಹುಮತವನ್ನು ಒದಗಿಸಿಕೊಡುವುದಾಗಿ ಸರಕಾರಕ್ಕೆ ಭರವಸೆ ಕೊಡುವುದರಲ್ಲಿ ಯಶಸ್ವಿಯಾಗಿದ್ದವು.

ಪಾರ್ಲಿಮೆಂಟಿನಲ್ಲಿ ರಾಜ್ಯ ಪುನರವಿಂಗಡಣೆ ಆಯೋಗದ ವರದಿಯನ್ನು ೨೫-೦೮-೧೯೫೬ ರಂದು ಒಪ್ಪಿಕೊಂಡಮೇಲೆ ಮತ್ತು ೩೦-೦೮-೧೯೫೬ ರಂದು ಅದು ಅನುಷ್ಠಾನಗೊಂಡಮೇಲೆ ಕರ್ನಾಟಕ ರಾಜ್ಯವು ಹೈದ್ರಾಬಾದ ಕರ್ನಾಟಕದ ಬೀದರ, ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳನ್ನು ಒಳಗೊಂಡಂತೆ 'ವಿಶಾಲ ಮೈಸೂರು' ಎಂಬ ನಾಮಾಂಕಿತದಲ್ಲಿ ಒಂದನೇ ನವೆಂಬರ ೧೯೫೬ ರಂದು ಅಸ್ತಿತ್ವಕ್ಕೆ ಬಂದಿತು.

ವಿಶಾಲ ಮೈಸೂರು ಕೆಳಕಂಡ ಭಾಗಗಳನ್ನು ಒಳಗೊಂಡಿತು.

೧. ಮೈಸೂರು ದೇಶಿ ಸಂಸ್ಥಾನ ಮತ್ತು ೧೯೫೩ ರಲ್ಲಿ ಆಂಧ್ರ ಪ್ರದೇಶದ ರಚನೆಯಾದಾಗ ಮೈಸೂರು ಪ್ರಾಂತಕ್ಕೆ ಸೇರಿಕೊಂಡ ಬಳ್ಳಾರಿ.

೨. ಬೊಂಬಾಯಿ ಪ್ರಾಂತದ ಬೆಳಗಾಂ ಜಿಲ್ಲೆ (ಚಾಂದಗಡ ತಾಲೂಕು ಬಿಟ್ಟು) ಧಾರವಾಡ ಜಿಲ್ಲೆ ಪೂರ್ತಿ, ಬಿಜಾಪೂರ ಮತ್ತು ಉತ್ತರ ಕನ್ನಡ ಜಿಲ್ಲೆ.

೩. ಕೆಳಕಂಡ ಮದ್ರಾಸು ಪ್ರಾಂತದ ಭಾಗಗಳು

- ಕಾಸರಗೋಡು ಮತ್ತು ಅಮೀನದೀವಿ ದ್ವೀಪಗಳನ್ನು ಬಿಟ್ಟು ದಕ್ಷಿಣ ಕನ್ನಡ ಜಿಲ್ಲೆ.

೪. ಸಂಪೂರ್ಣ ಕೊಡಗು ಜಿಲ್ಲೆ.

೫. ಹೈದ್ರಾಬಾದ ಸಂಸ್ಥಾನದ ಕೆಳಕಂಡ ಭಾಗಗಳು

- ಕೋಡಮಳ್ ಹಾಗೂ ತಾಂಡೂರ್ ಬಿಟ್ಟು ಗುಲಬರ್ಗಾ ಜಿಲ್ಲೆ.
- ಆಲಂಪೂರ್ ಮತ್ತು ಗದ್‌ವಾಲ್ ತಾಲ್ಲೂಕುಗಳನ್ನು ಬಿಟ್ಟು ರಾಯಚೂರು ಜಿಲ್ಲೆ.
- ಬೀದರ, ಭಾಲ್ಕಿ, ಔರಾದ ಮತ್ತು ಹುಮನಾಬಾದ ಒಳಗೊಂಡ ಬೀದರ ಜಿಲ್ಲೆ.

೧೪) ರಾಜ್ಯಕ್ಕೆ ಮರುನಾಮಕರಣ :

ಫಜಲ ಅಲಿ ಆಯೋಗವು ಕನ್ನಡಿಗರಿಗಾಗಿ ರಚನೆಯಾಗುವ ರಾಜ್ಯವನ್ನು ಕರ್ನಾಟಕ ಎಂದು ಕರೆಯಿತು. ಜನತೆಯ ಮನೋಭಿಲಾಷೆಯು ಇದೇ ಆಗಿತ್ತು. ಹೊಸ ರಾಜ್ಯವನ್ನು ಕರ್ನಾಟಕವೆಂದೇ ಕರೆಯಬೇಕೆಂದು ಕನ್ನಡ ಕುಲ ಪುರೋಹಿತ ಆಲೂರು ವೆಂಕಟರಾಯರ ಬದುಕಿನ ಮಹತ್ವಕಾಂಕ್ಷೆಯು ಇದೆ ಆಗಿತ್ತು. ಏಕೆಂದರೆ ಕರ್ನಾಟಕವು ಕನ್ನಡಿಗರ ಏಕತೆಯ ಹಾಗೂ ಅವರ ಸಂಸ್ಕೃತಿಯ ಅಭಿವ್ಯಕ್ತಿಯಾಗಿತ್ತು. ದೇಶಿಯ ಸಂಸ್ಥಾನದ ಅಭಿವ್ಯಕ್ತಿಯಾದ ಮೈಸೂರು ಹೆಸರಿನ ಬಗ್ಗೆ ಸ್ವಾತಂತ್ರ ಯೋಧರಿಗೆ ಸಂತೋಷವಿರಲಿಲ್ಲ. ಆದರೆ ಹಳೆಯ ಮೈಸೂರು ಭಾಗದ ಧುರೀಣರಿಗೆ 'ಮೈಸೂರು' ಎಂಬ ಹೆಸರಿನ ಬಗ್ಗೆ ಭಾವನಾತ್ಮಕ ಮೋಹವಿತ್ತು. ಕೇಂದ್ರ ಸರಕಾರವು ಹಳೆಯ ಮೈಸೂರಿನ ಜನತೆಯನ್ನು ಹಾಗೂ ಮೈಸೂರು ಮಹಾರಾಜರ ಮನನೋಯಿಸಲು ಸಿದ್ಧವಿರಲಿಲ್ಲ. ಇದರಿಂದಾಗಿ ಪಾರ್ಲಿಮೆಂಟಿನಲ್ಲಿ ಮೈಸೂರು ಎಂಬ ಹೆಸರಿಗೆ ಹೆಚ್ಚು ಬೆಂಬಲವಿತ್ತು. ಆದರೆ ಒಂದನೇ ನವೆಂಬರ್ ೧೯೭೩ ರಲ್ಲಿ ದೇವರಾಜ ಅರಸರು ಮುಖ್ಯ ಮಂತ್ರಿಯಾಗಿ ಅಧಿಕಾರದಲ್ಲಿದ್ದಾಗ ರಾಜ್ಯ ಕರ್ನಾಟಕ ಎಂದು ಪುನರ ನಾಮಕರಣ ಮಾಡಲಾಯಿತು. ಇದು ಏಕೀಕರಣ ಚಳುವಳಿಯ ಪರಿಸಮಾಪ್ತಿಗೊಂಡ ಘಟನೆಯ ಸಂಕೇತವಾಗಿತ್ತು. ಅರಸು ಸರಕಾರದ ಈ ಕ್ರಮವು ಏಕೀಕರಣಕ್ಕಾಗಿ ಹೋರಾಟ ಮಾಡಿದವರಿಗೆ ಸಲ್ಲಿಸಿದ ಗೌರವದ ಸಂಕೇತವಾಗಿತ್ತು ಮತ್ತು ಇಂದಿನ ಜನಾಂಗಕ್ಕೆ ಕರ್ನಾಟಕ ಸಂಸ್ಕೃತಿ ಹಾಗೂ ಭಾಷೆಯನ್ನು ಸಮೃದ್ಧವಾಗಿ ಬೆಳೆಸಲು ಸಂಕೇತವು ಆಯಿತು.

ನಿಜಾಮ ಸರ್ವಾಧಿಕಾರಿ ಆಳ್ವಿಕೆಯ ವಿರುದ್ಧದ ಸುದೀರ್ಘ ಹೋರಾಟದ ನಂತರ ಹೈದ್ರಾಬಾದ ಕರ್ನಾಟಕದ ಜನತೆಗೆ ತಮ್ಮ ತಾಯ್ನಾಡಿನ ಜೊತೆ ವಿಲೀನಗೊಂಡ ಹಾಗೂ ಒಂದೇ ಸಾಂಸ್ಕೃತಿಕ ಹಾಗೂ ಭಾಷಾ ಪರಂಪರೆಯುಳ್ಳ ರಕ್ತ ಸಂಬಂಧಿಗಳ ಜೊತೆ ಸೇರಿಕೊಂಡ ಸಮಾಧಾನ ಉಂಟಾಯಿತು. ಆದರೆ ಮೈಸೂರು ರಾಜ್ಯದ ಸರಕಾರಿ ಅಧಿಕಾರಿಗಳು ನಿರ್ಲಕ್ಷ ತೋರತೊಡಗಿದಾಗ ಹಾಗೂ 'ಹಿಂದುಳಿದವರು' ಎಂದು ಮೂದಲಿಸತೊಡಗಿದಾಗ, ಇವರೆಲ್ಲಾ ಭ್ರಮನಿರಸನಗೊಂಡರು. ಈ ಗತಕಾಲವನ್ನು ಮರೆಯೋಣ. ತಾರತಮ್ಯ ಭಾವವನ್ನು ಮುಚ್ಚಿಡೋಣ. ಜಾತ್ಯಾತೀತತೆ ಭಾವನೆಯಿಂದ ಅಖಂಡ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಸಮೃದ್ಧಿ ಗೊಳಿಸೋಣ.

ಅಡಿ ಟಿಪ್ಪಣಿಗಳು :

೧) ಮಹಾಬಲೇಶ್ವರಪ್ಪ ಬಿ.ಸಿ. ; ಹೈದ್ರಾಬಾದ ಕರ್ನಾಟದಲ್ಲಿ ರಾಜಕೀಯ ಚಳುವಳಿಗಳು (೧೯೪೬ ರಿಂದ ೨೦೦೦) ಪುಟ ೧೨೮.

೨) –ಅದೇ– ಪುಟ ೧೩೦

೩) –ಅದೇ– ಪುಟ ೧೩೪

೪) –ಅದೇ– ಪುಟ ೧೩೫

೫) –ಅದೇ– ಪುಟ ೧೩೬

೬) –ಅದೇ– ಪುಟ ೧೩೮

೭) –ಅದೇ– ಪುಟ ೧೩೯

೮) –ಅದೇ– ಪುಟ ೧೪೦

೯) –ಅದೇ– ಪುಟ ೧೪೩

ಅಧ್ಯಾಯ –೮

ತಾಲೂಕ ಸ್ವಾತಂತ್ರ್ಯ ಹೋರಾಟಗಾರರು

- **ರಾಮಚಂದ್ರ ವೀರಪ್ಪ**

"ಧೈರ್ಯ ಸರ್ವತ್ರ ಸಾಧನಂ" ಎಂಬ ವಾಕ್ಯಕ್ಕೆ ಜೀವಂತ ಉದಾಹರಣೆ ಎಂದರೆ ರಾಮಚಂದ್ರ ವೀರಪ್ಪಾನವರು. ೧೯೪೦ ರ ಸಮಯ ಹುಮನಾಬಾದ ನಗರದಲ್ಲಿ ರಜಾಕಾರರ ಹಾವಳಿ ಹೆಚ್ಚಾಗಿತ್ತು. ಹಿಂದು ಹೆಣ್ಣು ಮಕ್ಕಳು ಮನೆ ಬಿಟ್ಟು ಒಂಟಿಯಾಗಿ ಹೊರಬರುವಂತಿರಲಿಲ್ಲ. ಒಂದುಸಾರಿ ಒಬ್ಬ ಹೆಣ್ಣು ಮಗಳು ಹಳ್ಳಕ್ಕೆ ಬಟ್ಟೆ ಒಗೆಯಲು ಹೋದಾಗ ನಾಲ್ಕು ಜನ ಮುಸ್ಲಿಮರು ಅವಳನ್ನು ಬಲತ್ಕರಿಸರಿಸಲು ಪ್ರಯತ್ನಿಸಿದಾಗ ರಾಮಚಂದ್ರರು ಆ ಹೆಣ್ಣು ಮಗಳನ್ನು ಕಾಪಾಡಿದರು. ರಾಮಚಂದ್ರ ವೀರಪ್ಪಾರವರು ಹುಟ್ಟಿದ್ದು ೧೯೦೮ ನೇ ಇಸ್ವಿಯಲ್ಲಿ ಇವರ ತಂದೆ ವೀರಪ್ಪ ತಾಯಿ ರೇವಮ್ಮನವರು. ಇವರ ವಿಧ್ಯಾಭ್ಯಾಸ ಕೇವಲ ಹಿಂದಿ ಪ್ರವೇಶ ಪರೀಕ್ಷೆ ಮಾತ್ರವಾಗಿತ್ತು.

ಪಂಡಿತ ಶಿವಚಂದ್ರಜೀ ಸ್ಥಾಪಿಸಿದ ಆರ್ಯಸಮಾಜದ ಸಕ್ರೀಯ ಕಾರ್ಯಕರ್ತರಾಗಿ, ಹಿರಿಯ ಅಣ್ಣನಾದ ಲಕ್ಷ್ಮಣರಾವ ಆರ್ಯರ ಜೊತೆಗೂಡಿ ಆರ್ಯ ಸಮಾಜದ ಪ್ರಚಾರ ಭರದಿಂದ ನಡೆಸಿದರು. ಮಾಣಿಕರಾವ ಭಂಡಾರಿ ಪುಂಡಲಿಕರಾವ ಪರಿಟ ಮೊದಲಾದವರೊಡನೆ ಕೂಡಿಕೊಂಡು ರಾಮಚಂದ್ರ ವೀರಪ್ಪಾ ಬಾಂಬ ತಯಾರಿಸಲು ಪ್ರಾರಂಭಿಸಿದರು. ಒಮ್ಮೆ ಹೊಲದಲ್ಲಿ ಪ್ರಯೋಗಿಸಿದಾಗ ಬಾಂಬ ತಡವಾಗಿ ಸ್ಪೋಟಗೊಂಡಿದ್ದರ ಪರಿಣಾಮವಾಗಿ ಚಂಚಗುಡಾ ಸೆರಮನೆಯಲ್ಲಿಟ್ಟರು.

ರಾಮಚಂದ್ರ ವೀರಪ್ಪಾ ನವರು ೩ ಸಲ ಜೈಲು ಸೇರಿ ಕಾಲಾಪಾನಿ ಶಿಕ್ಷೆಗೂ ಗುರಿಯಾಗಿದ್ದರು. ಆದರೆ ಅಷ್ಟರಲ್ಲಿ ಹೈದ್ರಾಬಾದ ಕರ್ನಾಟಕ ವಿಮೋಚನೆಗೊಂಡಿತು. ಇವರು ರಜಾಕಾರರಿಗೆ ಸಿಂಹ ಸ್ವಪ್ನವಾಗಿದ್ದರಂತೆ. ಆನೇಕ ಮುಸ್ಲಿಂ ಕುಟುಂಬಗಳಿಗೆ ಆತ್ಮೀಯರಾಗಿದ್ದರು. ರಾಮಚಂದ್ರಪ್ಪನವರು ಆರ್ಯ ಸಮಾಜದ ಕಾರ್ಯಕರ್ತರಾಗಿ, ಪ್ರಪ್ರಥಮವಾಗಿ ೧೯೪೮ ರಲ್ಲಿ ಹೈದ್ರಾಬಾದ ರಾಜ್ಯ ಸಭೆಯ ಸದಸ್ಯರಾಗಿ, ೧೯೪೯ ರಲ್ಲಿ ಬೀದರ ಜಿಲ್ಲೆಯ ನಗರ ಸಭೆಯ ಸದಸ್ಯರಾಗಿ ಆಯ್ಕೆಯಾದರು. ೧೯೬೨ ರಲ್ಲಿ ಪ್ರಥಮ ಸಲ ಶಾಸಕರಾಗಿ ಆಯ್ಕೆಗೊಂಡರು. ೧೯೫೨ ರಲ್ಲಿ ಪ್ರಥಮ ಸಲ ಭಾರತ ದೇಶದ ಸಂಸತ್ ಸದಸ್ಯರಾಗಿ ಬೀದರ ಕ್ಷೇತ್ರದಿಂದ ಆಯ್ಕೆಯಾದರು. ೧೯೬೭ ರಲ್ಲಿ

ಮತ್ತೆ ಮರು ಆಯ್ಕೆಯಾದರು. ೧೯೮೦ ರಿಂದ ೮೫ ರ ವರೆಗೆ ಕರ್ನಾಟಕ ರಾಜ್ಯ ಶಾಸಕರಾಗಿ ಹುಲಸೂರು ಕ್ಷೇತ್ರದಿಂದ ಆಯ್ಕೆಯಾದರು. ೧೯೯೧ ರಲ್ಲಿ ಭಾರತೀಯ ಜನತಾ ಪಕ್ಷದ ಅಭ್ಯರ್ಥಿಯಾಗಿ ಪ್ರಚಂಡ ಬಹುಮತದಿಂದ ಸಂಸತ ಸದಸ್ಯರಾಗಿ ಬೀದರ ಕ್ಷೇತ್ರದಿಂದ ಆಯ್ಕೆಯಾದರು. ೪೦ ವರ್ಷಗಳ ಕಾಲ ಎಂ.ಪಿ. ಗಳಾಗಿ ಆರಿಸಿ ಬಂದ ಅವರನ್ನು ಎಲ್ಲರು ಎಂ.ಪಿ. ಎಂಬ ಹೆಸರಿನಿಂದಲೇ ಗುರುತಿಸುತ್ತಾರೆ. ಜೊತೆಗೆ ಅಖಿಲ ಭಾರತ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡಗಳ ಸೆಲ್‌ನ ಉಪಾಧ್ಯಕ್ಷರಾಗಿ ಹಾಗೂ ಬೀದರ ಜಿಲ್ಲೆಯ ಸಹಕಾರ ಬ್ಯಾಂಕಿನ ಉಪಾಧ್ಯಕ್ಷರಾಗಿ ಬೀದರ ಜಿಲ್ಲೆಯ ಸಹಕಾರಿ ಸಕ್ಕರೆ ಕಾಖಾನೆ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ.

- **ಆರ್.ವಿ. ಬಿಡಪ**

ಬೀದರ ರಾಜಕೀಯ ನಾಯಕರಲ್ಲಿಯೇ ಆರ್.ವಿ. ಬಿಡಪನವರು ಸಮಾಜವಾದಿ ನಾಯಕರೆಂದು ಖ್ಯಾತರಾಗಿದ್ದಾರೆ. ಅವರದು ಬಹುಮುಖ ವ್ಯಕ್ತಿತ್ವ, ಸ್ವಾತಂತ್ರ ಯೋಧರಾಗಿದ್ದಂತೆ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರು, ಅಧ್ಯಕ್ಷರು ಆಗಿದ್ದರು. ಹಲವಾರು ಸಂಘ ಸಂಸ್ಥೆಗಳ ಅಧ್ಯಕ್ಷರಾಗಿದ್ದಂತೆ, ಬೀದರ ಜಿಲ್ಲೆಯ ಪ್ರತಿಷ್ಠಿತಿ ಶಿಕ್ಷಣಸಂಸ್ಥೆಯಾದ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಆಗಿದ್ದರು. ಕರ್ನಾಟಕ ಏಕೀಕರಣಕ್ಕಾಗಿ ಕನ್ನಡ ನಾಡು, ನುಡಿಗಾಗಿ ದುಡಿದ ಅವರು ನಾಡಅಭಿಮಾನಿಗಳು ಆಗಿದ್ದಾರೆ. ಸರಳ ಜೀವನ ಆದರೆ ಉಚ್ಚ ವಿಚಾರ ಅವರ ಜೀವದ ಉಸಿರಾಗಿದೆ. ಪ್ರಮಾಣಿಕತೆಯು ಅವರ ಜೀವನದ ಮೌಲ್ಯವಾಗಿದೆ. ರಾಚಪ್ಪಾ ಬಿಡಪ್ಪನವರು ಬೀದರ ಜಿಲ್ಲೆಯ ರಾಜಕೀಯ ಚಟುವಟಿಕೆಗಳ ಕೇಂದ್ರವಾಗಿದ್ದ ಚಿಟಗುಪ್ಪ ನಗರದಲ್ಲಿ ೧೧-೦೫-೧೯೨೦ ರಂದು ಜನಿಸಿದರು. ಅವರ ತಂದೆ ವೀರಭದ್ರಪ್ಪಾ ಆರ್ಯ ಸಮಾಜದ ಕಟ್ಟಾ ಅನುಯಾಯಿಗಳಿದ್ದಂತೆ ಅವರ ತಾಯಿ ಲಿಂಗಪೂಜೆ ಜಂಗಮ ದಾಸೋಹವಿಲ್ಲದೆ ಬಾಯಿಯಲ್ಲಿ ನೀರನ್ನು ಹಾಕಿಕೊಳ್ಳದ ಶರಣೆಯಾಗಿದ್ದರು. ಹೀಗೆ ಮನೆಯಲ್ಲಿಯೇ ಉಚ್ಚ ಜೀವನದ ಸಂಸ್ಕಾರಗಳನ್ನು ತಮ್ಮ ತಂದೆ ತಾಯಿಗಳಿಂದ ಬಳುವಳಿಯಾಗಿ ಪಡೆದರು.

ವೀರಭದ್ರಪ್ಪನವರ ಮನೆ ಎಂದರೆ ಚಿಟಗುಪ್ಪದ ಅರ್ಯ ಸಮಾಜಾದ ಕೇಂದ್ರವಾಗಿತ್ತು. ಅವರ ಮನೆ ಗೆ ಆಗಾಗ ಬರುತ್ತಿದ್ದ ಸ್ವಾತಂತ್ರ ಯೋಧರಾದ ರಾಮಚಂದ್ರ ದೆಹೆಲ್ವಿ, ಹಾಗೂ ಹಳ್ಳಿಖೇಡಿನ ಬನ್ಸಿಲಾಲ ತಮ್ಮ ಶಾಮಲಾಲ ಇವರ ಚರ್ಚೆ ಮಾತುಗಳಿಂದ ಪೂರ್ತಿಪ್ರಭಾವಿತರಾದ ಬಿಡಪನವರು ಚಿಕ್ಕಂದಿನಿಂದಲೆ ರಾಷ್ಟ್ರಿಯತೆಯ ಭಾವನೆಯನ್ನು ಬೆಳೆಸಿಕೊಂಡವರು.

ಅರ್.ವಿ. ಬಿಡಪನವರು ಮಾಧ್ಯಮಿಕ ಶಿಕ್ಷಣವನ್ನು ಚಿಟಗುಪ್ಪದಲ್ಲಿಯೇ ಮುಗಿಸಿಕೊಂಡು, ಹೈಸ್ಕೂಲ ಶಿಕ್ಷಣವನ್ನು ಎನ್.ವಿ. ಹೈಸ್ಕೂಲ ಗುಲಬರ್ಗಾದಲ್ಲಿ

ಮುಗಿಸಿದಂತೆ, ಕಾಲೇಜು ಶಿಕ್ಷಣವನ್ನು ಅಲಿಘಡ ವಿಶ್ವ ವಿದ್ಯಾಲಯದಲ್ಲಿ ಮುಗಿಸಿದರು. ಮುಂದೆ ೧೯೪೦ ರಲ್ಲಿ ಸೋಲಾಪೂರದಲ್ಲಿ ಎಂ.ಎಸ್. ಅಣೆಯವರ ಅಧ್ಯಕ್ಷತೆಯಲ್ಲಿ ಆರ್ಯ ಸಮಾಜದ ಸಮ್ಮೇಳನದಲ್ಲಿ ಭಾಗವಹಿಸಿದರು. ಈ ಘಟನೆ ಅವರನ್ನು ಸ್ವಾತಂತ್ರ ಸಂಗ್ರಾಮದಲ್ಲಿ ನೇರವಾಗಿ ಧುಮುಕುವಂತೆ ಮಾಡಿತು. ಪುಣೆಯಲ್ಲಿ ಅವರು ಕಾನೂನು ವಿಧ್ಯಾಭ್ಯಾಸ ಮಾಡುತ್ತಿದ್ದಾಗ 'ಚಲೇಜಾವ ಚಳುವಳಿಯ' ಅಂಗವಾಗಿದ್ದ ವಿದ್ಯಾರ್ಥಿಗಳ ಮೆರವಣಿಗೆ ಮಾಡಿದಕ್ಕಾಗಿ ಲಾಠಿ ಚಾರ್ಜ ಎದುರಿಸಿದರು. ಗುಂಡಿನೆಂಟು ಸ್ವಲ್ಪದರಲ್ಲಿಯೇ ತಪ್ಪಿ ಅವರ ಬಲಗೈಯಿಂದೆ ಇಂಚಿನಲ್ಲಿ ಸಿಡಿದು ಹೋಯಿತು,. ಕೇಶವರಾವ ಪವಾರರು ಅವರ ಸಹಚರರಾಗಿದ್ದರು. ಆರ್.ವಿ. ಬಿಡಪನವರಿಗೆ ಯರವಾಡಾ ಜೈಲಿನಲ್ಲಿಟ್ಟಿದರು. ಕಾನೂನು ಶಿಕ್ಷಣ ಮುಗಿಸಿ ಹೈದ್ರಾಬಾದಿನಲ್ಲಿ ವಕೀಲ ವೃತ್ತಿ ಕೈಗೊಂಡಾಗ ಜೈಪ್ರಕಾಶ ನಾರಾಯಣರ ಅನುಯಾಯಿಗಳಾಗಿ ರಾಷ್ಟ್ರಮಟ್ಟದ ಸಮಾಜವಾದಿ ಧುರೀಣರಲ್ಲಿ ಒಬ್ಬರಾಗಿದ್ದರು.

೦೭ ನೇ ಅಗಸ್ಟ್ ೧೯೪೭ ರಂದು ರಮಾನಂದ ತೀರ್ಥರ ನೇತೃತ್ವದಲ್ಲಿ ಹೈದ್ರಾಬಾದ ರಾಜ್ಯದಲ್ಲಿ ಹೈದ್ರಾಬಾದ ರಾಜ್ಯದಲ್ಲಿ ಅಸಹಕಾರ ಚಳುವಳಿ ಪ್ರಾರಂಭವಾದಾಗ ಆರ್.ವಿ. ಬಿಡಪನವರು ಹೈದ್ರಾಬಾದ ಕರ್ನಾಟಕ ಮೂರು ಜಿಲ್ಲೆಗಳಲ್ಲಿ ಅಸಹಕಾರ ಚಳುವಳಿಯ ಧುರೀಣತ್ವ ವಹಿಸಿದರು. ರಾಯಚೂರು ಜಿಲ್ಲೆಯ ಕುಷ್ಠಗಿ ತಾಲ್ಲೂಕಿನ ಇಟಗಿ, ಕುರುಬನಾಳ, ಜಾಲಿಹಾಳ, ಮುಲ್ಲಗಿ, ಶಾಂತಗಿರಿ, ಬಲಗೋಲ, ವಾಣಿಗನೂರು, ಕುಟುಂಟೆ, ಚಿಕ್ಕಲಗುಡಿ, ಹಿರೆಯಲ್ಲಿಗುಡಿ, ಬೋಮಸಾಗರ, ಸರಜಾಪೂರ, ಗುಡ್ಡದಮಲ್ಲಾಪುರ ಈ ೧೩ ಹಳ್ಳಿಗಳು ಆರ್.ವಿ. ಬಿಡಪನವರ ನೇತೃತ್ವದಲ್ಲಿ ಸ್ವತಂತ್ರವಾದವೆಂದು ಘೋಷಿಸಿದರು. ಈ ೧೩ ಹಳ್ಳಿಗಳು ಪೊಲೀಸ ಕಾರ್ಯಾಚರಣೆಯ ಮೊದಲೇ ಸ್ವತಂತ್ರವಾಗಿದ್ದವು. ಈ ರೀತಿ ಬಿಡಪನವರು ರಜಾಕಾರರ ವಿರುದ್ಧ ನಿಜಾಮ ಸರಕಾರದ ವಿರುದ್ಧ ಜನಸಂಘಟನೆಯ ನಾಯಕತ್ವವನ್ನು ಸಮರ್ಥವಾಗಿ ವಹಿಸಿದರು. ಅವರು ಸುಮಾರು ೪೦ ವರ್ಷ ಕಾಲ ಕೆ.ಆರ್.ಇ. ಸೊಸೈಟಿಯ ಅಧ್ಯಕ್ಷರಾಗಿದ್ದು, ಅವರೊಬ್ಬ ತತ್ವನಿಷ್ಠ ರಾಜಕಾರಣಿಯಾಗಿ ಆದರ್ಶ ವ್ಯಕ್ತಿಎನಿಸಿಕೊಂಡಿದ್ದಾರೆ.

- **ಭಾಯಿ ಬನ್ಸಿಲಾಲ**

ಹೈದ್ರಾಬಾದ ರಾಜ್ಯದಲ್ಲಿ ರಜಾಕಾರರ ಅತ್ಯಾಚಾರಗಳು ಪರಾಕಾಷ್ಠೆಯ ಸೀಮೆಯನ್ನು ಮುಟ್ಟಿದಾಗ ಜನಸಾಮಾನ್ಯರು ಕೊಡುತ್ತಿದ್ದ ಕಷ್ಟಪರಂಪರೆಯನ್ನು ವಕೀಲರಾದ ಬನ್ಸಿಲಾಲ, ಸರದಾರ ವಲ್ಲಭಾಯಿ ಪಟೇಲರ ಮುಂದೆ ಮಂಡಿಸಿದರು. ಬನ್ಸಿಲಾಲರು ಸಾಮಾನ್ಯ ವ್ಯಕ್ತಿಗಳಾಗಿರದೇ ಮಹಾನ ಶಕ್ತಿಯಾಗಿದ್ದರು. ಅವರ ಜನ್ಮ

ಭಾಲ್ಕಿ ನಗರದಲ್ಲಾಯಿತು. ಅವರ ತಂದೆ ಭೋಲಾ ಪ್ರಸಾದ ತಾಯಿ ಭಟುಬಾಯಿ. ಅವರಷ್ಟೆ ಧೈರ್ಯಶಾಲಿಗಳಾದರು ಇವರ ಸೋದರ ಶಾಮಲಾಲರು ಇವರಿಬ್ಬರ ಜೋಡಿಯು ಬೀದರ ಜಿಲ್ಲೆಯಲ್ಲಿ ನಡೆದ ಆರ್ಯ ಸಮಾಜದ ಅಪೂರ್ವ ಕ್ರಾಂತಿಗೆ ಕಾರಣವಾಯಿತು. ಇವರ ಪತ್ನಿ ವೀರಮಹಿಳೆ ವಿದ್ಯಾವತಿ ದೇವಿಯವರು. ಬನ್ಸಿಲಾಲ್, ಶಾಮಲಾಲ್ ವಕೀಲರು ತಮ್ಮ ಮಾವಂದಿರಾದ ಗೋಕುಲದಾಸಜಿ ಅವರ ಆರ್ಯ ಸಮಾಜದ ಜ್ಯೋತಿಯನ್ನು ಹೊತ್ತಿಸಿದರು. ೧೯೨೭-೨೮ ರಲ್ಲಿ ವಿನಾಯಕರಾವ ಸಾವರಕರ್‌ರರು ಅಣ್ಣ ಗಣೇಶ ದಾಮೋದರ ಮಾಣಿಕನಗರಕ್ಕೆ ಬಂದಿದರು. ಅವರ ಭಾಷಣಗಳು ಯುವಕರನ್ನು ಆಕರ್ಷಿಸಿದವು. ಅವರ ಜೊತೆಗೆ ಬನ್ಸಿಲಾಲರು ಆರ್ಯ ಸಮಾಜದ ಸಿದ್ಧಾಂತಗಳ ಬಗ್ಗೆ ಚರ್ಚೆ ನಡೆಸಿದರು. ಬಿಡುವಿನ ವೇಳೆಯಲ್ಲಿ ಹಳ್ಳಿ ಪಟ್ಟಣಗಳಿಗೆ ಹೋಗಿ ಭಾಷಣಗಳ ಹಾಗೂ ಚರ್ಚೆಗಳ ಮೂಲಕ ಆರ್ಯಸಮಾಜದ ಪ್ರಚಾರ ಮಾಡುತ್ತಿದ್ದರು. ಅವರು ಧರಿಸುತ್ತಿದ್ದ ಖಾದಿ ಬಟ್ಟೆ ತಲೆಯಮೇಲೊಂದು ಚಿಕ್ಕ ರುಮಾಲು ರಿವಾಲ್ವರ ಸಹಿತ ಸೈಕಲ್ ಮೇಲೆ ಹತ್ತಿ ಪ್ರಚಾರಕ್ಕೆ ಹೋಗುತ್ತಿದ್ದರು. ಹಳ್ಳಿಖೇಡದಲ್ಲಿ ಒಮ್ಮೆ ಆರ್ಯ ಸಮಾಜದ ಉತ್ಸವ ನಡೆಯುತ್ತಿದ್ದಾಗ ನಿಜಾಮ ಸರ್ಕಾರ ಇವರನ್ನು ಬಂಧಿಸಿತು. ಬನ್ಸಿಲಾಲರು ಅಂತರಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಿದರು. ಅಲ್ಲದೇ ತಮ್ಮ ವಿವಾಹದ ಕಾಲಕ್ಕೆ ಯಾವ ಪುರೋಹಿತರು ಸಿಗದೇ ಹೋದಾಗ ಸ್ವತಹ ತಾವೆ ಪುರೋಹಿತರಾಗಿ ತಮ್ಮ ವಿವಾಹ ಮಾಡಿಕೊಂಡರು. ಭಾಯಿ ಬನ್ಸಿಲಾಲ ಹಾಗೂ ಶಾಮಲಾಲರು ಬೀದರ ಜಿಲ್ಲೆಯ ಆರ್ಯಸಮಾಜದ ಎರಡು ಕಣ್ಣುಗಳಾಗಿದ್ದರು. ತಮ್ಮ ಸೋದರ ಶಾಮಲಾಲರಿಗೆ ಬೀದರ ಜೈಲಿನಲ್ಲಿ ವಿಷ ಕೊಟ್ಟು ಕೊಂದಿದಾಗ ಬಹಳ ದುಃಖಿತಪ್ತರಾದರು. ಆದರೆ ಕರ್ತವ್ಯದಿಂದ ವಿಮುಖರಾಗಲಿಲ್ಲ. ಅವರು ಬಾರ್ಸಿ ನಗರದಿಂದ ಅಹಮದ್ ನಗರಕ್ಕೆ ಹೋಗುತ್ತಿದ್ದಾಗ ಪ್ಲೇಗ ರೋಗ ಅಂಟಿಕೊಂಡು ಮರಣಹೊಂದಿದರು. ಆದರೆ ತಮ್ಮ ನಿಸ್ವಾರ್ಥ ಸೇವೆಯ ಮೂಲಕ ಅವರು ಅಜರಾಮರರಾಗಿ ಉಳಿದಿದ್ದಾರೆ.

- **ಭಾಯಿ ಶಾಮಲಾಲಜಿ**

ಹಳ್ಳಿಖೇಡ (ಬಿ) ಗ್ರಾಮದಿಂದ ಕ್ರಾಂತಿ ಭೂಮಿ ದೇಶ ಭಕ್ತಿಬಿಡು ಹಾಗೂ ಹೈದ್ರಾಬಾದ ರಾಜ್ಯದ ಬೀದರ ಜಿಲ್ಲೆಯ ಪ್ರಸಿದ್ಧ ತಾಲ್ಲೂಕು ಆದ ಉದಗೀರಕ್ಕೆ ೧೯೨೧ ರ ಸುಮಾರಿಗೆ ಭಾಯಿ ಶಾಮಲಾಲಜಿ ಆಗಮಿಸಿ ೧೯೨೪ ರಲ್ಲಿ ಆರ್ಯ ಸಮಾಜದ ಸ್ಥಾಪನೆ ಮಾಡಿದರು. ನಿಜಾಮ ಸರ್ಕಾರದ ದೌರ್ಬಲ್ಯದಿಂದಾಗಿ ಉದಗೀರದಲ್ಲಿ ನಡೆಯುವ ಆಕ್ರಮಣ, ಬಲತ್ಕಾರ, ಮತಾಂತರಗೊಳಿಸುವುದು ಆಗಾಗ ತಲೆ ಎತ್ತುತ್ತಿದ್ದರು. ಶಾಮಲಾಜಿಯವರ ಪ್ರಯತ್ನದಿಂದ ಶುದ್ಧಿಗೊಳಿಸುವ

ಕಾರ್ಯವು ಆಗುತ್ತಿತ್ತು. ಯುವಕರನ್ನು ಸಂಘಟಿಸಿ ಪಡೆ ಸಜ್ಜುಗೊಳಿಸುವುದಕ್ಕಾಗಿ ವ್ಯಾಯಾಮ ಶಾಲೆಯ ನಿರ್ಮಾಣ, ಲಾಠಿ, ಕುಸ್ತಿಯಲ್ಲಿ ತಮ್ಮ ಆಯುಧ ಉಪಯೋಗಿಸಲು ತರಬೇತಿ ಕೊಟ್ಟು ದೇಶ ಸೇವೆಗೆ ತರುಣ ಸೈನಿಕರನ್ನು ಸ್ವಯಂ ಸೇವಕರನ್ನು ತಯಾರಿಸಿದರು. ಶಾಮಲಾಲಜಿ, ಬನ್ಸಿಲಾಲಜಿ, ಸಂಗ್ರಾಮಪ್ಪಾ ಶೆಟಗಾರ, ಮೊದಲಾದ ಕಾರ್ಯಕರ್ತರು ಒಂದಾಗಿ ಜನರನ್ನು ಸಜ್ಜುಗೊಳಿಸುತ್ತಿದ್ದರು.

ನಿಜಾಮ ಸರಕಾರವು ಈ ಕಾರ್ಯಕರ್ತರನ್ನು ಸಂಶಯ ದೃಷ್ಟಿಯಿಂದ ಕಾಣುತ್ತಿತ್ತು. ಏನಾದರೂ ನೆಪವೊಡ್ಡಿ ಮೊಕ್ಕದ್ದಮೆ ಹೂಡುತ್ತಿತ್ತು. ಗುಪ್ತಚಾರರು ಆಗಾಗ್ಯೆ ಉದಗೀರದಲ್ಲಿ ಬಂದು ಆ ರೀತಿ ವರದಿಯನ್ನು ಸರಕಾರಕ್ಕೆ ಸಾದರ ಪಡಿಸುತ್ತಿದ್ದರು. ಶಾಮಲಾಲಜಿಯ ಸಂಘಟನೆ ಸರಕಾರಕ್ಕೆ ನುಂಗಲಾರದ ತುತ್ತಾಗಿತ್ತು. ೧೯೩೮ ರಂದು ಉದಗೀರನಲ್ಲಿ ಎಲ್ಲಾ ಹಿಂದುಗಳು ಶಾಮಜಿಯವರ ನೇತೃತ್ವದಲ್ಲಿ ದಸರಾ ಮೆರವಣಿಗೆ ತೆಗೆದಾಗ ರಜಾಕಾರರು ಗುಂಡು ಹಾರಿಸಿದರು. ಅಲ್ಲದೇ ವೀರಭದ್ರ ಕಪ್ಪಿಕೇರಿ ಎಂಬ ತರುಣನ ರುಂಡವನ್ನು ಕತ್ತರಿಸಿ ಕೊಲೆ ಮಾಡಿದರು. ಪೊಲೀಸರು ಮಾರನೆದಿವಸ ಬಂದು ಶಾಮಲಾಲಜಿಯವರನ್ನು ಒಳಗೊಂಡಂತೆ ೧೭ ಜನರ ಮೇಲೆ ಕೇಸು ದಾಖಲಿಸಲಾಯಿತು.

ಶಾಮಲಾಲಜೀ, ಬನ್ಸಿಲಾಲಜೀ ಮೊದಲಾದವರು ಬೀದರ, ಭಾಲ್ಕಿ, ಹಳ್ಳಿಖೇಡ (ಬಿ), ಚಿಟಗುಪ್ಪ, ಹುಮನಾಬಾದ, ಲಾತೂರ, ನಿಲಂಗಾ, ಮೊದಲಾದ ಕಡೆಗಳಲ್ಲಿಯ ಆರ್ಯ ಸಂಘಟನೆಗಾಗಿ ಪ್ರಯತ್ನ ಶೀಲರಾಗಿದ್ದರು. ೧೫-೧೨-೧೯೩೮ ರಂದು ಅಪಾರ ದೇಶಾಭಿಮಾನಿ, ಹೈದ್ರಾಬಾದ ಸಂಗ್ರಾಮದ ಧೃವತಾರೆ, ಬಾಯಿ ಶಾಮಲಾಲಜಿಯವರನ್ನು ರಜಾಕಾರರು ಬೀದರ ಜೈಲಿನಲ್ಲಿ ವಿಷಹಾಕಿ ಕೊಲೆ ಮಾಡಿದರು.

- **ಶಿವಚಂದ್ರಜಿ ನೆಲ್ಲಗಿ :**

ಬೀದರ ಜಿಲ್ಲೆಯ ಸ್ವತಂತ್ರ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಿ ಜನರಲ್ಲಿ ಸಂಘಟನೆಯ ತಿಳುವಳಿಕೆ ಮಾಡಿಕೊಟ್ಟ ಹುಮನಾಬಾದದ ಹುತಾತ್ಮ ಪಂಡಿತ ಶಿವಚಂದ್ರಜೀ ನೆಲ್ಲಗಿಯವರ ಹೆಸರು ಅಜರಾಮರವಾಗಿದೆ. ಶಿವಚಂದ್ರಜೀಯವರು ೦೩-೦೩-೧೯೧೭ ರಲ್ಲಿ ಹುಮನಾಬಾದನಲ್ಲಿ ಜನಿಸಿದರು. ತಾಯಿ ಸಿದ್ಧಲಿಂಗಮ್ಮಾ ತಂದೆ ಹನುಮಂತಪ್ಪಾ. ಹೈದ್ರಾಬಾದ ನಗರದಲ್ಲಿ ಆರ್ಯ ಸಮಾಜ ಕಾರ್ಯಕ್ರಮವೊಂದರಲ್ಲಿ ಗಂಗಾಪ್ರಸಾದರೆಂಬ ಆರ್ಯ ಸಮಾಜದ ಕಾರ್ಯಕರ್ತರ ಭಾಷಣದಿಂದ ತುಂಬಾ ಪ್ರಭಾವಿತರಾಗಿ ತಮ್ಮ ಬಿ.ಎ. ತರಗತಿಗೆ

೧೯೩೦ ರಲ್ಲಿ ತಿಲಾಂಜಲಿಯನ್ನಿಟ್ಟು ಹುಮನಾಬಾದ ನಗರಕ್ಕೆ ಮರಳಿ ಆರ್ಯಸಮಾಜವನ್ನು ಸ್ಥಾಪಿಸಿದರು.

ಈಗಿನ ಲಕ್ಷ್ಮಿವೆಂಕಟೇಶ್ವರ ವಿದ್ಯಾಮಂದಿರದ ಸ್ಥಳವೇ ಹಿಂದೆ ಆರ್ಯಸಮಾಜದ ಕಾರ್ಯಕ್ಷೇತ್ರವಾಗಿತ್ತು. ಅಲ್ಲಿ ಶಿವಚಂದ್ರಜೀವಯರು ಯುವಕರಿಗೆ ಲಾಠಿ ತಿರುಗಿಸುವುದನ್ನು, ಕುಸ್ತಿಯಾಡುವುದನ್ನು ಮತ್ತು ಬಂದೂಕು ಚಲಿಸುವುದನ್ನು ಕಲಿಸುತ್ತಿದ್ದರು. ಲಕ್ಷ್ಮಣರಾವ, ರಾಮಚಂದ್ರ ವೀರಪ್ಪಾ, ಶಿವಪ್ರಸಾದ, ಪುಂಡಲಿಕರಾವ ಮುಂತಾದವರಿಗೆ ಇವರು ಹೋಮ ಹವನ, ಗಾಯತ್ರಿ ಮಂತ್ರ, ಆಸನ, ಯೋಗ ಮೊದಲಾದ ವಿದ್ಯೆಗಳನ್ನು ಹೇಳಿಕೊಡುತ್ತಿದ್ದರು. ಅಲ್ಲದೇ ಶಿವಚಂದ್ರಜೀರವರು ಹಿಂದುಳಿದ ಕೋಮಿನವರೊಂದಿಗೆ ಸಹಪಂಕ್ತಿ ಭೋಜನ ಪ್ರಾರಂಭಿಸಿದರು. ಇದರಿಂದ ಇವರ ಮನೆಯವರೆಲ್ಲರೂ ಕೋಪಗೊಂಡಿದ್ದರಿಂದ ಮನೆಯನ್ನು ತ್ಯಾಗಮಾಡಿ ಭುಜಂಗರಾವ ಎಂಬ ಮಿತ್ರರ ಮನೆಯಲ್ಲಿ ಬಾಡಿಗೆ ಉಳಿದರು. ಹಳ್ಳಿಯಿಂದ ಹಳ್ಳಿಗೆ ತಿರುಗಿ ಸುಮಾರು ೮೦-೯೦ ರ ವರೆಗೆ ಆರ್ಯ ಸಾಮಾಜದ ಕೇಂದ್ರಗಳನ್ನು ಪ್ರಾರಂಭಿಸಿದರು. ೧೯೪೨ ರಲ್ಲಿ ಹೋಳಿ ಹಬ್ಬದ ಮೆರವಣಿಗೆಯಲ್ಲಿ ರಜಾಕಾರರ ಗುಂಡಿಗೆ ಬಲಿಯಾಗಿ ವೀರಮರಣ ಹೊಂದಿದರು.

ಈ ಪ್ರಮುಖ ಸ್ವತಂತ್ರ ಹೋರಾಟಗಾರ ಜೊತೆ ಕೂಡಿಕೊಂಡು ಅವರ ಹೆಗಲಿಗೆ ಹೆಗಲು ಕೊಟ್ಟು ರಜಾಕಾರರ ವಿರುದ್ಧ ಹೋರಾಟ ಮಾಡಿದ ಇನ್ನು ಅನೇಕ ಸ್ವತಂತ್ರ ಹೋರಾಟಗಾರರಿದ್ದಾರೆ ಅವರ ಹೆಸರುಗಳು ಈ ಕೆಳಗಿನಂತಿವೆ.

೧) ಅಂಬಾದಾಸರಾವ
೨) ಅಂಬಣ್ಣಾ
೩) ಆರ್.ಸಿ. ಪಾಟೀಲ್
೪) ಇಂದ್ರಸಿಂಗ ರಜಪೂತ
೫) ಈಶ್ವರರಾವ ಮಹೇಂದ್ರಕರ್
೬) ಕಾಶಿನಾಥರಾವ ಪಾಟೀಲ್
೭) ಕಿಶನರಾವ ಚಿಟಗುಪ್ಪಿಕರ್
೮) ರಾಮಚಂದ್ರ ಬೋಡ್ಕೆ
೯) ನಾರಾಯಣ ಬೋಡ್ಕೆ
೧೦) ತುಕಾರಾಮ ನಾರಾಯಣಪೇಟ್
೧೧) ಪಂಚಾಕ್ಷರಿ ಬಂಗಿಮಠ
೧೨) ಪುಂಡಲಿಕರಾವ ಆರ್ಯ
೧೩) ಬಸವಣಪ್ಪಾ ಸೇರಿಕಾರ

೧೪) ಮಾಣಿಕರಾವ ಭಂಢಾರಿ

೧೫) ಶಿವರಾಮ ವೀರಪ್ಪಾ

೧೬) ಶರಣಪ್ಪಾ ಉಪ್ಪಿನ

೧೭) ಶತ್ರುಘನ ಪ್ರಸಾದ ದೂಬೆ

೧೮) ಸಿದ್ದಯ್ಯ ವೇದಿಕಾರ

೧೯) ಹನುಮಂತರಾವ ಆರ್ಯ.

೨೦) ಸಿದ್ರಾಮಪ್ಪಾ ಮ್ಯಾಕಲ್

ಅಧ್ಯಾಯ ೯

ಉಪಸಂಹಾರ

ಹೈದ್ರಾಬಾದ ಸಂಸ್ಥಾನದಲ್ಲಿ ರಾಜಕೀಯ ಸ್ವಾತಂತ್ರಕ್ಕಾಗಿ ಹಾಗೂ ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ನಡೆದ ಚಳುವಳಿಯ ಭಾರತದ ಉಳಿದ ಭಾಗಗಳಲ್ಲಿ ನಡೆದ ಚಳುವಳಿಗೆ ವಿಭಿನ್ನವಾದ ಎರಡು ಬಗೆಯ ಕಂಟಕಗಳನ್ನು ನಿವಾರಿಸಿಕೊಳ್ಳಬೇಕಾಗಿತ್ತು. ಇಲ್ಲಿ ಸ್ವಾತಂತ್ರ ಹೋರಾಟಗಾರರು ಎದುರಿಸಬೇಕಾಗಿದ್ದ ತತ್‌ಕ್ಷಣದ ಕಂಟಕ ಸಂಸ್ಥಾನದಲ್ಲಿದ್ದ ನಿಜಾಮನ ಆಳ್ವಿಕೆಯಾಗಿತ್ತು. ಬ್ರಿಟೀಷ ಸರ್ಕಾರದ ಅದೀನದಲ್ಲಿದ್ದ ನಿಜಾಮನು ತನ್ನ ಸಂಸ್ಥಾದಲ್ಲಿನ ಬ್ರಿಟೀಷ ವಿರೋಧಿ ಚಟುವಟಿಕೆಗಳ ಬೆಳವಣಿಗೆಯನ್ನು ಹತ್ತಿಕ್ಕಲೇಬೇಕಾಗಿತ್ತು. ಸಂಸ್ಥಾನದಲ್ಲಿ ಸ್ವಾತಂತ್ರ ಚಳುವಳಿಯನ್ನು ಬೆಳೆಯಲು ಬಿಟ್ಟರೆ ಬ್ರಿಟೀಷರು ಭಾತರ ಬಿಟ್ಟು ತೊಲಗಿದ ಮೇಲೆ ಅದು ಎಲ್ಲಿ ತನ್ನ ಆಳ್ವಿಕೆಯನ್ನು ಕಿತ್ತೊಗೆದು ಬಿಡುತ್ತದೋ ಎಂಬ ಭಯ ನಿಜಾಮನಿಗಿತ್ತು. ಹೈದ್ರಾಬಾದ ಸಂಸ್ಥಾನದಲ್ಲಿ ಸ್ವಾತಂತ್ರಕ್ಕಾಗಿ ಹೋರಾಡುತ್ತಿದ್ದ ಕಾರ್ಯಕರ್ತರೆಲ್ಲರೂ ರಜಾಕಾರರ ಮತಾಂಧತೆ ಹಾಗು ಕಮ್ಯೂನಿಷ್ಟರ ಹಾವಳಿಯಿಂದಾಗಿ ಅಸಹನೀಯವಾದ ಮಾನಸಿಕ ಯಾತನೆ ಎದುರಿಸಬೇಕಾಯಿತು. ಇದು ಸಂಸ್ಥಾನದಲ್ಲಿ ಬೇರೂರಿದ್ದ ಕೋಮು ಸ್ವರೂಪವನ್ನು ತೋರಿಸುತ್ತದೆ. ಮುಸ್ಲಿಮನಾಗಿದ್ದ ನಿಜಾಮನು ಸ್ವತಂತ್ರ ಭಾತರದ ಮಧ್ಯದಲ್ಲಿ ಸ್ವತಂತ್ರ ಮುಸ್ಲಿಂ ರಾಷ್ಟ್ರದ ಕನಸು ಕಾಣುತ್ತಿದ್ದಾಗ ಅವನ ಸಂಸ್ಥಾನದ ಪ್ರಜೆಗಳು ಬ್ರಿಟೀಷರು ತೊಲಗಿದ ಕೂಡಲೆ ಪ್ರಜಾ ಪ್ರಭುತ್ವವಾದಿ ಸರಕಾರದ ರಚನೆಗೆ ಶ್ರಮಿಸುತ್ತಿದ್ದರು. ಈ ಎರಡನೆಯ ಕಂಟಕವು ಮೊದಲನೆಯದಕ್ಕಿಂತ ಹೆಚ್ಚು ಸೂಕ್ಷ್ಮವಾಗಿತ್ತು.

ಸಂಸ್ಥಾನದಲ್ಲಿ ಸ್ವಾತಂತ್ರ ಹೋರಾಟದ ಮುಂಚೂಣಿಯಲ್ಲಿದ್ದ ನಾಯಕರು ನಿರೀಕ್ಷಿಸಿದ ರೀತಿಯಲ್ಲೇ ಧರ್ಮದ ಹೆಸರಿನಲ್ಲಿ ಹರಿಸಿದ ರಕ್ತದ ಹೊಳೆ ಹಾಗೂ ಹಿಂಸೆಯ ಮಹಾಪೂರದ ನಂತರವೇ ಅಧಿಕಾರದ ವರ್ಗಾವಣೆ ನಡೆಯಿತು. ಸಂಸ್ಥಾನದಲ್ಲಿ ಸ್ವಾತಂತ್ರದ ಚಳುವಳಿಯನ್ನು ಸಂಘಟಿಸುತ್ತಿದ್ದ ಸಾಮಾಜಿಕ ಹಾಗೂ ರಾಜಕೀಯ ಕಾರ್ಯಕರ್ತರು ಎದುರಿಸಬೇಕಾಗಿದ್ದ ಸಮಸ್ಯೆಯ ಗಂಭೀರತೆಯನ್ನು ಇದು ತೋರಿಸುತ್ತದೆ. ಇವರೆಡು ಕಾರಣಗಳಿಂದಾಗಿ ಹೈದ್ರಾಬಾದ ಸಂಸ್ಥಾನದಲ್ಲಿ ಚಳುವಳಿಯ ಸಾಮೂಹಿಕ ಸಂಘರ್ಷದ ಸ್ವರೂಪ ತಳೆಯಲು ಸುದೀರ್ಘಕಾಲ ಹಿಡಿಯಿತು.

ಎರಡನೆ ಮಹಾಯುದ್ಧದ ನಂತರ ಆರ್ಯಸಮಾಜ, ಹಿಂದುಮಹಾಸಭಾ, ನಾಗರಿಕ ಹಕ್ಕುಗಳ ಸಂಘ ಹಾಗೂ ರಾಜ್ಯ ಕಾಂಗ್ರೆಸನಂತಹ ಸಂಸ್ಥೆಗಳು ಹೈದ್ರಾಬಾದ ಸಂಸ್ಥಾನವನ್ನು ಭಾರತ ಒಕ್ಕೂಟದೊಂದಿಗೆ ವಿಲೀನಗೊಳಿಸಲು ಹಾಗೂ ರಜಾಕಾರರು

ಮತ್ತು ನಿಜಾಮನನ್ನು ಎದುರಿಸಲು ಜನರು ತ್ಯಾಗ ಬುದ್ಧಿಯಿಂದ ಹಾಗೂ ಕ್ರೀಯಾಶೀಲರಾಗಿ ತೊಡಗುವಂತೆ ಪ್ರಚೋದಿಸುತ್ತಿದ್ದವು. ಸಂಸ್ಥಾನದ ಸ್ವತಂತ್ರ ಹೋರಾಟಗಾರರ ನಿರಂತರ ಹೋರಾಟ ಹಾಗೂ ತ್ಯಾಗದಿಂದಾಗಿ ಶಾಶ್ವತವಾಗಿ ಗುಣಪಡಿಸಲಾಗದಂತಹ ಹುಣ್ಣಿನ ರೂಪದ ಪಾಕಿಸ್ತಾನದಂತಹ ಇನ್ನೊಂದು ವಿದೇಶಿರಾಷ್ಟ್ರ ಉದ್ಭವಿಸುವುದು ತಪ್ಪಿತ್ತು.

ಹೀಗೆ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ನಡೆದ ಸ್ವಾತಂತ್ರ ಚಳುವಳಿ ಹಾಗೂ ಭಾಷಾವಾರು ಪ್ರಾಂತ ರಚನೆಯ ಸಂಘರ್ಷವು ಭಾರತದ ಇತರೆ ಭಾಗಗಳಲ್ಲಿ ನಡೆದ ಚಳುವಳಿಗಿಂತ ಯಾವುದೇ ದೃಷ್ಟಿಯಿಂದಲೂ ಕಡಿಮೆಯಾಗಿರಲಿಲ್ಲ. ನಿಜಾಮನ ಸಂಸ್ಥಾನದಲ್ಲಿ ಸ್ವಾತಂತ್ರ ಚಳುವಳಿಯು ರಾಜಕೀಯ ಮುಕ್ತಗಳಿಸುವ ಸಲುವಾಗಿ ಹಾಗೂ ವಿಚ್ಛಿದ್ರಕಾರಿ ಶಕ್ತಿಯನ್ನು ದಮನ ಮಾಡುವ ಸಲುವಾಗಿ ನಡೆಯಿತು. ಹೈದ್ರಾಬಾದ ಕರ್ನಾಟಕದಲ್ಲಿ ಸ್ವಾತಂತ್ರ ಚಳುವಳಿಯು ಎರಡು ಹಂತಗಳಲ್ಲಿ ನಡೆದುದನ್ನು ನಾವು ನೋಡಬಹುದಾಗಿದೆ. ೧೯೪೮ ರ ಪೋಲೀಸ ಕಾರ್ಯಚರಣೆವರೆಗೂ ನಡೆದ ಸ್ವಾತಂತ್ರ ಹೋರಾಟದ ಸಂಘರ್ಷದ ಗಾಥೆ ಮೊದಲನೆಯ ಹಂತವಾದರೆ, ಎರಡನೆ ಹಂತ ಸ್ವಾತಂತ್ರ ಚಳುವಳಿಗಾರರು ಕೋಮುವಾದಿ ಶಕ್ತಿಯನ್ನು ಹಾಗೂ ಕಮ್ಯೂನಿಷ್ಟರ ಹಾವಳಿಯನ್ನು ಸಂಸ್ಥಾನದ ಒದ್ದೊಡಿಸಲು ನಡೆಸಿದ ಹೋರಾಟ. ಈ ದಿಶೆಯಲ್ಲಿ ೧೯೫೬ ರಲ್ಲಿ ನಡೆದ ಭಾಷಾವಾರು ಪ್ರಾಂತರಚನೆಯ ಬೆಂಬಲವಾಗಿ ಹೈದ್ರಾಬಾದ ಸಂಸ್ಥಾನವನ್ನು ವಿಭಜಿಸಲು ಚಳುವಳಿಯನ್ನು ಪ್ರಾರಂಭಿಸಲಾಯಿತು. ಈ ಪ್ರದೇಶದ ಜನತೆ ಹಾಗೂ ನಾಯಕರು ತೋರಿದ ತ್ಯಾಗ ಹಾಗೂ ಮೇರೆದ ಸಾಹಸಗಳು ಭಾರತ ಒಕ್ಕೂಟ ರಚನೆ ಮತ್ತು ಸ್ವಾತಂತ್ರ್ಯ ಚಳುವಳಿಯ ಚರಿತ್ರೆಯಲ್ಲಿ ಅವಶ್ಯಕವಾಗಿ ಉಲ್ಲೇಖಿಸಲೇಬೇಕಾದ ವಿಶಿಷ್ಟ ಪೂರ್ಣ ಸಂಗತಿಗಳಾಗಿವೆ.

ಕ್ರೂರ ದಬ್ಬಾಳಿಕೆ, ನಿಜಾಮನ ಆಶಿರ್ವಾದದಿಂದ ಕಾರ್ಯಪ್ರವೃತ್ತವಾಗಿದ್ದ ಕೋಮುವಾದಿ ಶಕ್ತಿ ಮತ್ತು ಬ್ರಿಟೀಷ ಸಾಮ್ರಾಜ್ಯಶಾಹಿಗಳೆಲ್ಲವನ್ನೂ ಎದುರು ಹಾಕಿಕೊಂಡು ಸ್ವಾತಂತ್ರ ಚಳುವಳಿಯನ್ನು ಸಂಘಟಿಸುವುದು ಸುಲಭದ ಕೆಲಸವಾಗಿರಲಿಲ್ಲ. ಭಾರತದ ಉಳಿದ ಭಾಗಗಳಲ್ಲಿ ಸ್ವಾತಂತ್ರ ಹೋರಾಟವು ಅತ್ಯಂತ ಪ್ರಗತಿಪರ ಹಾಗೂ ಉದಾರವಾದಿಯಾಗಿದ್ದ ಬ್ರಿಟೀಷ ಶಕ್ತಿಯ ವಿರುದ್ಧವಾಗಿದ್ದರೆ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಅದು ನಿಜಾಮನ ಕ್ರೂರ ಆಳ್ವಿಕೆ ಹಾಗೂ ಅಲ್ಪಸಂಖ್ಯಾತ ಪ್ರಧಾನ ಸಮುದಾಯದ ವಿರುದ್ಧವಾಗಿತ್ತು.

ಇಡೀ ಭಾರತದಲ್ಲಿನ ರಾಜ್ಯಗಳು ಮತ್ತು ಸಂಸ್ಥಾನಗಳಲ್ಲೇ ಅತ್ಯಂತ ದೊಡ್ಡದು ಹಾಗೂ ಶ್ರೀಮಂತವು ಆಗಿದ್ದ ಹೈದ್ರಾಬಾದ ಸಂಸ್ಥಾನವು ಮಧ್ಯಯುಗಿನ

ಸರ್ವಾಧಿಕಾರಿ ಸಾಮ್ರಾಜ್ಯಗಳ ಪಳೆಯುಳಿಕೆಯಂತಿತ್ತು. ಅಲ್ಲಿದ್ದ ಆಡಳಿತ ವ್ಯವಸ್ಥೆಯು ನಿರಂಕುಶ ಸಾರ್ವಭೌಮ ಸ್ವರೂಪದಾಗಿತ್ತು. ಎಲ್ಲಾ ಮಹತ್ವದ ವಿಷಯಗಳನ್ನು ಕುರಿತಂತೆ ಬ್ರಿಟೀಷ ಸರ್ಕಾರದ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದ ನಿಜಾಮನ ಸಂಸ್ಥಾನದಲ್ಲಿ ವಾಸ್ತವವಾಗಿ ದರ್ಬಾರಿನ ಕಾರ್ಯಕಾರಿ ಮಂಡಳಿಯಲ್ಲಿದ್ದ ಬೇಜವಾಬ್ದಾರಿ ನೌಕರಶಾಹಿಯು ಆಡಳಿತ ನಡೆಸುತ್ತಿತ್ತು. ಕಟ್ಟಕಡೆಯ ನಿಜಾಮನಾದ ಮೀರ ಉಸ್ಮಾನ ಅಲಿಖಾನ ಬಹಾದ್ದೂರನ ಆಳ್ವಿಕೆ ಕಾಲದಲ್ಲಿ ಹೈದ್ರಾಬಾದ ಸಾಮಾಜಿಕ ವಿಷಮತೆ, ರಾಜಕೀಯ ಅವ್ಯವಸ್ಥೆ, ಆರ್ಥಿಕ ಶೋಷಣೆ ಹಾಗೂ ಧಾರ್ಮಿಕ ಅತ್ಯಾಚಾರಗಳ ಪ್ರತಿ ಮೂರ್ತಿಯಾಗಿಬಿಟ್ಟಿತು. ಅಲ್ಲಿ ಅಭಿವ್ಯಕ್ತಿ ಸ್ವಾತಂತ್ರವಾಗಲಿ ಅಥವಾ ಸಂಘ ಕಟ್ಟಿಕೊಳ್ಳುವ ಹಕ್ಕಾಗಲಿ ಇರಲಿಲ್ಲ. ಮೂಲಭೂತ ಹಕ್ಕುಗಳನ್ನು ನಿಷೇಧಿಸಿದ್ದರಿಂದ ಜನರು ಅವುಗಳಿಂದ ವಂಚಿತರಾಗಿದ್ದರು. ಆಳವಾಗಿ ಬೇರೂರಿದ್ದ ಊಳಿಗಮಾನ್ಯ ಪದ್ದತಿ ಹಾಗೂ ಅದನ್ನು ಅವಲಂಬಿಸಿಕೊಂಡಿದ್ದ ಜನರಿಂದಾಗಿ ಪ್ರಜೆಗಳಿಗೆ ಆರ್ಥಿಕ ಸ್ವಾತಂತ್ರ ದೊರೆಯುವ ಅವಕಾಶವೇ ಇರಲಿಲ್ಲ. ಅಲ್ಪಸಂಖ್ಯಾತರು ಬಹುಸಂಖ್ಯಾತರನ್ನು ಗುಲಾಮರನ್ನಾಗಿ ಮಾಡಿಕೊಂಡಿದ್ದರು. ಸ್ವಾತಂತ್ರ ಪ್ರೇಮಿಗಳ ಹಿತಾಸಕ್ತಿಗಳನ್ನು ಬಲಿಕೊಟ್ಟು ಮುಸ್ಲಿಂ ರಾಷ್ಟ್ರ ಕಟ್ಟುವ ತಮ್ಮ ಉದ್ದೇಶಕ್ಕೆ ಅನುಗುಣವಾದ ನೀತಿಗಳನ್ನೇ ನಿಜಾಮ ಹಾಗೂ ಇತ್ತೆಹಾದಗಳು ರೂಪಿಸುತ್ತಿದ್ದವು. ಹಿಂದುಗಳಿಗೆ ನಿಜಾಮನು ಧಾರ್ಮಿಕ ಸ್ವತಂತ್ರವನ್ನು ನೀಡಿರಲಿಲ್ಲ. ಭಾರತದ ಒಕ್ಕೂಟದೊಂದಿಗೆ ಹೈದ್ರಾಬಾದ ಸಂಸ್ಥಾನ ವಿಲೀನಗೊಳ್ಳುವ ಮೊದಲು ರಜಾಕಾರರ ಚಳುವಳಿಯು ಪರಾಕಾಷ್ಟೆಯಲ್ಲಿದ್ದಾಗ ಸಂಸ್ಥಾನದ ಸಾಮಾಜಿಕ ಜೀವನವು ಕೋಮುಭಾವನೆಯಿಂದ ಮುಳುಗಿಹೋಗಿತ್ತು. ಮುಸ್ಲಿಮನಾಗಿರುವುದು ಒಂದು ಪ್ರತಿಷ್ಠೆಯಾಗಿದ್ದ ಅಂದು ಹಿಂದುಗಳಿಗಿಂತ ಉನ್ನತವಾದ ರಾಜಕೀಯ–ಸಾಮಾಜಿಕ ಸ್ಥಾನಮಾನ ಪಡೆದುಕೊಂಡಿದ್ದ ಅವರು ಶ್ರೇಷ್ಠರೆನಿಸಿಕೊಂಡಿದ್ದರು. ಹಿಂದೂಗಳು ಎರಡನೆ ದರ್ಜೆ ನಾಗರಿಕರಾಗಿ ಬದುಕುತ್ತಿದ್ದರು. ಸ್ವಾತಂತ್ರದ ಬಗ್ಗೆ ಅತಿಯಾದ ಉತ್ಸಾಹ ತೋರುತ್ತಿದ್ದ ಹಾಗೂ ಸಂವಿಧಾನಾತ್ಮಕ ಸುಧರಣೆಗಳ ಮೂಲಕ ಜನಪ್ರಿಯ ಸರಕಾರದ ರಚನೆಯನ್ನು ಒತ್ತಾಯಿಸುತ್ತಿದ್ದ ಬಹುಪಾಲು ನಾಗರಿಕರು ಅವಮಾನ ಹಾಗೂ ದಬ್ಬಾಳಿಕೆಗಳನ್ನು ಎದುರಿಸಬೇಕಾಗಿತ್ತು. ಸ್ವರಾಜ್ಯ ಸ್ಥಾಪಿಸುವ ಛಲ ಹಾಗೂ ಕೂಗನ್ನು ಹತ್ತಿಕುತ್ತಿದ್ದ ನಿಜಾಮನ ನೀತಿಗಳಿಗೆ ಬ್ರಿಟಿಷ ಸರ್ಕಾರದ ಬೆಂಬಲವಿತ್ತು.

ತಿಲಕರ ನವರಾಷ್ಟ್ರೀಯತೆಯ ಪ್ರಭಾವ, ಹರ್ಡೇಕರ್ ಮಂಜಪ್ಪನವರ ತತ್ವದರ್ಶನ, ಪಂಡಿತ ತಾರಾನಾಥರ ಉದಯ, ಗ್ರಂಥಾಲಯ ಹಾಗೂ ತರುಣ ಸಂಘಗಳ ಸ್ಥಾಪನೆ, ನಿಜಾಮ ಕರ್ನಾಟಕ ಪರಿಷತ್ ಹಾಗೂ ಹೈದ್ರಾಬಾದ ಸಂಸ್ಥಾನದ ಸಮಾವೇಶಗಳ ಚಟುವಟಿಕೆಗಳು, ಒಂದೇ ಮಾತರಂ ಚಳುವಳಿಯ

ಪರಿಣಾಮ ರಾಷ್ಟ್ರೀಯ ಪತ್ರಿಕೆಗಳ ಲೇಖನಗಳು, ಖಾಸಿಮ ರಜ್ವಿ ನೇತೃತ್ವದಲ್ಲಿ ನಡೆದ ಇತ್ತೆಹಾದನ ದಮನಕಾರಿ ಚಟುವಟಿಕೆ ಮುಂತಾದವು ಸಾಮ್ರಾಜ್ಯವಾದಿ ಹಾಗೂ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಲು ಬೇಕಾಗಿದ್ದ ರಾಜಕೀಯ ಜಾಗೃತಿ ಮೂಡಿಸುವುದರಲ್ಲಿ ಯಶಸ್ವಿಯಾದವು.

ಆರ್ಯ ಸಮಾಜದ ರಕ್ಷಣೆಯಲ್ಲಿ ಸ್ವಾತಂತ್ರ ಯೋಧರು ಎದೆಯುಬ್ಬಿಸಿಕೊಂಡು ಹವನಕುಂಡವನ್ನು ಉರಿಸುತ್ತಿದ್ದರು ಮತ್ತು ಓಂ ಧ್ವಜಗಳನ್ನು ಹಾರಿಸುತ್ತಿದ್ದರು. ಹೀಗೆ ಆರ್ಯ ಸಮಾಜದ ಕಾರ್ಯಕರ್ತರ ತ್ಯಾಗದ ಗಾಥೆಯು ಜನರಲ್ಲಿ ಧಾರ್ಮಿಕ ಭಾವನೆಯನ್ನು ಬಡಿದೆಬ್ಬಿಸಿತು. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿನ ಶೇ ೭೦ ರಷ್ಟು ಸ್ವಾತಂತ್ರ ಹೋರಾಟಗಾರರು ಆರ್ಯ ಸಮಾಜದ ಅನುಯಾಯಿಗಳಾಗಿದ್ದರು. ನಿಜಾಮನ ಕೋಮುವಾದಿ ಹಾಗೂ ಸರ್ವಾಧಿಕಾರಿ ಆಳ್ವಿಕೆ ವಿರುದ್ಧ ಸಂಘಟಿತ ಧ್ವನಿ ಎತ್ತಲು ಸ್ವಾತಂತ್ರ ಹೋರಾಟಗಾರರಿಗೆ ಬೇಕಾದ ತರಬೇತಿ ನೀಡುವ ಸಂಸ್ಥೆಯಾಗಿ ಆರ್ಯ ಸಮಾಜವು ಕೆಲಸ ಮಾಡಿತು.

ಲೋಕಮಾನ್ಯ ತಿಲಕರ 'ಸ್ವಾತಂತ್ರವು ನನ್ನ ಜನ್ಮ ಸಿದ್ಧ ಹಕ್ಕು', ಅದನ್ನು ನಾನು ಪಡೆದೇ ತೀರುತ್ತೇನೆ ಎಂಬ ವೀರ ಘೋಷಣೆಯು ಹುಮನಾಬಾದನ ನವ ತರುಣರ ಮನಸ್ಸಿನ ಮೇಲೆ ಆಳವಾದ ಪರಿಣಾಮ ಬೀರಿತು. ಸ್ವಾಭಿಮಾನ ಹಾಗೂ ಧರ್ಮವನ್ನು ರಕ್ಷಿಸಿಕೊಳ್ಳಲು ಈ ಬಗೆಯ ಉಗ್ರ ಸೈನಿಕವಾದಿ ರಾಷ್ಟ್ರೀಯತೆಯು ಅತ್ಯಂತ ಅವಶ್ಯಕವಾಗಿತ್ತು. ಮೊಗಲಾಯಿ ಅಧಿಕಾರಿಗಳ ಹಾಗೂ ರಜಾಕಾರರ ಕೈಯಿಂದ ಹಿಂದುಗಳು ಅನುಭವಿಸುತ್ತಿದ್ದ ಅವಮಾನದಿಂದಾಗಿ ಹುಮನಾಬಾದನ ನವ ತರುಣರ ಮನಸ್ಸು ಕೆರಳಿತು. ಇದರಿಂದಾಗಿ ಅವರೆಲ್ಲರೂ ತಿಲಕರ ನಾಲ್ಕು ಕಾರ್ಯಕ್ರಮಗಳಾದ ಸ್ವದೇಶಿ, ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ ಹಾಗೂ ಸ್ವರಾಜ್ಯಗಳನ್ನು ಒಪ್ಪಿಕೊಂಡು ಆಚರಣೆಗೆ ತರುವಂತೆ ಪ್ರಚೋದನೆ ಉಂಟಾಯಿತು. ಹುಮನಾಬಾದ ತಾಲ್ಲೂಕಿನ ತಿಲಕರ ಕಟ್ಟಾ ಅಭಿಮಾನಿಗಳಾದ ರಾಮಚಂದ್ರ ವೀರಪ್ಪಾ, ಲಕ್ಷ್ಮಣ ವೀರಪ್ಪಾ, ಶಿವಚಂದ್ರಜೀ ನೆಲೋಗಿ, ಹಳ್ಳಿಖೇಡದ ಬನ್ಸಿಲಾಲ ಮತ್ತು ಶಾಮಲಾಲ, ಚಿಟಗುಪ್ಪದ ಹಕೀಖತ್‌ರಾವ ಮತ್ತು ಆರ್.ವಿ. ಬಿಡಪ ಮುಂತಾದವರು ಹಿಂದುಗಳನ್ನು ಸಂಘಟಿಸಿ ಗಣಪತಿ, ದಸರಾ ಹಬ್ಬಗಳನ್ನು ಆಚರಿಸುವಂತೆ ಮಾಡಿ ಹಿಂದುಗಳನ್ನು ಒಗ್ಗೂಡಿಸಿದರು.

ಗ್ರಂಥಾಲಯ ಚಳುವಳಿಯ ಅಂಗವಾಗಿ ೧೯೩೩ ರಲ್ಲಿ ಆರ್.ವಿ. ಬಿಡಪ ಮತ್ತು ಹಕೀಖತರಾವರವರು ಚಿಟಗುಪ್ಪದಲ್ಲಿ ಸುಧಾಕರ ಸಂಘ ಗ್ರಂಥಾಲಯವನ್ನು ಪ್ರಾರಂಭಿಸಿ ಈ ಗ್ರಂಥಾಲಯದ ಮೂಲಕ ಜನರಲ್ಲಿ ರಾಷ್ಟ್ರೀಯ ಭಾವನೆಯನ್ನು ಬೆಳೆಸಿದರು.

ಹೈದ್ರಾಬಾದ ರಾಜ್ಯದ ಸ್ವಾತಂತ್ರ ಚಳುವಳಿಯ ಇತಿಹಾಸದಲ್ಲಿ ರಜಾಕಾರರು ಕೈಗೊಂಡ ಭಯೋತ್ಪದನೆ ಆಳ್ವಿಕೆಯು ಒಂದು ಹೃದಯ ವಿದ್ರಾವಕ ಹಾಗೂ ನಿರ್ಣಾಯಕ ವಿದ್ಯಮಾನವಾಗಿದೆ. ಈ ೧೯೪೬ ರಿಂದ ೧೯೪೮ ರ ಅವಧಿಯಲ್ಲಿ ನಿಜಾಮನು ಧರ್ಮ ಮತ್ತು ರಾಜಕೀಯಗಳನ್ನು ಒಂದರೊಡನೊಂದು ಬೆರೆಸಿ ಇತ್ತೆಹಾದ್-ಉಲ್-ಮುಸ್ಲಿಂಗೆ ಎಲ್ಲಾ ಪ್ರೋತ್ಸಾಹ ನೀಡಿದನು. ಆಜಾದ ಹೈದ್ರಾಬಾದನ ಹಿತಾಸಕ್ತಿಯನ್ನು ರಕ್ಷಿಸುವ ಸಲುವಾಗಿ, ರಾಷ್ಟ್ರೀಯ ಚಳುವಳಿಯನ್ನು ಹತ್ತಿಕ್ಕಲು ಮತ್ತು ಹಿಂದುಗಳನ್ನು ಮುಸ್ಲಿಂ ಪಂಥಕ್ಕೆ ಮತಾಂತರಿಸುವ ಉದ್ದೇಶದಿಂದ ಖಾಸಿಂ ರಜ್ವಿಯ ನೇತೃತ್ವದಲ್ಲಿ ರಜಾಕಾರರು ಹುಮನಾಬಾದನ ಪ್ರತಿಯೊಂದು ಗ್ರಾಮಗಳಲ್ಲಿ ಮುಗ್ದ ಶಾಂತಪ್ರಿಯ ಜನಗಳ ಮೇಲೆ ಎಲ್ಲಾ ವಿಧವಾದ ದೌರ್ಜನ್ಯವೆಸಗಿದರು. ದೆಹಲಿಯ ಕೆಂಪು ಕೋಟೆ ಮೇಲೆ 'ಆಸಪ್‌ಜಹಾ' ಧ್ವಜವನ್ನು ಹಾರಿಸುವ ಮಹತ್ವಕಾಂಕ್ಷೆ ಖಾಸಿಂ ರಜ್ವಿಗಿತ್ತು. ನಮ್ಮ ಅನ್ವೇಷಣೆಯಿಂದ ತಿಳಿದುಬರುವುದೆನೆಂದರೆ ಉಗ್ರವಾದಿ ಸ್ವಾತಂತ್ರ ಹೋರಾಟಗಾರರು ರಾಷ್ಟ್ರೀಯವಾದಿಗಳನ್ನು ಒಂದು ದೊಡ್ಡ ಶಕ್ತಿಯಾಗಿ ಸಂಘಟಿಸಿದರು. ರಜಾಕಾರರ ಹಾವಳಿಯನ್ನು ಎದುರಿಸಲು ರಾಜ್ಯದ ಹೊರಗಿನಿಂದ ಮತ್ತು ಒಳಗಿನಿಂದ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದರು. ಈ ೧೯೪೭-೪೮ ರ ಅವಧಿಯಲ್ಲಿ ರಜಾಕಾರರು ಮತ್ತು ಸ್ವಾತಂತ್ರ ಹೋರಾಟಗಾರರ ನಡುವೆ ನಡೆದ ಹೋರಾಟದಿಂದ ನಿಜಾಮ ಸಂಸ್ಥಾನವು ೧೯೪೭-೪೮ ರ ಅವಧಿಯಲ್ಲಿ ಕ್ರೂರ ಆಳ್ವಿಕೆಯನ್ನು ಅನುಭವಿಸಿತು ಎಂಬುದು ತಿಳಿದುಬರುತ್ತದೆ.

ಹೈದ್ರಾಬಾದ ಕರ್ನಾಟಕ ಜನತೆಯ ಸಮಸ್ಯೆಗಳು ಹೈದ್ರಾಬಾದ ಸಂಸ್ಥಾನವನ್ನು ಭಾರತದ ಗಣರಾಜ್ಯದೊಂದಿಗೆ ವಿಲೀನಗೊಳಿಸಿದ್ದರಿಂದ ಪರಿಹಾರವಾಗಲಿಲ್ಲ. ಮುಸ್ಲಿಂ ಸರ್ವಾಧಿಕಾರಿ ಆಳ್ವಿಕೆಯಿಂದ ಸ್ವತಂತ್ರ ಗಳಿಸುವ ಪ್ರಶ್ನೆಯು ಕರ್ನಾಟಕ ಪ್ರಾರಂತದಲ್ಲಿ ತಮ್ಮದೇ ಆದ ಸ್ಥಾನ ಪಡೆಯಬೇಕೆಂಬ ಕನ್ನಡಿಗರ ಪ್ರಶ್ನೆಯ ಮುಂದೆ ಅಪ್ರಧಾನವಾಗಿತ್ತು. ತಮ್ಮ ರಕ್ತ ಸಂಬಂಧಿ ಬಂಧು ಬಾಂಧವರನ್ನು ಸೇರಿಕೊಳ್ಳುವವರೆಗೆ, ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳುವ ಸ್ವಾತಂತ್ರ ದೊರೆಯುವವರೆಗೆ ಕನ್ನಡಿಗರಿಗೆ ನೆಮ್ಮದಿ ಎಂಬುದು ಸಾಧ್ಯವಿರಲಿಲ್ಲ. ಇದರ ಪರಿಣಾಮವಾಗಿ ನಿಜಾಮ ಕರ್ನಾಟಕ ಪರಿಷತ್ ತಮ್ಮ ಸಾಂಸ್ಕೃತಿಯ ವಿಶಿಷ್ಟತೆಯನ್ನು ಕಳೆದುಕೊಳ್ಳುತ್ತಿದ್ದ ಬೀದರ, ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳ ಜನತೆಯು ಅಖಂಡ ಕರ್ನಾಟಕ ರಚನೆಗೆ ಹೃತ್ಪೂರ್ವಕ ಬೆಂಬಲ ನೀಡಲು ಪ್ರೋತ್ಸಾಹನೀಡಿತು. ಗುಲಬರ್ಗಾದಲ್ಲಿ ೧೯೪೯ ರ ಮಾರ್ಚನಲ್ಲಿ ನಡೆದ ಅಖಿಲ ಕರ್ನಾಟಕ ಪರಿಷತ್‌ನ ಅಧಿವೇಶನದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶವನ್ನು

ಒಳಗೊಂಡಂತೆ ಅಖಂಡ ಕರ್ನಾಟಕ ರಚಿಸಬೇಕೆಂಬ ನಿರ್ಣಯವನ್ನು ಅಂಗೀಕರಿಸಲಾಯಿತು.

ಈ ಅಧಿವೇಶನದ ನಿರ್ಣಯದಂತೆ ಭಾಷಾವರು ಚಳುವಳಿ ರಾಜಕೀಯ ಸ್ವರೂಪ ಪಡೆದುಕೊಂಡು ಬಿಟ್ಟಿತು. ಹೈದ್ರಾಬಾದ ರಾಜ್ಯವನ್ನು ಅದರ ಅಸ್ತಿತ್ವವನ್ನು ಹಾಗೆಯೇ ಉಳಿಸಿಕೊಂಡರೆ ಕೋಮುವಾದಿ ಘರ್ಷಣೆಗಳನ್ನು ಹಾಗೂ ಆ ಮೂಲಕ ಪ್ರಜಾಪ್ರಭುತ್ವವಾದಿ ವ್ಯವಸ್ಥೆಯಲ್ಲಿನ ವಿಚ್ಛಿದ್ರಕಾರಿ ಶಕ್ತಿಗಳನ್ನು ಕೊನೆಗೊಳಿಸುವುದು ಸಾಧ್ಯವಾಗುತ್ತಿರಲಿಲ್ಲ. ದಕ್ಷಿಣ ಭಾರತದ ಮಧ್ಯದಲ್ಲೇ ಇನ್ನೊಂದು ಪಾಕಿಸ್ತಾನದ ಉದಯಕ್ಕೆ ಅದು ಕಾರಣವಾಗುತ್ತಿತ್ತು. ಈ ಅಂಶವನ್ನು ಗಮನದಲ್ಲಿಟ್ಟುಕೊಂಡೆ ಭಾಷಾವಾರು ಪ್ರಾಂತ ರಚನೆ ಒತ್ತಾಯಿಸುವ ಚಳುವಳಿಯು ಹೆಚ್ಚಿನ ತೀವ್ರತೆ ಗಳಿಸಿಕೊಂಡಿತು. ಹೈದ್ರಾಬಾದ ಕರ್ನಾಟಕದ ಜನತೆಯು ತಮ್ಮ ನಾಡನ್ನು ವಿಲೀನ ಗೊಳಿಸಿ ವಿಶಾಲ ಕರ್ನಾಟಕ ರಚನೆಗಾಗಿ ಅವಿಶ್ರಾಂತ ದುಡಿದರು. ಎರಡು ಕರ್ನಾಟಕ ತತ್ವವನ್ನು ಅವರು ತೀವ್ರವಾಗಿ ವಿರೋಧಿಸಿದರು. ನಿಜಾಮನ ಆಳ್ವಿಕೆಯಲ್ಲಿ ಸಂಪೂರ್ಣ ನಿರ್ಲಕ್ಷಕ್ಕೆ ಗುರಿಯಾಗಿದ್ದ ಕನ್ನಡಿಗರ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಪರಂಪರೆಯ ಶ್ರೀಮಂತಿಕೆಯನ್ನು ವರ್ದಿಸುವ ಸಲುವಾಗಿ, ಅದನ್ನು ರಕ್ಷಿಸುವ ಸಲುವಾಗಿ, ನಿರಂತರ ಶಾಂತಿ ಭದ್ರತೆಯನ್ನು ಗಳಿಸಿಕೊಳ್ಳುವ ಸಲುವಾಗಿ ಈ ಚಳುವಳಿ ರೂಪಗೊಂಡಿತು. ಎರಡು ಹಂತಗಳಲ್ಲಿ ನಡೆದ ಹೈದ್ರಾಬಾದ ಕರ್ನಾಟಕ ಏಕೀಕರಣ ಗಾಥೆಯು ತನ್ನದೇ ಆದ ವಿಶಿಷ್ಟ ಲಕ್ಷಣಗಳನ್ನು ಹಾಗೂ ಚಾರಿತ್ರಿಕ ಮಹತ್ವವನ್ನು ಪಡೆದಿದೆ.

"ಬಿಳಲಿ ಮೈನೆತ್ತರುಕಾರಿ
ಹೋದರೆ ಹೋಗಲಿ ತಲೆಹಾರಿ
ತಾಯ್ನಾಡಿನ ಮೇಲ್ಮೈಗೆ ಹೋಗಿ
ಸ್ವಾತಂತ್ರ್ಯದ ಸ್ವರ್ಗಕ್ಕೆ ಏರಿ"

ಸ್ವಾತಂತ್ರದ ಸ್ವರ್ಗಕ್ಕೆ ಏರಿದವರು ನಮ್ಮ ಕಣ್ಣುಮುಂದೆ ಇಲ್ಲ. ಅವರು ಮಾಡಿದ ಕಾರ್ಯವಿದೆ. ಅವರೆಲ್ಲರ ತಿಲಕ, ತ್ಯಾಗ, ಅಪ್ರತಿಮ ಬಲಿದಾನಗಳ ಫಲವಾಗಿ ನಾವು ಇಂದು ಸ್ವಾತಂತ್ರರಾಗಿದ್ದೇವೆ. ಸ್ವಾತಂತ್ರ ಭಾರತದಲ್ಲಿ ನಮಗಾಗಿ ನಮ್ಮೆಲ್ಲರಿಗಾಗಿ ಸ್ಥಾನವಿದೆ. ನಮಗಾಗಿ ಮಡಿದವರ ಸ್ಮರಣೆ ಮಾಡದಿದ್ದರೆ, ನಾವು ಬದುಕಿದ್ದು ಸಾರ್ಥಕವಾಗಲಾರದು.

ಶಬ್ದಕೋಶ :-

ಅಸಾಫ	: ಚಕ್ರವರ್ತಿ ಸಾಲೋಮನ್‌ನ ವಜೀರನ ಹೆಸರು
ದಫ್ತರ್	: ಕಡತ (ಫೈಲ್)
ದಹಿ	: ಮುಸ್ಲಿ ಸಂವತ್ಸರ ಫಸಲಿಯನ್ನು ಒಂದ ಮಾಸ
ಫರ್ಮಾನ್	: ನಿಜಾಮನ ಆಜ್ಞೆ
ಫಸಲಿ	: ಶಹಜಹಾನನು ಪ್ರಾರಂಭಿಸಿದ ಯುಗ, ನಿಜಾಮನು ಫರಮಾನುಗಳನ್ನು ಫಸಲಿ ಕ್ರಮದಲ್ಲಿ ಹೊರಡಿಸುತ್ತಿದ್ದ.
ಗಯಾರ್‌ಮೈಫುಸ್	: ರಕ್ಷಣೆ ನೀಡಲಾಗದು ಎಂಬ ಆಜ್ಞೆ
ಕಾಫಿರ್	: ಮುಸ್ಲಿಂ ಪಂಥವನ್ನು ಅನುಸರಿಸದೇ ಇರುವವರು
ಮಜ್ಲೀಸ್-ಇ-ಇತ್ತೆಹಾದ್	: ಮುಸ್ಲಿಮರ ಸಾಂಸ್ಕೃತಿಕ ಸಂಸ್ಥೆ
ಉಲ್-ಮಸ್ಲಿಮೀನ್	: ನಿಜಾಮನ ಕೃಪೆಯಲ್ಲಿ ಖಾಸಿಂ ರಜ್ವಿಯ ನೇತೃತ್ವದಲ್ಲಿ ಇದು ಮುಂದೆ ಮತಾಂಧ ಸಂಸ್ಥೆಯಾಯಿತು. ಇದರ ಉಗ್ರ ಅನುಯಾಯಿಗಳೇ ರಜಾಕಾರರು.
ದೀನದಾರ್	: ಮತಾಂತರ
ಅಡತಿ	: ದವಸಧಾನ್ಯ ಸಂಗ್ರಹಿಸುವ ಮಾರುಕಟ್ಟೆ
ಚಾವಡಿ	: ಸಾರ್ವಜನಿಕರು ಸಭೆ ಸೇರುವ ಸ್ಥಳ
ಲಾವಾರಿಸ್	: ತಂದೆ-ತಾಯಿ ಇಲ್ಲದವರನ್ನು ಲಾವಾರಿಸ ಎನ್ನುವರು.

ಗ್ರಂಥಋಣ :-

೧ ಬಿ.ಸಿ. ಮಹಾಬಲೇಶ್ವರಪ್ಪ : ಹೈದ್ರಾಬಾದ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು (೧೯೪೬ ರಿಂದ ೨೦೦೦) ಪ್ರಸಾರಂಗ ಗು.ವಿ.ವಿ. ೧೯೯೭

೨ ದಿವಾಕರ್. ಆರ್.ಆರ್. : ಕರ್ನಾಟಕ ಏಕೀಕರಣ ಕಥೆ

೩ ಮಾಯಾದೇವಿ. ಜಿ. ಮಾಲಿಪಾಟೀಲ್ : ಸೋಲರಿಯದ ಸರದಾರ ಸರಳ ಸಜ್ಜನಿಕಯೆ ಸಾಕಾರ ರಾಮಚಂದ್ರ ವೀರಪ್ಪ ಸಾತ್ವಿಕ ಪ್ರಕಾಶನ ಗುಲಬರ್ಗಾ ೨೦೦೪

೪ ಎಸ್.ಆರ್. ಮಣೂರು : ಹೈದ್ರಾಬಾದ ಕರ್ನಾಟಕ ವಿಮೋಚನೆ ಸಿದ್ಧಲಿಂಗೇಶ್ವರ ಪ್ರಕಾಶನ್ ೨೦೦೬

೫ ಬಂಡೆಪ್ಪ. ಎಸ್. ಖುಬಾ : ಧರಿನಾಡಿನ ಗಂಡುಗಲಿ ರಾಮ ಸಿದ್ಧಲಿಂಗೇಶ್ವರ ಪ್ರಕಾಶನ್ ೨೦೦೨

೬ ಮಾರಪ್ಪಾ. ಡಿ.ಪಿ. : ಗಾಂಧೀ ವಿಚಾರ ವಾಹಿನಿ (ಆರಿಸಿಕೊಂಡ ಅಣಿಮುತ್ತು) ನಂದಿಪ್ರಕಾಶನ ಬೆಂಗಳೂರು ೧೯೯೪

೭ ಶಿಂತ್ರಿ ಸರೋಜನಿ : ಭಾರತದ ಸ್ವತಂತ್ರ ಹೋರಾಟದಲ್ಲಿ ಕರ್ನಾಟಕದ ಮಹಿಳೆಯರ ಪಾತ್ರ ಪ್ರಸಾರಂಗ ಕ.ವಿ.ವಿ. ಧಾರವಾಡ ೧೯೮೬

೮ ದಿವಾಕರ. ಆರ್.ಆರ್. : ಸತ್ಯಾಗ್ರಹ ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ೧೯೮೫

೯ ಶರ್ಮಾ. ತಿ. ತಾ. : ಕರ್ನಾಟಕದಲ್ಲಿ ಸ್ವಾತಂತ್ರ ಸಂಗ್ರಾಮ ಬೆಂಗಳೂರು ಮೈಸೂರು ಸಂಸ್ಥಾನ ೧೯೫೭

೧೦ ಕಾಮತ ಸೂರ್ಯನಾಥ : ಸ್ವಾತಂತ್ರ ಸಂಗ್ರಾಮದ ಸ್ಮೃತಿಗಳು ಗೀತಾ ಬುಕ್ ಹೌಸ್, ಮೈಸೂರು ೧೯೭೪

೧೧ ಕಟ್ಪಾಡಿ ಫಕೀರ ಮಹ್ಮದ್ : ರಾಷ್ಟ್ರೀಯತೆ ಮತ್ತು ಮುಸ್ಲಿಮರು
ಕೊಟ್ಟರು ಪ್ರಕಾಶನ, ಮಂಗಳೂರು
೧೯೯೩

೧೨ ದೊರೆಸ್ವಾಮಿ. ಹೆಚ್.ಎನ್. : ಕರ್ನಾಟಕದಲ್ಲಿ ಸ್ವಾತಂತ್ರ ಸಂಗ್ರಾಮ
ಸಾಹಿತ್ಯ ಮಂದಿರ, ಬೆಂಗಳೂರು
೧೯೩೮

೧೩ ಪಾಟೀಲ್. ಎನ್.ಎ. : ಕರ್ನಾಟಕದಲ್ಲಿ ರಾಷ್ಟ್ರೀಯತೆಯ
ಉದಯ
ಧಾರವಾಡ ೧೯೩೬

೧೪ ಮುಜುಮದಾರ್. ಆರ್.ಸಿ. : ಸ್ವಾತಂತ್ರ ಚಳುವಳಿಯ ಇತಿಹಾಸ
ಸಾಹಿತ್ಯ ಪ್ರಕಾಶನ ಬೆಂಗಳೂರು
೧೯೮೨

೧೫ ಷೇಕ್ ಅಲಿ. ಬಿ. : ಕರ್ನಾಟಕ ಚರಿತ್ರೆ, ಸಂಪುಟ ೫,೬,೭
ಪ್ರಸಾರಂಗ ಕ.ವಿ.ವಿ. ಧಾರವಾಡ
೧೯೯೭

೧೬ ಹಾಲಪ್ಪ ಗ.ಸ. : ಭಾರತ ಸ್ವಾತಂತ್ರದ ಬೆಳ್ಳಿ ಚುಕ್ಕಿ
ಕರ್ನಾಟಕ ಸಾಹಿತ್ಯ ಸಂಘ
ಧಾರವಾಡ ೧೯೬೨

೧೭ ಭರತೇಶ ಗೌಡ ಶಿ. ಶಿರಿಯಪ್ಪ ಗೌಡರ : ನರಗುಂದ ತಾಲ್ಲೂಕಿನಲ್ಲಿ ಸ್ವಾತಂತ್ರ
ಚಳುವಳಿಯ ಒಂದು ಅಧ್ಯಾಯನ
ಎಂ.ಫಿಲ್ ಪ್ರಬಂಧ ಕ.ವಿ.ವಿ.
ಧಾರವಾಡ ೨೦೦೩

೧೮ ಹುಮನಾಬಾದ ತಾಲೂಕು ದರ್ಶನ : ಪ್ರಕಾಶಕರು; ಬೀದರ ಜಿಲ್ಲಾ ೭ ನೇ
ಕನ್ನಡ ಸಾಹಿತ್ಯ ಸಮ್ಮೇಳನ

೧೯ ಬೀದರ ಜಿಲ್ಲಾ ದರ್ಶನ : ಡಾ. ಜಗನ್ನಾಥ ಹೆಬ್ಬಾಳೆ

English

1] Desai P.B. : History of Karnataka
Kannada Research Institute, Dharwad 1970

2] Hallappa G.S. : History of the Freedom movement in Karnataka
Vol No. 1&2, Mysore Govt. Publications, Mysore.






3] Majumdar R.C. : History of freedom in India.
S.Chan & company, Delhi, 1967

4] Raghuvanshi : Indian national movement , Agra, 1959

ಹುಮನಾಬಾದ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರರು



















ಬೀದರ ಜಿಲ್ಲಾ ನಕ್ಷೆ



ಹುಮನಾಬಾದ ತಾಲ್ಲೂಕಾ ನಕ್ಷೆ